
ಲಂಕೇಶ್

ಜುಲೈ 1, 2009 ರೂ. 12/-

ಅಂತರಿಕ್ಷದಲ್ಲಿ ಅಮೇಧ್ಯ ಯುದ್ಧ



ಚೆಡ್ಡಿಗಳ ರಂಪಾಟ

ಇಲ್ಲಿ ತೇಪೆ ಅಲ್ಲಿ ತೋಪು!

ಮೈಸೂರು: ಮರೀಗೌಡನ ಹೆಂಗಸರ ಕಿತ್ತಾಟ

ಕುಮಾರಣ್ಣಂಗೆ ಜಯಲಕ್ಷ್ಮಿ ಕಾಟ!



ವಿಭಟ್ಟರ ಜ್ಯೋತಿಷ್ಯ ಪ್ರಸಂಗ





ಚಂಪಾ-20

ಲಾಭಕೋರತನ ಮತ್ತು ಹಂದಿಜ್ವರದ ಜಾಗತೀಕರಣ!

ವಿಶ್ವದ 'ಅರ್ಥ'ಕೋಶವನ್ನೂ ನಿಯಂತ್ರಿಸುವ ಅಮೆರಿಕನ್ನರು ಅನಿಷ್ಟಕ್ಕೆಲ್ಲಾ ಶನೀಶ್ವರ ಕಾರಣ ಎನ್ನುವಂತೆ ಜಗತ್ತನ್ನೇ ಆತಂಕಕ್ಕೆ ದೂಡಿರುವ ಹೊಸ ವೈರಸ್ ಜ್ವರಕ್ಕೆ ಹಂದಿ ಜ್ವರ ಎಂದು ಹೆಸರಿಟ್ಟಿದ್ದಾರೆ. ವಿಶ್ವವೇ ಕಂಡುಕೇಳರಿಯದಿದ್ದಂತಹ ಈ ಸರ್ವವ್ಯಾಪಿ ವ್ಯಾಧಿಗೆ (ಪ್ಯಾಂಡೆಮಿಕ್) ಅಮಾಯಕ ಹಂದಿಗಳು ಕಾರಣವೇ? ಅಥವಾ ಹಂದಿಯ ಹಿಂದೆ ಅವಿತುಕೊಳ್ಳುತ್ತಿರುವ ಮಾರ್ಕೆಟ್ ಮಂದಿ ಕಾರಣರೇ? ಇಲ್ಲವೇ ಜನರನ್ನು ಹಂದಿಗಳಂತೆ ಭಾವಿಸುವ ಅವರ ಮಾರ್ಕೆಟ್ ತಂತ್ರವೂ ಈ ಆತಂಕಕ್ಕೆ ಕಾರಣವೇ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಇಂದಿನ ಸಂದರ್ಭದಲ್ಲಿ ಅತ್ಯಂತ ಅಗತ್ಯವಾಗಿದೆ. ಏಕೆಂದರೆ ಮಾರುಕಟ್ಟೆ ಶಕ್ತಿಗಳು ಜಗತ್ತಿನ ವಿರುದ್ಧ ಹರಿಬಿಟ್ಟಿರುವ ಜಾಗತೀಕರಣವು ಇಂದು ಕಾಯಿಲೆಗಳ ಜಾಗತೀಕರಣವನ್ನೂ ಮಾಡುತ್ತಿದೆ. ಆದ್ದರಿಂದಲೇ ಇಂಥ ಜ್ವರಗಳು ಒಮ್ಮೆ ಸರ್ವವ್ಯಾಪಿ (ಪ್ಯಾಂಡೆಮಿಕ್) ಸ್ವರೂಪವನ್ನು ಪಡೆದುಕೊಂಡುಬಿಟ್ಟರೆ ಅದರ ಪ್ರಭಾವ ಹಿಂದೆಂದಿಗಿಂತಲೂ ವಿನಾಶಕಾರಿಯಾಗಿರುತ್ತದೆ.

ಹಂದಿಜ್ವರ ಎಂದು ಅಮೆರಿಕದವರು ಕರೆಯುವ ಈ ಫ್ಲೂ ಜ್ವರಕ್ಕೆ ಕಾರಣವಾಗುವ ವೈರಸ್ಸನ್ನು **H1N1** ಎಂದು ವೈದ್ಯಕೀಯ ಭಾಷೆಯಲ್ಲಿ ಗುರುತಿಸಲಾಗುತ್ತದೆ. ಇದು ಹಂದಿಗಳಿಗೆ ಬಹು ಬೇಗ ತಗಲುತ್ತಾದರೂ ಅದನ್ನು ಬೆಳೆಸುವ ಅಥವಾ ಅದರ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವ ಮನುಷ್ಯರಿಗೂ ಅದು ಸುಲಭವಾಗಿ ಅಂಟಿಕೊಳ್ಳುತ್ತದೆ. ಒಮ್ಮೆ ಮನುಷ್ಯರಿಗೆ ತಗುಲಿದ ಮೇಲೆ ಅದು ಮನುಷ್ಯರಿಂದ ಮನುಷ್ಯರಿಗೆ ಕೆಮ್ಮು, ಸೀನು ಇವುಗಳ ಮೂಲಕ ಹರಡುತ್ತಾ ಹೋಗುತ್ತದೆ. ಜಗತ್ತು ಈಗಿನಷ್ಟು ಸಣ್ಣದಾಗಿಲ್ಲದಿರುವಾಗಲೇ ಸ್ಫೋಟಗೊಂಡ ಈ **H1N1** ಫ್ಲೂ ನಿಂದಾಗಿ **1918**ರಲ್ಲಿ ಜಗತ್ತಿನಾದ್ಯಂತ ಅಂದಾಜು ಒಂದು ಕೋಟಿಗೂ ಹೆಚ್ಚು ಜನ ಸತ್ತರಂತೆ! ಆಗ ನಡೆಯುತ್ತಿದ್ದ ಮೊದಲನೇ ಮಹಾಯುದ್ಧದಿಂದಾಗಿಯೂ ಈ ಜ್ವರ ಅತ್ಯಂತ ವ್ಯಾಪಕವಾಗಿ ಹರಡಿದ್ದು ನಿಜವಾದರೂ ಈ ಸಾಂಕ್ರಾಮಿಕ ವ್ಯಾಧಿ ಹೆಚ್ಚೂಕಡಿಮೆ ಯುದ್ಧ ಬಲಿ ತೆಗೆದುಕೊಂಡಷ್ಟೇ ಜನರನ್ನು ಬಲಿ ತೆಗೆದುಕೊಂಡಿತು!

ಈಗ ಜಗತ್ತು ಕಿರಿದಾಗಿದೆ. ಮೊನ್ನೆಮೊನ್ನೆಯಷ್ಟೇ ಮೆಕ್ಸಿಕೋದ ಎಡ್ಗರ್ ಹರ್ನಾಂಡೀಜ್ ಎಂಬ ಬಾಲಕನಲ್ಲಿ ಕಾಣಿಸಿಕೊಂಡ ಈ ಫ್ಲೂ ಜ್ವರ ಎರಡು ತಿಂಗಳಲ್ಲಿ **74** ದೇಶಗಳ **35000** ಜನರಿಗೆ ಅಂಟಿಕೊಂಡಿದೆ. ಈಗಾಗಲೇ **163** ಜನರು ಈ ಜ್ವರಕ್ಕೆ ಬಲಿಯಾಗಿದ್ದಾರೆ. **1918**ರಲ್ಲಿ ಆ ಪ್ರಮಾಣದ ಮಾರಣಹೋಮವಾಗಲು ಕಾರಣ ಈ ಫ್ಲೂ ಜ್ವರ ಸ್ಫೋಟಗೊಂಡಿದ್ದು ಯೂರೋಪಿನ ಮಳೆ ಮತ್ತು ಚಳಿಗಾಲದಲ್ಲಿ! ಈಗಲೂ ಜಗತ್ತು ಮತ್ತು ಭಾರತ ಮಳೆಗಾಲಕ್ಕೆ ಕಾಲಿಡುತ್ತಿದೆ. ನಂತರ ಕಾದಿದೆ ಚಳಿಗಾಲ! ಹೀಗಾಗಿ ನಿಜವಾದ ಅಪಾಯ ಮುಂದೆ ಕಾದಿದೆ. ಅದಕ್ಕೆ ನಾವು ಸಿದ್ಧವಿದ್ದೇವೆಯೇ? ಭಾರತ ಸರ್ಕಾರ ಮತ್ತು ವಿಶ್ವ ಆರೋಗ್ಯ ಸಂಸ್ಥೆ ನಾವು ಸಿದ್ಧವಿದ್ದೇವೆ ಎಂದು ಹೇಳುತ್ತಿವೆ. ಆದರೆ ಈ 'ನಾವು'ವಿನಲ್ಲಿ ಜಗತ್ತಿನ ಶೇ.**70**ರಷ್ಟು ಬಡಜನರೂ ಇದ್ದಾರೆಯೇ?


ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಈ ಜ್ವರ ಪ್ಯಾಂಡೆಮಿಕ್ ಸ್ವರೂಪದ **6**ನೇ ಹಂತವನ್ನು ತಲುಪಿದ್ದರೂ ಅಪಾಯದ ಸಾಧ್ಯತೆ ಮಾತ್ರ 'ಮಾಡರೇಟ್' (ಸಾಧಾರಣ) ಅಂತೆ! ಏಕೆಂದರೆ ವಿಶ್ವದಲ್ಲಿ ಈವರೆಗೆ **35,000** ಜನರಿಗೆ ಸೋಂಕು ತಗುಲಿದ್ದರೂ ಸತ್ತಿರುವವರು ಕೇವಲ **163** ಜನರಂತೆ. ಹೀಗಾಗಿ ಈ ವ್ಯಾಧಿ **1918**ರ ರೀತಿ ಮಾರಣಾಂತಿಕವೇನಲ್ಲವಂತೆ! ಆದರೆ ವಿಶ್ವಸಂಸ್ಥೆಯ ಈ ಅಂಕಿಅಂಶ ನಿಜವನ್ನು ಹೇಳುತ್ತಿದೆಯೇ? ಈವರೆಗೆ ಜಗತ್ತಿನಾದ್ಯಂತ ಸೋಂಕು ತಗುಲಿರುವ **35,000** ಜನರಲ್ಲಿ **17,855** ಜನ ಅಮೆರಿಕನ್ನರು. ಅವರಲ್ಲಿ **45** ಜನ ಮಾತ್ರ ಸತ್ತಿದ್ದಾರೆ. ಅಮೆರಿಕದ ಮಟ್ಟಿಗೆ ಇದು ಅಂತ ಆತಂಕಕಾರಿ ಸನ್ನಿವೇಶವೇನಲ್ಲ, ಅದೇ ರೀತಿ ಕೆನಡಾದಲ್ಲಿ **2,978** ಜನರಲ್ಲಿ ನಾಲ್ವರು ಸತ್ತಿದ್ದರೆ ಆಸ್ಟ್ರೇಲಿಯಾದಲ್ಲಿ ಈವರೆಗೆ **1,823** ಜನರಿಗೆ ಸೋಂಕು ತಗುಲಿದ್ದರೂ ಒಂದು ಸಾವೂ ಸಂಭವಿಸಿಲ್ಲ, ಇಂಗ್ಲೆಂಡಿನಲ್ಲಿ ಸೋಂಕು ತಗುಲಿದ **1,289** ಜನರಲ್ಲಿ ಯಾರೂ ಸತ್ತಿಲ್ಲ. ಹೀಗಾಗಿ ರೋಗ ಹರಡುತ್ತಿದ್ದರೂ ಸಾವಿನ ಪ್ರಮಾಣ ಕಡಿಮೆ ಇರುವುದರಿಂದ ಇದು ಮಾಡರೇಟ್ ಪ್ಯಾಂಡೆಮಿಕ್ ಎಂಬುದು ಅವರ ವಾದ.

ಆದರೆ ಈ ಜ್ವರದಿಂದ ಸತ್ತವರ ಪಟ್ಟಿ ನೋಡಿ. ಈವರೆಗೆ ಸತ್ತಿರುವ **163** ಜನರಲ್ಲಿ **108** ಜನ ಮೆಕ್ಸಿಕನ್ನರೇ! ಅಷ್ಟು ಮಾತ್ರವಲ್ಲ, ಮೆಕ್ಸಿಕೋದಲ್ಲಿ **6,500** ಜನರಿಗೆ ಸೋಂಕು ತಗುಲಿದ್ದು ಅವರಲ್ಲಿ ಬಹುಪಾಲು ಜನರ ಸ್ಥಿತಿ ಆತಂಕಕಾರಿಯಾಗಿದೆ. ಏಕೆಂದರೆ ಸತ್ತ ಮತ್ತು ಆಸ್ಪತ್ರೆ


ಸ್ಮಿತ್ ಫೀಲ್ಡ್ ಹಂದಿ ಕಂಪನಿ....


ಸೇರಿರುವ ಇವರ್‍ಯಾರೂ ತಮ್ಮ ದುರ್ಬಲ ದೇಹದ ಮೇಲೆ ಮತ್ತೊಂದು ಆಕ್ರಮಣವನ್ನು ಸಹಿಸಿಕೊಳ್ಳಲು 'ಸಿದ್ಧ'ರಿಲ್ಲದವರು. ಸಾಧ್ಯವಿಲ್ಲದವರು. ಅಮೆರಿಕದಂತ ಶ್ರೀಮಂತ ರಾಷ್ಟ್ರಗಳ ಜನರಿಗೆ ಸೋಂಕು ತಗುಲಿದರೂ ಮಾರಣಾಂತಿಕವಾಗುವುದಿಲ್ಲ. ಆದರೆ ಮೆಕ್ಸಿಕೋ ಮತ್ತಿತರ ಬಡದೇಶಗಳಲ್ಲಿ ಮಾತ್ರ ಸೋಂಕು ತಗುಲಿದೊಡನೆ ಜನ ಪಟಪಟನೆ ಸಾಯುವುದೇಕೆ? ಇಂತಹುದೇ ವೈರಸ್‌ನಿಂದ ವರ್ಷದ ಹಿಂದೆ ಇಡೀ ದಕ್ಷಿಣ ಭಾರತವನ್ನು ಆವರಿಸಿಕೊಂಡ ಚಿಕನ್ ಗೂನ್ಯದಂತ ಕಾಯಿಲೆಯಿಂದ ಭಾರತದಲ್ಲೂ ನೂರಾರು ಸಾವುಗಳು ಸಂಭವಿಸಿದವು. ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರವೇ ಕರ್ನಾಟಕದ **7.5** ಲಕ್ಷ ಜನರಿಗೆ ಚಿಕನ್ ಗೂನ್ಯ ಕಾಯಿಲೆ ಬಂದಿತ್ತು. ಆದರೆ ಭಾರತದಲ್ಲೂ ಈವರೆಗೆ ಹಂದಿಜ್ವರಕ್ಕೆ ತುತ್ತಾಗಿರುವವರ ಪರಿಸ್ಥಿತಿಯೇನೂ ಆತಂಕಕಾರಿಯಾಗಿಲ್ಲ. ಈ ವ್ಯತ್ಯಾಸಕ್ಕೆ ಕಾರಣವೇನು?

ಮೆಕ್ಸಿಕೋದಲ್ಲಿ ಹಂದಿಜ್ವರದಿಂದ ಸಾಯುತ್ತಿರುವವರು ಮತ್ತು ಭಾರತದಲ್ಲಿ ಚಿಕನ್ ಗೂನ್ಯದಿಂದ ಸತ್ತವರೆಲ್ಲಾ ಬಡವರು. ಜೀವನವೆಂಬುದೇ ಒಂದು ಸುದೀರ್ಘ ಕಾಯಿಲೆಯಾಗಿರುವವರು. ಬೆಂದು ಬಸವಳಿದವರು. ಸರ್ಕಾರಗಳು ಜನರ ಆರೋಗ್ಯ ಕಾಯುವ ಯೋಧನಾಗಿದ್ದಾಗ ಜನರ ದೇಹದಲ್ಲೂ ರೋಗ ನಿರೋಧಕ ಶಕ್ತಿ ಹೆಚ್ಚಿರುತ್ತಿತ್ತು. ಆದರೆ ಜಾಗತೀಕರಣ, ಖಾಸಗೀಕರಣದಿಂದಾಗಿ ಸರ್ಕಾರವೇ ಜನಾರೋಗ್ಯದ ಕೋಟೆಕೊತ್ತಲಗಳ ದಿಡ್ಡಿ ಬಾಗಿಲನ್ನು ಮಾರುಕಟ್ಟೆಯ ಲೂಟಿಗೆ ತೆರೆದಿಟ್ಟು ಕಣ್ಮರೆಯಾಗಿದೆ. ಆರೋಗ್ಯ ರಕ್ಷಣೆಯೆಂಬುದೂ ಒಂದು ಬಿಸಿನೆಸ್ ಆದ ನಂತರ ಪ್ರತಿಯೊಂದು ಕಾಯಿಲೆಯೂ ಮೆಡಿಕಲ್ ಬಹುರಾಷ್ಟ್ರೀಯ ಕಂಪನಿಗಳ ಪಾಲಿಗೆ ಒಂದು ಹೊಸ ಬಿಸಿನೆಸ್ ಆಗುತ್ತಿದೆ. ಈ ಬಿಸಿನೆಸ್ಸಿನಲ್ಲಿ ರೋಗಿಯೇ ಗ್ರಾಹಕನಾಗಿರುವುದರಿಂದ ಬಿಸಿನೆಸ್ ಲಾಭದಾಯಕವಾಗಿ ನಡೆಯಬೇಕೆಂದರೆ ಹೊಸ ಕಾಯಿಲೆಗಳು ಮತ್ತು


ಎಡ್ಗರ್ ಹರ್ನಾಂಡೀಜ್....

ಹೆಚ್ಚೆಚ್ಚು ರೋಗಿಗಳು ಮಾರುಕಟ್ಟೆಗೆ ಬರಲೇಬೇಕು. ಈ ಬಿಸಿನೆಸ್ಸಿನಲ್ಲಿ ರೋಗದ ಆತಂಕ ಹೆಚ್ಚಿದಷ್ಟೂ ಲಾಭದ ದರ ಹೆಚ್ಚುತ್ತದೆ. ಹಳೆಯ ರೋಗಕ್ಕಿಂತಲೂ ಹೊಸ ರೋಗವೇ ಹೆಚ್ಚು ಆತಂಕವನ್ನು ಸೃಷ್ಟಿಸುವುದರಿಂದ ಕಳೆದ ಐದಾರು ವರ್ಷಗಳಲ್ಲಿ ಕಂಡುಕೇಳರಿಯದ ಹಲವು ರೋಗಗಳು ಕಾಣಿಸಿಕೊಳ್ಳುತ್ತಿವೆ. ಅಥವಾ ಹಳೆಯ ರೋಗಗಳು ಹೊಸ ರೂಪದಲ್ಲಿ ಕಾಣಿಸಿಕೊಳ್ಳುತ್ತಿವೆ. ಹೀಗಾಗಿ ಈ ಕ್ಷೇತ್ರದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳು ಅಥವಾ ಅದರ ಹಿಂದಿರುವ ಅಮೆರಿಕದಂತ ಸರ್ಕಾರಗಳೇ ಈ ಬಗೆಯ ಹೊಸ ವೈರಸ್‌ಗಳನ್ನು ಸೃಷ್ಟಿಸುತ್ತಿವೆಯೇ ಎಂಬ ಪ್ರಶ್ನೆಗೆ ಅಮೆರಿಕವಾಗಲೀ, ಹಂದಿಜ್ವರಕ್ಕೆ ವ್ಯಾಕ್ಸಿನ್ ಕಂಡುಹಿಡಿಯುತ್ತಿರುವ ರೋಚ್, ಎಲಿ-ಲಿಲ್ಲಿ, ಸ್ಮಿಥ್‌ಕ್ಲೈನ್-ಬೀಚೆಮ್‌ನಂಥ ಔಷಧ ಕಂಪನಿಗಳಾಗಲೀ ಇನ್ನೂ ಸಮಾಧಾನಕರ ಉತ್ತರ ನೀಡಿಲ್ಲ.

ಅದೇನೇ ಇರಲಿ, ಹಂದಿಜ್ವರ ಜಗತ್ತಿನಾದ್ಯಂತ ಹರಡಿ ಸಾವುಗಳ ಸುದ್ದಿ ಬರುತ್ತಿದ್ದಂತೆ, ಹಂದಿಜ್ವರಕ್ಕೆ **Tami-flu** ದಂತ ಔಷಧಗಳನ್ನು ತಯಾರಿಸುತ್ತಿರುವ ರೋಚ್, ಗ್ಲಾಕ್ಸೋ, ಗಿಲಿಯಾಡ್‌ನಂತ ಬಹುರಾಷ್ಟ್ರೀಯ ಕಂಪನಿಗಳ ಶೇರು ಬೆಲೆಗಳು ಶೇ.5ಕ್ಕಿಂತಲೂ ಜಾಸ್ತಿ ಏರಿಕೆಯಾಗಿಬಿಟ್ಟಿತು. ಆರ್ಥಿಕ ಹಿಂಜರಿತದ ಕಾರಣದಿಂದ ಲಾಭದ ದರದಲ್ಲಿ ಕೊರತಾ ಅನುಭವಿಸುತ್ತಿದ್ದ ಸನೋಫಿ ಅವೆಂಟಿಸ್, ಗ್ಲಾಕ್ಸೋ ಸ್ಮಿಥ್ ಕ್ಲೈನ್ ಮತ್ತು ನೊವಾರ್ಟಿಸ್‌ನಂತ ಔಷಧ ಬಹುರಾಷ್ಟ್ರೀಯ ಕಂಪನಿಗಳಿಗೆ ಹಂದಿಜ್ವರಕ್ಕೆ ವ್ಯಾಕ್ಸಿನ್ ತಯಾರಿಸುವ ಹೆಸರಿನಲ್ಲಿ ಅಮೆರಿಕ ಸರ್ಕಾರ **1.2** ಬಿಲಿಯನ್ ಡಾಲರ್ ಸಹಾಯದ ಧನ ನೀಡುತ್ತಿದೆ. ಆದರೂ ಈ ಕಂಪನಿಗಳು ತಾವು ಕಂಡುಹಿಡಿದ ಔಷಧಿಯನ್ನು ಕಡಿಮೆ ದರದಲ್ಲೇನೂ ರೋಗಿಗಳಿಗೆ ಒದಗಿಸುವುದಿಲ್ಲ. ತಮ್ಮ ಔಷಧಿಗೆ ಅವು ಪೇಟೆಂಟ್ ಪಡೆದುಕೊಳ್ಳುವುದರಿಂದ ಆ ಔಷಧ ಮಾರುಕಟ್ಟೆಯ ಸಂಪೂರ್ಣ ಗುತ್ತೇದಾರಿಕೆ ಆ ಕಂಪನಿಯೇ ಪಡೆದುಕೊಳ್ಳುತ್ತದೆ. ಹೀಗಾಗಿ ಈ ವ್ಯಾಧಿ ಎಷ್ಟು ಹರಡುತ್ತಾ ಹೋಗುತ್ತದೆಯೋ ಅಷ್ಟು ಅದರ ಮಾರುಕಟ್ಟೆಯೂ ವಿಸ್ತರಿಸುತ್ತಾ ಹೋಗುತ್ತದೆ. ಇಂಥ ಲಾಭಕೋರ ಕಂಪನಿಗಳಿಗೆ ಸಬ್ಸಿಡಿಗಳನ್ನು ನೀಡುವ ಸರ್ಕಾರ ಜನರಿಗೆ ಔಷಧಿ ಒದಗಿಸಲು ನೀಡುತ್ತಿದ್ದ ಸಹಾಯಧನವನ್ನು ಸಂಪೂರ್ಣವಾಗಿ



ಎಲ್ಲೆಡೆ ನಿಲ್ಲಿಸಿದೆ. ಬಡವ-ಶ್ರೀಮಂತರೆನ್ನದೆ ಎಲ್ಲಾ ರೋಗಿಗಳನ್ನೂ ಈ ಔಷಧ ಕಂಪನಿಗಳ ಕಡ್ಡಾಯ ಗ್ರಾಹಕರನ್ನಾಗಿ ಮಾಡುತ್ತಿದೆ.

ಯಾರ ದೇಹದಲ್ಲಿ ಹಂದಿಜ್ವರದ ವೈರಸ್‌ಗಳನ್ನು ಪ್ರತಿರೋಧಿಸುವಷ್ಟು ರೋಗ ನಿರೋಧಕ ಶಕ್ತಿಯಿಲ್ಲವೋ ಅವರಲ್ಲಿಯೇ ಈ ರೋಗ ಮಾರಣಾಂತಿಕವಾಗುತ್ತದೆ. ಯಾರ ದೇಹ ಸರಿಯಾದ ಪೋಷಣೆ ಪಡೆದಿರುವುದಿಲ್ಲವೋ ಅವರ ದೇಹದಲ್ಲಿ ರೋಗ ನಿರೋಧಕ ಶಕ್ತಿಯೂ ಕಡಿಮೆಯಿರುತ್ತದೆ. ಹೀಗಾಗಿಯೇ ಹಂದಿಜ್ವರದ ವೈರಸ್ ದಾಳಿ ಮಾಡಿದರೂ ಚಿಕ್ಕಂದಿನಿಂದ ದ್ರಾಕ್ಷಿ, ಸೇಬು, ಮೊಟ್ಟೆ, ಹಾಲು, ಹಾರ್ಲಿಕ್ಸ್‌ಗಳ ಪೋಷಣೆ ಪಡೆದ ದೇಹಗಳು ಸುಲಭವಾಗಿ ಬಚಾವಾದರೆ ಅವನ್ನೆಲ್ಲಾ ಚಿತ್ರದಲ್ಲಿ ಮಾತ್ರ ನೋಡಿರುವ ಬಡವರು ಹಂದಿಜ್ವರಕ್ಕೆ, ಚಿಕನ್ ಗೂನ್ಯಾಕ್ಕೆ ಅಥವಾ ಇನ್ಯಾವುದೇ ಸಾಂಕ್ರಾಮಿಕಕ್ಕೆ ಸುಲಭದ ತುತ್ತಾಗುತ್ತಾರೆ. ಆದ್ದರಿಂದಲೆ ಶ್ರೀಮಂತ ದೇಶಗಳಲ್ಲಿ ಹಂದಿಜ್ವರ ಬಂದರೂ ಯಾರೂ ಸಾಯುವುದಿಲ್ಲ. ಮೆಕ್ಸಿಕೋದಂತಹ ಬಡದೇಶಗಳಲ್ಲಿ ಜನ ತರಗೆಲೆಗಳಂತೆ ತೂರಿಹೋಗುತ್ತಾರೆ.

ಭಾರತದಲ್ಲೂ ಅಮೆರಿಕದಿಂದ ಪ್ರಯಾಣ ಮಾಡಿ ಭಾರತಕ್ಕೆ ಬಂದ ಶ್ರೀಮಂತ ದೇಹಗಳಲ್ಲಿ ಹಂದಿಜ್ವರದ ವೈರಸ್‌ಗಳು ಬೀಡುಬಿಟ್ಟಿವೆ. ಆದರೆ ಒಮ್ಮೆ ಇವು ಈಗ ಹಾಲಿ ಶೆಲ್ಟರ್ ತೆಗೆದುಕೊಂಡಿರುವ ಡಾಲರ್ಸ್ ಕಾಲೋನಿಗಳನ್ನು ಬಿಟ್ಟು ಸ್ಲಂಗಳ ಕಡೆ ಪ್ರಯಾಣ ಬೆಳೆಸಿದರೆ ಭಾರತದಲ್ಲೂ ಸಾಯುವವರ ಸಂಖ್ಯೆ ಹೆಚ್ಚಾಗುತ್ತಲೇ ಹೋಗುತ್ತದೆ.

ಹೀಗಾಗಿಯೇ ಆರೋಗ್ಯ ಸೇವೆಗಳನ್ನೆಲ್ಲಾ ಖಾಸಗೀಕರಿಸಿ ಲಾಭಕೋರ ಉದ್ಯಮವಾಗಿಸಿರುವ ಸಂದರ್ಭದಲ್ಲಿ ಸಾಂಕ್ರಾಮಿಕಗಳನ್ನು ಎದುರಿಸಲು ಜನರು 'ಸಿದ್ಧ'ರಿರಲು ಸಾಧ್ಯವೇ ಇಲ್ಲ.

ಇದರಷ್ಟೇ ಮುಖ್ಯವಾದ ಮತ್ತೊಂದು ವಿಷಯ ಈ ಹಂದಿಜ್ವರದ ವೈರಸ್ ಮೆಕ್ಸಿಕೋದಲ್ಲಿ ಕಾಣಿಸಿಕೊಳ್ಳಲು ಕಾರಣವಾದ ಸಂದರ್ಭ. ಮೆಕ್ಸಿಕೋದಲ್ಲಿ ಹಂದಿಸಾಕಣೆ ಶತಮಾನಗಳಿಂದ ನಡೆದುಕೊಂಡು ಬಂದಿದ್ದರೂ ಅಲ್ಲಿ ಎಂದಿಗೂ ಹಂದಿಜ್ವರ ಕಾಲಿರಿಸಿರಲಿಲ್ಲ. ಆದರೆ **1993**ರಲ್ಲಿ ಅಮೆರಿಕ ಮತ್ತು ಮೆಕ್ಸಿಕೋ ನಡುವೆ ಮುಕ್ತ ವ್ಯಾಪಾರ ಒಪ್ಪಂದವಾಗುತ್ತಿದ್ದಂತೆ ಅಮೆರಿಕದಲ್ಲಿದ್ದ ಬಹುಪಾಲು ಮಾಲಿನ್ಯ ಉಂಟುಮಾಡುವ ಕೈಗಾರಿಕೆಗಳು ಮೆಕ್ಸಿಕೋಗೆ ಸ್ಥಳಾಂತರಿಸಲು ಪ್ರಾರಂಭಿಸಿದವು. ಅದರಲ್ಲಿ ಬಹುಮುಖ್ಯವಾದದ್ದು **Factory Farming** ಎಂದು ಕರೆಯಲ್ಪಡುವ ಮಾಂಸಾಹಾರ ಉದ್ಯಮ. ಅದರಲ್ಲೂ ಹಂದಿಮಾಂಸದ ಉದ್ಯಮ.

ಚಾರ್ವಾಕ



► ಶಿವಸುಂದರ್


ಸ್ಮಿತ್‌ಫೀಲ್ಡ್ ಕಂಪನಿಯ ಘಟಕ

1990ರ ದಶಕದಲ್ಲಿ ಪ್ರಪಂಚದಲ್ಲೇ ಅತಿ ದೊಡ್ಡ ಹಂದಿಮಾಂಸದ ಉದ್ಯಮವಾಗಿರುವ ಅಮೆರಿಕದ ವರ್ಜಿನಿಯಾದ ಸ್ಮಿಥ್‌ಫೀಲ್ಡ್ ಕಂಪನಿ ಮೆಕ್ಸಿಕೋದ ಗ್ರಾನ್ಜಾಸ್ ಕಾರೋಲ್ ಎಂಬ ಕಂಪನಿಯ ಸಹಯೋಗದೊಂದಿಗೆ ಪೂರ್ವ ಮೆಕ್ಸಿಕೋದ ವೆರಾಕ್ರುಜ್ ಪ್ರಾಂತ್ಯದ ಲಾ ಗ್ಲೋರಿಯಾ ಗ್ರಾಮದಲ್ಲಿ ಪ್ರಪಂಚದಲ್ಲೇ ಅತ್ಯಂತ ಬೃಹತ್ತಾದ ಹಂದಿಸಾಕಾಣಿಕೆ ಮತ್ತು ಹಂದಿಮಾಂಸ ಉತ್ಪಾದಿಸುವ ಘಟಕವನ್ನು ಸ್ಥಾಪಿಸಿತು. ಈ ಘಟಕದಲ್ಲಿ ವರ್ಷಕ್ಕೆ ಹತ್ತು ಲಕ್ಷ ಹಂದಿಗಳನ್ನು ಸಾಕಾಣಿಕೆ ಮಾಡಿ ಹಂದಿಮಾಂಸ ಉತ್ಪಾದಿಸಲಾಗುತ್ತಿತ್ತು.

ಆದರೆ ಮಾಂಸಾಹಾರಕ್ಕಾಗಿ ಈ ಬಗೆಯಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಪ್ರಾಣಿಸಾಕಾಣಿಕೆ ಮಾಡುವಾಗ ಹಂದಿಜ್ವರವನ್ನೂ ಒಳಗೊಂಡಂತೆ ಹಲವಾರು ಸಾಂಕ್ರಾಮಿಕ ಕಾಯಿಲೆಗಳ ಉತ್ಪತ್ತಿ ಮತ್ತು ಹರಡುವಿಕೆಯನ್ನು ತಡೆಯಲು ಹಲವಾರು ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಂಥ ಕ್ರಮಗಳಿಗೆ ತಮ್ಮ ಲಾಭದ ಒಂದು ಭಾಗವನ್ನು ಖರ್ಚು ಮಾಡಬೇಕಾಗುತ್ತದಾದ್ದರಿಂದ ಈ ಕಂಪನಿ ಅಂಥ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಈ ಹಿಂದೆಯು ಅಮೆರಿಕದ ಮಿಸಿಸಿಪ್ಪಿಯಲ್ಲಿ ಈ ಕಂಪನಿ ನದಿನೀರಿನಲ್ಲಿ ತ್ಯಾಜ್ಯ ವಸ್ತು ವಿಲೇವಾರಿ ಮಾಡಿದ್ದಕ್ಕೆ **12.6** ಮಿಲಿಯನ್ ಡಾಲರ್ ದಂಡ ಕಟ್ಟಿತ್ತು. ಆದರೆ ಮೆಕ್ಸಿಕೋದಲ್ಲಿ ಮುಕ್ತ ವ್ಯಾಪಾರ ಒಪ್ಪಂದದ ಭಾಗವಾಗಿ ಇಂಥ ಯಾವುದೇ ಪರಿಸರ ಸಂಬಂಧಿ ನಿಯಂತ್ರಣಗಳಿಲ್ಲದಿದ್ದರಿಂದ ಈ ಕಂಪನಿ ತನ್ನ ಘಟಕದಲ್ಲಿ ಯಾವುದೇ ಮುನ್ನೆಚ್ಚರಿಕೆಯನ್ನು ಅನುಸರಿಸದೇ ದುಪ್ಪಟ್ಟು ಲಾಭವನ್ನು ಮಾಡುತ್ತಿತ್ತು. ಆದರೆ **1991**ರ ನಂತರ ಈ ಬಗೆಯಲ್ಲಿ ಮಾರುಕಟ್ಟೆ ಮತ್ತು ಲಾಭದ ದುರಾಸೆಗಾಗಿ ಎಲ್ಲೆಡೆ ಬಹುದೊಡ್ಡ ಸಂಖ್ಯೆಯಲ್ಲಿ ಪ್ರಾಣಿಗಳ **Factory Farming** ನಡೆಯುತ್ತಿದಂತೆ **1918**ರ ನಂತರ ಇಲ್ಲವಾಗಿದ್ದ ಹಂದಿಜ್ವರಕ್ಕೆ ಕಾರಣವಾಗುವ **H1N1** ವೈರಸ್ ಅತಿ ವೇಗವಾಗಿ ವಿಕಸನಗೊಳ್ಳಲು ಪ್ರಾರಂಭಿಸಿದೆಯೆಂದು **2005**ರ ವೇಳೆಗೆ ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದರು. ಆದರೂ ಯಾವುದೇ ಮುನ್ನೆಚ್ಚರಿಕೆ ತೆಗೆದುಕೊಳ್ಳದ ಸ್ಮಿಥ್‌ಫಿಲ್ಡ್ ಕಂಪನಿ ಅಡೆತಡೆಯಿಲ್ಲದೆ ಅದರ ತ್ಯಾಜ್ಯಗಳನ್ನು ಪಕ್ಕದ ಹಳ್ಳಿಯಲ್ಲಿ ಪೇರಿಸಲಾರಂಭಿಸಿತು. ಇದರ ಪರಿಣಾಮವಾಗಿ ಲಾ ಗ್ಲೋರಿಯಾ ಗ್ರಾಮದ ಶೇ.**60**ರಷ್ಟು ಜನ **2009**ರ ಏಪ್ರಿಲ್‌ನಲ್ಲಿ ಅಸ್ವಸ್ಥರಾದರು. ಅದರಲ್ಲಿ ಒಬ್ಬನಾದ ಐದು ವರ್ಷದ ಎಡ್ಗರ್ ಹೆರ್ನಾಂಡೀಜ್ ಮತ್ತವನ ಕೆಲವು ಜೊತೆಗಾರರಿಗೆ **H1N1** ವೈರಸ್ಸು ಅಂಟಿಕೊಂಡಿತು. ಉಳಿದವರು ಸತ್ತುಹೋದರಾದರೂ ಈ ಹುಡುಗ ಬಚಾವಾಗಿ ಅಮೆರಿಕನ್ ಕಂಪನಿಯ ಲಾಭದ ದುರಾಸೆ ಪ್ರಪಂಚದ ಬಡಜನತೆಯನ್ನು ಹೇಗೆ ಆತಂಕಕ್ಕೆ ದೂಡಿದೆ ಎಂಬ ಕಥೆ ಹೇಳುತ್ತಿದ್ದಾನೆ.

ಎಡ್ಗರ್ ಹರ್ನಾಂಡೀಜ್

ಎಡ್ಗರ್ ಹರ್ನಾಂಡೀಜನ ದೇಹ ಹೊಕ್ಕ ಈ ವೈರಸ್ಸು ಮತ್ತೊಬ್ಬ ಮನುಷ್ಯನಿಗೆ ದಾಟುವ ವೇಳೆಗೆ ಮನುಷ್ಯನ ವೈರಸ್ಸಾಗಿಯೇ ಬದಲಾಗಿ ಬಿಟ್ಟಿದೆ. ಅದು ನಿಧಾನವಾಗಿ ಮೆಕ್ಸಿಕೋ ಮತ್ತು ಅಮೆರಿಕದ ನಡುವೆ ಓಡಾಡುವ ಜನರ ಮೂಲಕ ಅಮೆರಿಕ ತಲುಪಿ ಅಲ್ಲಿಂದ ಇಡೀ ಜಗತ್ತನ್ನೇ ಆವರಿಸಿಕೊಂಡಿದೆ. ಭಾರತದಲ್ಲೂ ಪತ್ತೆಯಾಗಿರುವ ಹಂದಿಜ್ವರ ಪೀಡಿತರಲ್ಲಿ ಶೇ.**90** ಭಾಗ ಅಮೆರಿಕದಿಂದ ಬಂದವರೇ. ಹೀಗಾಗಿ ಇಂದು ಪ್ರಪಂಚದ **35,000** ಜನರಿಗೆ ಅಂಟಿಕೊಂಡಿರುವುದು ಮನುಷ್ಯ ವೈರಸ್ಸಾಗಿ ಬದಲಾಗಿರುವ **H1N1** ವೈರಸ್ಸೇ ಹೊರತು ಹಂದಿ ವೈರಸ್ಸಲ್ಲ. ಅದೇನೇ ಇರಲಿ, ಈ ಸಾಂಕ್ರಾಮಿಕ ವ್ಯಾಧಿಯನ್ನು ಹಂದಿಜ್ವರ ಎಂದು ಕರೆಯುವ ಮೂಲಕ ಮನುಕುಲದ ಈ ಹೊಸ ಆತಂಕಕ್ಕೆ ಕಾರಣವಾಗಿರುವ ಲಾಭಕೋರ **Factory Farming** ಉದ್ಯಮವೆಂಬುದು ಮರೆಯಾಗುತ್ತದೆ. ಆಧುನಿಕ ಜಗತ್ತಿನ ಸಕಲ ರೋಗಗಳ ತಾಯಿ ಬಂಡವಾಳಶಾಹಿ ಉದ್ಯಮಗಳ ಲಾಭಕೋರತನ. ಅದರ ನಿಯಂತ್ರಣವಾಗದೆ ಅವರು ಮಾಡುವ ಅಪರಾಧಕ್ಕೆ ಜಗತ್ತಿನ ಬಡಜನತೆ ಶಿಕ್ಷೆ ಅನುಭವಿಸುವುದು ತಪ್ಪುವುದಿಲ್ಲ. ■



'ಸೋಲಿಗೆ ಕಾರಣ ಸ್ವಾರ್ಥಿ ಅಧ್ವಾನಿ ಮತ್ತಾತನ ಮಾಫಿಯಾ ಗ್ಯಾಂಗ್'



"Party with a difference" ಎಂದೇ ತನ್ನನ್ನು ಬಿಂಬಿಸಿಕೊಳ್ಳುತ್ತಿದ್ದ ಭಾರತೀಯ ಜನತಾ ಪಕ್ಷದಲ್ಲಿ ಈಗ ಂತಹ ಭಿನ್ನಮತ ಭುಗಿಲೆದ್ದಿದೆ ಎಂದರೆ ಅದನ್ನು "Party with differences" ಎಂದೇ ಎಲ್ಲರೂ ವಡಿ ಮಾಡುತ್ತಿದ್ದಾರೆ.


ನಮ್ಮಂತಹ ಕೆಲವರಿಗೆ ಬಿಜೆಪಿಯು ಇತರ ಜಕೀಯ ಪಕ್ಷಗಳಿಗಿಂತ ಭಿನ್ನವಲ್ಲ ಎಂಬುದು ಮೊದಲೇ ತ್ತಿತ್ತು. ಉದಾಹರಣೆಗೆ, "ಭ್ರಷ್ಟ ಕಾಂಗ್ರೆಸ್‌ನಿಂದಲೇ ದೇಶ ಹಾಳಾಗಿದೆ" ಎಂದು ವಾದಿಸುತ್ತಿದ್ದ ಬಿಜೆಪಿ ನು ಅಧಿಕಾರದಲ್ಲಿದ್ದ ಐದೇ ಐದು ವರ್ಷಗಳಲ್ಲಿ ಂಗ್ರೆಸ್‌ನ ನಲವತ್ತು ವರ್ಷಗಳ ಒಟ್ಟು ಹಗರಣಗಳನ್ನೇ ೀರಿಸಿತ್ತು. ಕಾಂಗ್ರೆಸ್ ಮತ್ತು ಜನತಾದಳದ ಶಾಡಳಿತವನ್ನು ವಿರೋಧಿಸುತ್ತಿದ್ದ ಬಿಜೆಪಿಯೂ ತನ್ನ ಯ ನಾಯಕ, ನಾಯಕಿಯರ ಪುತ್ರ, ಪುತ್ರಿಯರಿಗೆ ಕೆಟ್ ನೀಡಿ ಅವರನ್ನು ಬೆಳೆಸಲಾರಂಭಿಸಿತ್ತು. ಹಾಗೆಯೇ ತರೆ ರಾಜಕೀಯ ಪಕ್ಷಗಳಲ್ಲಿನ ಒಳಜಗಳ, ಕಿತ್ತಾಟಗಳನ್ನು ೋಡಿ "ನಾವು ಹಾಗಲ್ಲ, ನಮ್ಮದು ಶಿಸ್ತಿನ ಪಕ್ಷ" ದು ಹೇಳುತ್ತಿದ್ದ ಬಿಜೆಪಿಯೊಳಗೇ ಇದೀಗ ಎಂತಹ ಾರಾಮಾರಿ ನಡೆದಿದೆ ಎಂದರೆ ಅದು ಕಮ್ಯುನಿಸ್ಟರ ವತ್ತು ವರ್ಷಗಳ ಕಚ್ಚಾಟವನ್ನೇ ಮೀರಿಸುವಂತಿದೆ!

ಅದೆಲ್ಲ ಇರಲಿ, ಈ ಕಚ್ಚಾಟದಿಂದಾಗಿ ಇಂಟರ್‌ನೆಟ್‌ನಲ್ಲಿ ನ್ನೆ ಒಂದು ಲೇಖನ ಪ್ರತ್ಯಕ್ಷವಾಗಿ ಈಗ ಎಲ್ಲೆಡೆ ದಾಡುತ್ತಿದೆ. ಆ ಲೇಖನವನ್ನು ಬರೆದಿರುವವರು ಯಾವ ಂಗ್ರೆಸ್ ನಾಯಕನೂ ಅಲ್ಲ ಬಿಜೆಪಿಯನ್ನು ಸದಾ ಟೀಕಿಸುವ ಾವ ಜಾತ್ಯತೀತವಾದಿಯೂ ಅಲ್ಲ, ಯಾವುದೋ ಕಟ್ಟಾ ಡಪಂಥೀಯರೂ ಅಲ್ಲ. ಬದಲಾಗಿ ಮೂರು ದಶಕಗಳ ು RSS ನ ಹಿಂದೂತ್ವ ಸಿದ್ಧಾಂತವನ್ನೇ ಪಾಲಿಸಿಕೊಂಡು ದಿರುವ, ಬಿಜೆಪಿಯ ನಾಯಕರೊಂದಿಗೆ ಸಕ್ರಿಯ ಬಂಧವನ್ನು ಹೊಂದಿರುವ ಪಕ್ಕಾ ಚೆಡ್ಡಿಯೊಬ್ಬ ಅದನ್ನು ೆದಿದ್ದಾನೆ. ಆತನ ಹೆಸರು ಅನಿಲ್ ಚಾವ್ಲಾ.

ಮೊನ್ನಿನ ಚುನಾವಣೆಯಲ್ಲಿ ಬಿಜೆಪಿ ಸೋತಿದ್ದೇಕೆ ಬುದರ ಬಗ್ಗೆ ಮತ್ತೋರ್ವ ಕಟ್ಟಾ ಚೆಡ್ಡಿವಾದಿ ಸುಧೀಂದ್ರ ುಕರ್ಣಿ ಎಂಬಾತ ಸುದೀರ್ಘ ಲೇಖನವನ್ನು ಬರೆದಿದ್ದರು. ದೊಮ್ಮೆ ಮುಂಬೈನ ಪ್ರತಿಷ್ಠಿತ ಐಐಟಿ ಸಂಸ್ಥೆಯಲ್ಲಿ ುಕರ್ಣಿಯ ಸಹಪಾಠಿಯಾಗಿದ್ದ ಈ ಅನಿಲ್ ಚಾವ್ಲಾ ುಕರ್ಣಿಯ ಲೇಖನಕ್ಕೆ ಪ್ರತ್ಯುತ್ತರ ಲೇಖನವನ್ನು ೆದಿದ್ದಾರೆ. ಇಲ್ಲಿ ಇನ್ನೊಂದು ಅಂಶವನ್ನು ನಿಮ್ಮ ಗಮನಕ್ಕೆ ಲೇಬೇಕು. ಕುಲಕರ್ಣಿ ಅಧ್ವಾನಿಯ ಚೇಲನಾಗಿದ್ದರೆ, ಚಾವ್ಲಾ RSSನ ಆರಾಧಕ. ಹಾಗೆಯೇ ಬಿಜೆಪಿ ೋಲಿಗೆ RSS ಕಾರಣ ಎಂದು ಕುಲಕರ್ಣಿ ತನ್ನ ಖನದಲ್ಲಿ ವಾದಿಸಿದ್ದರೆ, ಬಿಜೆಪಿ ಸೋಲಿಗೆ ಅಧ್ವಾನಿಯೇ ರಣ ಎಂದು ಚಾವ್ಲಾ ಆರೋಪಿಸಿದ್ದಾನೆ. ಮಾತ್ರವಲ್ಲ ಾವ ಅಧ್ವಾನಿಯನ್ನು ಬಿಜೆಪಿ 'ಲೋಹ ಪುರುಷ' ದು ಕೊಂಡಾಡಿತ್ತೊ, ಅದೇ ಅಧ್ವಾನಿ ಎಂತಹ ಸ್ವಾರ್ಥಿ, ಳ್ಳು ಮನುಷ್ಯ ಎಂದು ಚಾವ್ಲಾ ವಾದಿಸಿದ್ದಾನೆ. ಇದೇ ತನ್ನು ಜಾತ್ಯತೀತರು ಅಥವಾ ಇತರರು ಹೇಳಿದ್ದರೆ ದಕ್ಕೆ ಬೇರೆ ರೀತಿಯ ತರ್ಕ ಇರುತ್ತಿತ್ತು. ಆದರೆ ಅದನ್ನು ಈ ಚೆಡ್ಡಿಯೊಬ್ಬ ಹೇಳಿರುವುದರಿಂದ ಅದಕ್ಕೆ ಬೇರೆಯೇ ರ್ಥ ಬರುತ್ತದೆ.

ದುರದೃಷ್ಟವಶಾತ್, ಅಧ್ವಾನಿಯ ನಿಜ ವ್ಯಕ್ತಿತ್ವವನ್ನು ಂಗಪಡಿರುವ ಅನಿಲ್ ಚಾವ್ಲಾನ ಲೇಖನವನ್ನು ು ಬಹಳಷ್ಟು ಪತ್ರಿಕೆಗಳು- ಅದರಲ್ಲೂ ಹೆಚ್ಚು ಪ್ರಚಾರ ್ಯ ಹೊಂದಿರುವ, RSS ನ ಕರಪತ್ರವಾಗಿರುವ ವಿಜಯ ಾಟಕದಂತಹ 'ಪತ್ರಿಕೆ'ಗಳು- ಪ್ರಕಟಿಸುವುದಿಲ್ಲ. ಆದರೂ ವು ನಮ್ಮ ಅಳಿಲುಸೇವೆಯನ್ನು ಸಲ್ಲಿಸಬೇಕಲ್ಲವೇ?! ದ್ದರಿಂದ ಅನಿಲ್ ಚಾವ್ಲಾನ ಲೇಖನದ ಮುಖ್ಯ ಶಗಳನ್ನು ಇಲ್ಲಿ ನೀಡುತ್ತಿದ್ದೇನೆ:

ಪ್ರಿಯ ಸುಧೀಂದ್ರಾ, ನಿನ್ನ ವಿರುದ್ಧ ನನ್ನ ವೈಯಕ್ತಿಕ ಾರೇನಿಲ್ಲ, ಎರಡು ದಶಕಗಳ ಕಾಲ ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತನಾಗಿದ್ದ ನೀನು ಇದ್ದಕ್ಕಿದ್ದಂತೆ ಪಲ್ಟಿ ಹೊಡೆದು ಬಿಜೆಪಿ ಪಕ್ಷವನ್ನು ಸೇರಿದೆಯಲ್ಲದೆ, ನೀನು ಬಿಜೆಪಿಗೆ ನಿಷ್ಠೆಯನ್ನು ಸಾಬೀತುಪಡಿಸಿರದಿದ್ದರೂ ನಿನ್ನನ್ನು ಪಕ್ಷದ ರಾಷ್ಟ್ರೀಯ ಕಾರ್ಯಾಂಗದ ಸದಸ್ಯನನ್ನಾಗಿಸಲಾಯಿತು. ಆನಂತರ ನಿನ್ನನ್ನು ಪ್ರಧಾನಿ ವಾಜಪೇಯಿಯವರ ಮುಖ್ಯ ಸಹಾಯಕನನ್ನಾಗಿಯೂ ನೇಮಕ ಮಾಡಲಾಯಿತು. ನನ್ನ ಹಳೆಯ ಗೆಳೆಯನಾದ ನಿನ್ನ ಯಶಸ್ಸನ್ನು ಕಂಡು ಸಹಜವಾಗಿಯೇ ನನಗೆ



ಸಂತೋಷವಾಗಿತ್ತು. ಆದರೆ ನಿನ್ನ ಈ ಬೆಳವಣಿಗೆ ಪ್ರತ್ಯೇಕವಾದ ಉದಾಹರಣೆಯಲ್ಲ, ಬದಲಾಗಿ ಒಂದು ಸಾಂಕೇತಿಕ ಉದಾಹರಣೆ. ಯಾಕೆಂದರೆ ನಿನ್ನಂತೆ ಅಧ್ವಾನಿಯವರ ಕೂಟಕ್ಕೆ ಏನಕೇನ ಪ್ರಕಾರೇಣ ಪ್ರವೇಶ ಪಡೆದ ನಿನ್ನಂಥ ಹಲವಾರು ಜನ ಇವತ್ತು ದೆಹಲಿ ಮತ್ತು ಮುಂಬೈಯಲ್ಲಿ ಸಿಗುತ್ತಾರೆ. ಇವತ್ತು ಅಂಥವರೇ ಬಿಜೆಪಿಯನ್ನು ಆಳುತ್ತಿರುವುದು.

ಬಿಜೆಪಿ ಮತ್ತು ಆರೆಸ್ಸೆಸ್‌ನ ಸೋಲನ್ನು ನೀನು ಓರ್ವ ನಿಷ್ಠುರ ಶಸ್ತ್ರ ಚಿಕಿತ್ಸಕನಂತೆ ವಿಶ್ಲೇಷಿಸುವಾಗ, ಪಕ್ಷದ ಸೋಲಿನಲ್ಲಿ ಅಧ್ವಾನಿ, ಅವರ ಸಂಸಾರ ಮತ್ತು ಅವರ ಕೂಟ ವಹಿಸಿದ ಪಾತ್ರದ ಬಗ್ಗೆ ದಿವ್ಯಮೌನ ವಹಿಸುತ್ತೀಯ. 2009 ರ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ಬಿಜೆಪಿ ಹೋರಾಡಲಿಲ್ಲ! ಬದಲಾಗಿ ಅಧ್ವಾನಿ ಮತ್ತು ಅವರ ಗ್ಯಾಂಗ್ ಇಡೀ ಚುನಾವಣೆಯನ್ನು 'ಎಲ್ಲರ ವಿರುದ್ಧ ಅಧ್ವಾನಿ' ಎಂಬಂತೆ ಬಿಂಬಿಸಿತು.

ಅಧ್ವಾನಿ ಮತ್ತವರ ಕೂಟ ಪಕ್ಷವನ್ನು ವ್ಯವಸ್ಥಿತವಾಗಿ ಹೈಜಾಕ್ ಮಾಡಿದೆಯಲ್ಲದೆ ಕಳೆದ ಒಂದೂವರೆ ದಶಕಗಳಿಂದ ಪಕ್ಷವನ್ನು ಛಿದ್ರ ಮಾಡಿದೆ. ಅದಕ್ಕೆ ಉದಾಹರಣೆಯಾಗಿ ಮೊನ್ನೆಯ ಚುನಾವಣೆಯಲ್ಲಿ ಬಿಜೆಪಿಯ ಪ್ರಚಾರ ಸಾಮಗ್ರಿಯನ್ನೇ ತೆಗೆದುಕೊಳ್ಳಬಹುದು. ಎಲ್ಲದರಲ್ಲೂ ಒಂದೇ ಒಂದು ಮುಖವಿತ್ತು- ಅಧ್ವಾನಿಯದ್ದು. ಪೋಸ್ಟರ್‌ಗಳಲ್ಲಿ, ಜಾಹೀರಾತುಗಳಲ್ಲಿ ವಾಜಪೇಯಿಯ ಫೋಟೋವನ್ನು ಹಾಕಬಹುದು ಎಂದು ಯಾರೂ ಚಿಂತಿಸಲಿಲ್ಲ.

ಗಾಂಧಿ ಮತ್ತು ನೆಹರೂ ನಿಧನರಾದ ದಶಕಗಳ ನಂತರವೂ ಅವರ ಫೋಟೋಗಳನ್ನು ಬಳಸಿ ಕಾಂಗ್ರೆಸ್ ಲಾಭ ಪಡೆದಿದೆ. ಕಮ್ಯುನಿಸ್ಟರು ಇವತ್ತಿಗೂ ಲೆನಿನ್ ಮತ್ತು ಸ್ಟಾಲಿನ್‌ನನ್ನು ಆರಾಧಿಸುತ್ತಾರೆ. ಇದೆಲ್ಲದರೊಂದಿಗೆ ಅಧ್ವಾನಿ ಮತ್ತವರ ಯುದ್ಧ ತಂಡ ಹೇಗೆ ವಾಜಪೇಯಿಯವರನ್ನು ನಿರ್ಲಕ್ಷಿಸಿತು ಎಂದು ಹೋಲಿಸಿ ನೋಡು.

ಬಿಜೆಪಿ ನಾಯಕತ್ವ ಇವತ್ತು ಅಸ್ತವ್ಯಸ್ತ ಸ್ಥಿತಿಯಲ್ಲದೆ ಎಂದಿದ್ದಿ. ಅದು ನಿಜವೇ ಆಗಿದ್ದರೆ ಅದಕ್ಕೆ ಕಾರಣ ಅಧ್ವಾನಿಯೇ ಹೊರತು ಬೇರೆ ಯಾರೂ ಅಲ್ಲ, ಅಧ್ವಾನಿ ಕಳೆದ ಎರಡು ದಶಕಗಳಿಂದ ಈ ಪಕ್ಷವನ್ನು ತಮ್ಮ ವಜ್ರಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿದ್ದಾರೆ. 'ಲೋಹ ಪುರುಷ' ಎಂಬ ಘೋಷವಾಕ್ಯದೊಂದಿಗೆ ಅಧ್ವಾನಿಯನ್ನು ಕಳೆದ ಚುನಾವಣೆಯಲ್ಲಿ ಬಿಂಬಿಸಲಾಯಿತು. ವಾಸ್ತವವಾಗಿ ಪಕ್ಷದಲ್ಲಿ ತನ್ನ ವಿರುದ್ಧವಿರುವ ವಿಮರ್ಶಕರನ್ನು ಮತ್ತು ಟೀಕಾಕಾರರನ್ನು ಸದೆಬಡಿಯುವಲ್ಲಿ ಮಾತ್ರ ಆತ 'ಲೋಹ' ಪುರುಷ ಆಗಿದ್ದಾನೆ. ತನ್ನ ವಿರುದ್ಧ ಹುಬ್ಬೇರಿಸುವವರನ್ನೂ ವಿನಾಶಗೊಳಿಸುವ ಪ್ರವೃತ್ತಿ ಅಧ್ವಾನಿಯದ್ದು. ಪಕ್ಷದಲ್ಲಿ ತನಗೆ ಸಮಾನರಾಗಿ ನಿಲ್ಲಬಲ್ಲವರ ಬಗ್ಗೆ ಆತನಲ್ಲಿ ಇರುವುದು ಅಸಮಾಧಾನ ಮಾತ್ರ.

ನನ್ನದೊಂದು ವಿನಂತಿ: ಅಧ್ವಾನಿಯ ದೃಷ್ಟಿಕೋನದಲ್ಲಿ ಆತನಿಗೆ ಸಮಾನವಾಗಿ ನಿಲ್ಲಬಲ್ಲ ಇತರೆ ಇಬ್ಬರು ಬಿಜೆಪಿ ನಾಯಕರನ್ನು ಹೆಸರಿಸಬಲ್ಲೆಯಾ? ಅದು ಸಾಧ್ಯವಿಲ್ಲ, ಯಾಕೆಂದರೆ ತಾನೇ ಪಕ್ಷದ ಉನ್ನತ ನಾಯಕನೆಂದು ಬಿಂಬಿಸುವ ಬಗ್ಗೆ ಅಧ್ವಾನಿಗೆ ಎಷ್ಟು ಆಸಕ್ತಿ ಇತ್ತೆಂದರೆ ಆತ ಪಕ್ಷದ ಪ್ರಮುಖ ಹುದ್ದೆಗಳಿಗೆ ತನಗೆ ನಿಷ್ಠುರವಾಗಿದ್ದ ಪಿಗ್ಮಿಗಳನ್ನೇ ಆಯ್ಕೆ ಮಾಡಿಕೊಂಡರು. ಎಷ್ಟರಮಟ್ಟಿಗೆ ಎಂದರೆ, ಬಿಜೆಪಿಯಲ್ಲಿ ಬೆಳೆಯಬೇಕೆಂದರೆ ಅಧ್ವಾನಿಯವರ ಮುಂದೆ ಬೆನ್ನೆಲುಬಿಲ್ಲದ ಪಿಗ್ಮಿಗಳಂತೆ ಸೇವೆ ಸಲ್ಲಿಸಬೇಕು.

ಒಬ್ಬರ ಅಹಂಅನ್ನು ಹೆಚ್ಚಿಸುವಲ್ಲಿ ಈ ಕುಬ್ಜರು ನೆರವಾಗುತ್ತಾರಾದರೂ ಯುದ್ಧದಂತಹ ಪರಿಸ್ಥಿತಿಯಲ್ಲಿ ಅವರು ಯಾವ ಉಪಯೋಗಕ್ಕೂ ಬರುವುದಿಲ್ಲ. ಮೊನ್ನಿನ ಚುನಾವಣೆಯಲ್ಲಿ ಅಧ್ವಾನಿ ಏಕಾಂಗಿಯಾಗಿ ಯುದ್ಧ ಮಾಡಲು ನಿರ್ಧರಿಸಿದರು. ಬಿಜೆಪಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮತ್ತು ಆರೆಸ್ಸೆಸ್‌ನಂತಹ ಸಂಘಟನೆಗಳ ಬದಲಾಗಿ ತಾನು, ತನ್ನ ಸಂಸಾರ ಮತ್ತು ಲ್ಯಾಪ್‌ಟಾಪ್ ಗಳೊಂದಿಗೆ ಹೊರಟ ತನ್ನ ಹರಕುಪುರಕು ಯೋಧರೇ ಆ ಯುದ್ಧಕ್ಕೆ ಸಾಕು ಎಂದು ಅಧ್ವಾನಿ ಭಾವಿಸಿದರು. ವ್ಯಂಗ್ಯ ಎಂತಹದ್ದೆಂದರೆ ಜಯದ ಕನಸು ಕಾಣುತ್ತಿದ್ದಾಗ ಅವರೆಲ್ಲ ಯಾವ ಸಂಘಟನೆಗಳನ್ನು ನಿರ್ಲಕ್ಷಿಸಿದ್ದರೋ, ಇವತ್ತು ಅದೇ ಸಂಘಟನೆಗಳ ಬಾಗಿಲ ಮುಂದೆ ಸೋಲಿನ ಹೊಣೆಯನ್ನು ಇಡಲು ಯತ್ನಿಸುತ್ತಿದ್ದಾರೆ.

ನೀನು ಪಕ್ಷದ ಸಾಮಾಜಿಕ ಪಾಯದ ಬಗ್ಗೆ ಮಾತನಾಡುತ್ತೀಯಾ. ಕಳೆದ ಐದು ವರ್ಷಗಳಿಂದ ಆ ಪಾಯವನ್ನು ವಿಸ್ತರಿಸಲು ಅಧ್ವಾನಿ ಏನನ್ನಾದರೂ ಮಾಡಿದ್ದಾರೆಯೇ? ಉತ್ತರ: ಖಡಾಖಂಡಿತವಾಗಿ ಇಲ್ಲ. 2004 ರ ಚುನಾವಣೆಯ ಮುನ್ನ ಅಧ್ವಾನಿ ತನ್ನ ಯಾತ್ರೆಯನ್ನು ಪ್ರಾರಂಭಿಸಿದಾಗ ಒಂದು ಫೋಟೋ ಅನ್ನು ಎಲ್ಲೆಡೆ ವಿತರಿಸಲಾಯಿತು. ಆ ಫೋಟೋದಲ್ಲಿ ಅಧ್ವಾನಿ ತನ್ನ ಹೆಂಡತಿ ಮತ್ತು ಮಗಳೊಂದಿಗೆ ನಿಂತಿದ್ದರು. ಅವರೊಂದಿಗೆ ವೇದಿಕೆ ಮೇಲೆ ಯಾವ ಬಿಜೆಪಿಯ ನಾಯಕನಿಗೂ ಸ್ಥಾನವಿರಲಿಲ್ಲ. ಇದರ ಬಗ್ಗೆ ಪ್ರಶ್ನಿಸಿದಾಗ ಅಧ್ವಾನಿ "ನನಗೆ ಶಕ್ತಿ ದೊರಕುವುದೇ ನನ್ನ ಸಂಸಾರದಿಂದ" ಎಂದು ಹೇಳುವ ಮೂಲಕ ತನ್ನನ್ನು ಸಮರ್ಥಿಸಿಕೊಂಡಿದ್ದರು.

ಸಮಸ್ಯೆಯ ಬೇರು ಇರುವುದೇ ಇಲ್ಲಿ, ಕಳೆದ ಒಂದು ದಶಕದಿಂದ ಪಕ್ಷ ಮತ್ತು ಸಂಘಟನೆಯನ್ನು ನಿರ್ಲಕ್ಷಿಸಿದ್ದ ಅಧ್ವಾನಿ ತಮ್ಮ ಸಂಸಾರವನ್ನೇ ಹೆಚ್ಚು ಅವಲಂಬಿಸಿದ್ದರು! ಅಷ್ಟೇ ಅಲ್ಲ, ತನ್ನ ಮಹತ್ವಾಕಾಂಕ್ಷೆಯ ಗುರಿಯನ್ನು ತಲುಪಲು ಆತ ಪಕ್ಷ ಮತ್ತು ಸಂಘಟನೆಯನ್ನು ಒಂದು ಸಾಧನ ಎಂದು ಪರಿಗಣಿಸಿದರಷ್ಟೇ. ಕಳೆದ ಒಂದು ದಶಕದಿಂದ ಅಧ್ವಾನಿ ಮಾಡಿದ್ದೆಲ್ಲವೂ ತನ್ನ ವೈಯಕ್ತಿಕ ಇಮೇಜ್ ಅನ್ನು ವೃದ್ಧಿಸುವುದು, ತನ್ನ ಸಂಸಾರವನ್ನು ಬಲಿಷ್ಠಗೊಳಿಸುವುದು ಮತ್ತು ಪಕ್ಷದ ಮೇಲೆ ಮಾಫಿಯಾ ರೀತಿಯಲ್ಲಿ ಹಿಡಿತ ಸಾಧಿಸುವುದು. ಆತನೆಂದೂ ಪಕ್ಷದಲ್ಲಿ ನಾಯಕರನ್ನು ಬೆಳೆಸುವುದರತ್ತ ಗಮನ ಕೊಡಲೇ ಇಲ್ಲ.

ಭೋಪಾಲದಲ್ಲಿ ಅಧ್ವಾನಿಯ ಆತ್ಮಕಥನದ ಹಿಂದಿ ಅವತರಣಿಕೆಯ ಬಿಡುಗಡೆ ಸಮಾರಂಭಕ್ಕೆ ಹೋಗಿದ್ದೆ. ಒಂದು ಪ್ಯಾರಾದಲ್ಲಿ ವಿವರಿಸಬಹುದಾದಷ್ಟು ಸಾಧನೆಯನ್ನೂ ಮಾಡಿರದ ವ್ಯಕ್ತಿಯ ನಾಚಿಕೆಗೆಟ್ಟ ಪ್ರದರ್ಶನ ಸಮಾರಂಭ ಅದಾಗಿತ್ತು. ಮುಂದಿನ ಪೀಳಿಗೆಯ ಇತಿಹಾಸಕಾರರು



ಕಂಡಹಾಗೆ

■ ಗೌರಿ ಲಂಕೇಶ್

ಅಧ್ವಾನಿಯನ್ನು ತಾನೋರ್ವ ಅತ್ಯುನ್ನತ ವ್ಯಕ್ತಿಯೆಂಬ ಭ್ರಮೆಗೆ ಸಾಂಕೇತಿಕವಾಗಿ ಉದಾಹರಿಸಬಹುದು. ಅಷ್ಟೇ ಅಲ್ಲ, ಆತ ಸ್ವತಂತ್ರ ಚಿಂತನೆಯನ್ನು ಸಹಿಸದ ವ್ಯಕ್ತಿಯೆಂದೂ, ತನ್ನ ಏಳಿಗೆಗಾಗಿ ಪಕ್ಷವನ್ನೇ ನಾಶಪಡಿಸಿದ ಸಮಯಸಾಧಕನೆಂದೂ ಬಣ್ಣಿಸಬಹುದು. ಅಷ್ಟೆಲ್ಲ ಹೇಳಿದ ನಂತರ ಆತನಿಗೆ ಸಿನಿಮಾಗಳನ್ನು ನೋಡುವ ಚಟವಿತ್ತೆಂದೂ, ಸುಲಭವಾಗಿ ಮರೆಯಬಹುದಾದ ಎರಡು ಆತ್ಮಕಥನಗಳನ್ನು ಬರೆದಿದ್ದನೆಂದೂ ದಾಖಲಿಸಿದರೂ ಅಚ್ಚರಿ ಇಲ್ಲ.

ಅಧ್ವಾನಿಯ ಜೀವನ ಸಾಧನೆಗಳು ಎಂದು ಹೇಳಬಲ್ಲಂತಹದ್ದು ಇನ್ನೇನಿದೆ? ಸಾಮಾಜಿಕ ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತೆ ಆತ ಲೇಖನ/ ಪುಸ್ತಕಗಳನ್ನು ಬರೆದ ಉದಾಹರಣೆಗಳಿವೆಯೇ? ನನಗೆ ಗೊತ್ತಿರುವಂತೆ ಇಲ್ಲವೇ ಇಲ್ಲ. ಆತ ಎಂತಹ ಸ್ವಾರ್ಥಿ ಎಂದರೆ ಆತ ಎಂದಿಗೂ ತನ್ನ ವೈಯಕ್ತಿಕ ಹಿತಾಸಕ್ತಿಯ ಆಚೆಗೆ ಯೋಚಿಸಿದ್ದೇ ಇಲ್ಲ. ಹಿಂದೂತ್ವದ ಬಗ್ಗೆಯಾಗಲಿ, ರಾಜಕೀಯ ಸಿದ್ಧಾಂತದ ಬಗ್ಗೆಯಾಗಲಿ, ರಾಷ್ಟ್ರೀಯ ಸಮಸ್ಯೆಗಳ ಬಗ್ಗೆಯಾಗಲಿ ಆತ ಬಾಯಿ ತೆರೆದಾಗಲೆಲ್ಲ ಅವು ಟೊಳ್ಳು ಎಂದು ಗೊತ್ತಾಗುತ್ತದೆ. ಯಾಕೆಂದರೆ ಆತ ಎಂದೂ ಇತರೆ ವಿಷಯಗಳ ಬಗ್ಗೆ ಯೋಚಿಸಿಲ್ಲ. ಬದಲಾಗಿ ತಾನು, ತನ್ನ ಹಿತಾಸಕ್ತಿ, ತನ್ನ ಸಂಸಾರ, ತನ್ನ ಜೀವನೋಪಾಯ, ತನ್ನ ಆಕಾಂಕ್ಷೆ ಮತ್ತು ತನ್ನ ಕನಸುಗಳ ಬಗ್ಗೆ ಮಾತ್ರ ಯೋಚಿಸುವಾತ.


ಇವತ್ತು ಎಲ್ಲಾ ರಾಜಕಾರಣಿಗಳೂ ಹಾಗೆಯೇ ಎಂದು ನೀನು ಉತ್ತರಿಸಬಹುದು. ಅದು ಒಂದು ರೀತಿಯಲ್ಲಿ ಸರಿಯೂ ಇರಬಹುದು. ಆದರೆ ಅವರೆಲ್ಲರಿಗೂ ತಮ್ಮ ಮಿತಿಗಳ ಅರಿವಿರುತ್ತದೆ, ತಾವು ಸಾಮಾನ್ಯ ದರ್ಜೆಯ ನಾಯಕರು ಎಂಬುದು ಗೊತ್ತಿರುತ್ತದೆ. ಆದರೆ ಅಧ್ವಾನಿಗೆ ತನ್ನ ಮಿತಿಗಳ ಪರಿವೆಯೇ ಇಲ್ಲ. ಆ ಅರಿವು ಇದ್ದಿದ್ದರೆ 2009 ರ ಇಡೀ ಚುನಾವಣೆಯನ್ನು ಆತನನ್ನು ಪ್ರಧಾನಿಯಾಗಿಸಲೆಂದೇ ನಡೆದ ಪ್ರಕ್ರಿಯೆ ಎಂಬಂತೆ ಆತ ಚಿತ್ರಿಸುತ್ತಿರಲಿಲ್ಲ."

-ಅಧ್ವಾನಿ ಬಗ್ಗೆ ಇದಕ್ಕಿಂತಲೂ ಕಟುವಾಗಿ ಬೇರೆ ಯಾರೂ ವಿಶ್ಲೇಷಿಸಿಲ್ಲ ಅನಿಸುತ್ತದೆ.

ಅದೇನೇ ಆದರೂ, ಚೆಡ್ಡಿಗಳ ಈ ಕಿತ್ತಾಟ ಈ ದೇಶದಲ್ಲಿ ಶಾಂತಿ, ನೆಮ್ಮದಿ, ಸೌಹಾರ್ದ ಬಯಸುವ ಜನರಿಗಂತೂ ರಸದೌತಣದಂತಿದೆ, ಪುಕ್ಕಟೆ ಮನರಂಜನೆಯನ್ನು ನೀಡುತ್ತಿದೆ. ಆದ್ದರಿಂದ ಸದ್ಯದಲ್ಲೇ ಆರೆಸ್ಸೆಸ್ ಕೂಡ ಈ ಕಚ್ಚಾಟದಲ್ಲಿ ಭಾಗವಹಿಸುವಂತಾಗಲಿ; ಅದರೊಂದಿಗೆ ವಿಶ್ವಹಿಂದೂ ಪರಿಷತ್ತಿನ ಸಾಧುಸಂತರು, ಭಜರಂಗದಳದ ಮಂಗಗಳು, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಅವಿವೇಕಿಗಳು, ಎಸ್.ಎಲ್. ಭೈರಪ್ಪನಂತಹ ವಿಕೃತ ಚಿಂತಕರು, ಚಿದಾನಂದಮೂರ್ತಿ ಎಂತಹ ಚಿಂತಾಜನಕ ಸಂಶೋಧಕರು ಮತ್ತು ಇತರೆ ದೇಶವಿನಾಶದ ಹಿಂದೂತ್ವವಾದಿಗಳು ಎಲ್ಲರೂ ತಮ್ಮ ಶಕ್ತ್ಯಾನುಸಾರ ಈ ಜಗಳದಲ್ಲಿ ಪಾತ್ರ ವಹಿಸುವಂತಾಗಲಿ, ತಮ್ಮ ನಿಜ ಬಣ್ಣವನ್ನು ತೋರಿಸಿಕೊಳ್ಳುವಂತಾಗಲಿ ಎಂದು ಆಶಿಸುತ್ತಿದ್ದೇನೆ! ■

ಅಂತರಿಕ್ಷದಲ್ಲಿ ಅಮೇಧ್ಯ ಯುದ್ಧ!


ಎರಡನೇ ಮಹಾಯುದ್ಧದ ನಂತರ ಜಗತ್ತಿನ ಸೂಪರ್ ಪವರ್ ದೇಶಗಳಾಗಿ ಹೊರಹೊಮ್ಮಿದ ಅಮೆರಿಕ ಮತ್ತು ರಷ್ಯಾಗಳು 90ರ ದಶಕದ ಆರಂಭದ ತನಕ ಬರೋಬ್ಬರಿ ಎರಡು ದಶಕಗಳ ಕಾಲ 'ಶೀತಲ ಯುದ್ಧ' (cold war) ನಡೆಸಿರುವುದು ನಮಗೆಲ್ಲಾ ಗೊತ್ತೇ ಇದೆ. ಈಗದು ಹಳೆಯ ಸುದ್ದಿ ಬಿಡಿ. ಹೊಸ ಸುದ್ದಿಯೇನೆಂದರೆ ಈ ಎರಡೂ ದೇಶಗಳು ಈಗ ಮತ್ತೊಂದು ಯುದ್ಧಕ್ಕಿಳಿದಿವೆ. ಈ ಬಾರಿ ಅದು ಶೀತಲ ಯುದ್ಧವಲ್ಲ, ಶಿಟ್ ಯುದ್ಧ, ಅರ್ಥಾತ್ ಅಮೇಧ್ಯ ಯುದ್ಧ. ಈ ಯುದ್ಧ ನಡೆಯುತ್ತಿರುವುದು ಭೂಮಿಯ ಮೇಲಲ್ಲ, ಭೂಮಿಯ ಗುರುತ್ವಾಕರ್ಷಣಾ ಶಕ್ತಿಯಿಂದಾಚೆಗೆ ಬಾಹ್ಯಾಕಾಶದಲ್ಲಿ.



ನಮಗೆಲ್ಲಾ ಗೊತ್ತಿರುವಂತೆ ಬಾಹ್ಯಾಕಾಶ ಅಧ್ಯಯನಕ್ಕೆಂದು ಹಲವು ದೇಶಗಳು ಸೇರಿಕೊಂಡು ಭೂಮಿಯ ಗುರುತ್ವಾಕರ್ಷಣಾ ವಲಯದಾಚೆಗೆ ಅಂತರಿಕ್ಷದಲ್ಲಿ ಒಂದು ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರವನ್ನು (International Space Station) ಸ್ಥಾಪಿಸಿದ್ದಾರೆ. ಅಲ್ಲಿಗೆ ವಿವಿಧ ದೇಶಗಳ ಅಂತರಿಕ್ಷ ಯಾತ್ರಿಗಳು ಹೋಗಿ ಹಲವು ದಿನಗಳ ಕಾಲ, ತಿಂಗಳ ಕಾಲ ಇದ್ದು ಅಧ್ಯಯನ ಮಾಡಿಬರುತ್ತಾರೆ. ಭಾರತೀಯ ಮೂಲದ ಅಮೆರಿಕನ್ ಗಗನಯಾನಿ ಸುನಿತಾ ವಿಲಿಯಮ್ಸ್ ಕೂಡ ಇದೇ ಕೇಂದ್ರದಲ್ಲಿ 195 ದಿನಗಳನ್ನು ಕಳೆದುಬಂದಿರುವುದು ನಮಗೆ ಗೊತ್ತಿದೆ.

ಹೀಗೆ ತಿಂಗಳುಗಟ್ಟಲೇ ಬಾಹ್ಯಾಕಾಶ ಕೇಂದ್ರದಲ್ಲಿ ಕಾಲಕಳೆಯ ಬೇಕಾಗಿರುವುದರಿಂದ ಅಂತರಿಕ್ಷ ಯಾತ್ರಿಗಳ ದೈನಂದಿನ ಅಗತ್ಯಗಳನ್ನು ಪೂರೈಸುವುದಕ್ಕೆ ಅಲ್ಲಿ ಸೀಮಿತ ವ್ಯವಸ್ಥೆ ಮಾಡಲಾಗಿದೆ. ಊಟಕ್ಕೆ, ಮಲಗುವುದಕ್ಕೆ, ಮಲಮೂತ್ರ ವಿಸರ್ಜನೆಗೆ, ಅಧ್ಯಯನಕ್ಕೆ - ಹೀಗೆ ಸೀಮಿತ ಅವಕಾಶಗಳಲ್ಲೇ ಚೊಕ್ಕದಾಗಿ ವ್ಯವಸ್ಥೆ ಮಾಡಲಾಗಿದೆ. ಅದರಲ್ಲೂ ವಿಶೇಷವಾಗಿ ಮಲಮೂತ್ರ ವಿಸರ್ಜನೆ ಎಂಬ ಮಹತ್ವಪೂರ್ಣ ಕೆಲಸಕ್ಕೆ ಪುಟ್ಟದಾದ ಟಾಯ್ಲೆಟ್‌ಗಳನ್ನು ರೂಪಿಸಲಾಗಿದೆ. ಅಲ್ಲಿ ನಿರ್ದಿಷ್ಟ ದೇಶದ ಗಗನಯಾನಿಗಳು ನಿರ್ದಿಷ್ಟ ಟಾಯ್ಲೆಟ್‌ಗಳನ್ನು ಬಳಸಬೇಕು ಎಂದೇನೂ ನಿಯಮವಿಲ್ಲವಾದ್ದರಿಂದ ಒಬ್ಬರು ಮತ್ತೊಬ್ಬರ ಟಾಯ್ಲೆಟ್‌ಗಳನ್ನು ಬಳಸುವುದು ಸಾಮಾನ್ಯವಾಗಿಯೇ ಇದೆ. ಈಗ ಅಮೆರಿಕ ಮತ್ತು ರಷ್ಯಾಗಳ ನಡುವೆ ಸಮಸ್ಯೆ ಉದ್ಭವಿಸಿರುವುದು ಈ ಟಾಯ್ಲೆಟ್‌ಗೆ ಸಂಬಂಧಪಟ್ಟಂತೆಯೆ.

ವಾಸ್ತವದಲ್ಲಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ರಷ್ಯಾ ನಿರ್ಮಿಸಿದ ಟಾಯ್ಲೆಟ್‌ಗಳಿಗೂ ಅಮೆರಿಕ ನಿರ್ಮಿಸಿದ ಟಾಯ್ಲೆಟ್‌ಗಳಿಗೂ ವಿಶೇಷ ವ್ಯತ್ಯಾಸವೇನಿಲ್ಲ, ಆದರೆ ಬಾಹ್ಯಾಕಾಶದಲ್ಲಿ ಅವರಿಬ್ಬರೂ ತಿನ್ನುವ ಆಹಾರದಲ್ಲಿ ಗಣನೀಯ ವ್ಯತ್ಯಾಸವಿದೆ. ರಷ್ಯನ್ನರ ಮೆನುನಲ್ಲಿ 300ಕ್ಕೂ ಹೆಚ್ಚು ತಿಂಡಿಪದಾರ್ಥಗಳಿವೆ. ಉದಾಹರಣೆಗೆ, ರಷ್ಯಾದ ಅಂತರಿಕ್ಷ ಯಾನಿಗಳ ಕಮ್ಯಾಂಡರ್ ಆಗಿರುವ ವಲೆರಿ ಕೊರ್ಜುನ್ ಅವರ ಮೆನುವನ್ನೇ ನೋಡಿ. ಈತನ ಬೆಳಗ್ಗಿಯ ತಿಂಡಿ: ಮೊಸರು ಮತ್ತು ಬೀಜಗಳು, ಬೇಯಿಸಿ ಜಜ್ಜಿದ ಆಲೂಗಡ್ಡೆ ಮತ್ತು ಬೀಜಗಳು, ಸೇಬುಹಣ್ಣಿನ ಚಿಪ್ಸ್, ಸಕ್ಕರೆರಹಿತ ಕಾಫಿ ಮತ್ತು ವಿಟಮಿನ್‌ಗಳು. ಮಧ್ಯಾಹ್ನದ ಊಟ: ಪೈಕ್‌ಮೀನಿನ ಲೋಳೆ, ಬೀಟ್‌ರೂಟ್-ಆಲೂಗಡ್ಡೆ ಸಾರಿನೊಂದಿಗೆ ಮಾಂಸ, ಗುಲಾಶ್ ಎಂಬ ಮಾಂಸದ ಊಟ, ಕಾಡುಗೋಧಿ, ಬ್ರೆಡ್, ದ್ವೀಪದ್ರಾಕ್ಷಿಯ ಜ್ಯೂಸ್, ಸಕ್ಕರೆ ಇಲ್ಲದ ಚಹಾ. ಸಂಜೆ ಊಟ: ಅನ್ನ ಮತ್ತು ಮಾಂಸ, ಬ್ರಾಕಲಿ ಹೂಕೋಸು, ಚೀಸ್, ಬೀಜಗಳು ಮತ್ತು ಸಕ್ಕರೆಯುಕ್ತ ಚಹಾ. ರಾತ್ರಿಯೂಟ: ಒಣಗಿದ ದನದ ಮಾಂಸ, ಗೋಡಂಬಿ ಬೀಜ, ಪೀಚ್ ಹಣ್ಣು, ದ್ರಾಕ್ಷಿ ಜ್ಯೂಸ್. ಇದು ರಷ್ಯಾನ್ ಗಗನಯಾತ್ರಿಯೊಬ್ಬನ ಪೌಷ್ಠಿಕ ಡಯಟ್.



ಇನ್ನು ಅಮೆರಿಕನ್ ಗಗನಯಾತ್ರಿಗಳ ಡಯಟ್ ಕೂಡ ಪೌಷ್ಠಿಕವಾಗಿರುವುದು ನಿಜವಾದರೂ ಅದರ ರೂಪ ಬೇರೆ. ಹಣ್ಣು, ತರಕಾರಿ, ಮೀನುಗಳಿಂದ ತಯಾರಿಸಲ್ಪಟ್ಟ ಲಘು ಆಹಾರ ಹಾಗೂ ಕಡಿಮೆ ಕೊಬ್ಬಿನಂಶವಿರುವ ಮಾಂಸ ಅವರ ಡಯಟ್‌ನಲ್ಲಿದೆ. ಇದು ರಷ್ಯನ್ನರು ಸೇವಿಸುವ ಆಹಾರದಷ್ಟೇ ಪೌಷ್ಠಿಕವಾಗಿದ್ದರೂ ಎಷ್ಟೋಪಾಲು ಕಡಿಮೆ ಪ್ರಮಾಣದಲ್ಲಿರುತ್ತದೆ. ಅಮೆರಿಕನ್ನರು ಗುಳಿಗೆ ರೂಪದಲ್ಲಿ, ದ್ರವರೂಪದಲ್ಲೂ ಹೆಚ್ಚಿನ ಆಹಾರ ಸೇವಿಸುತ್ತಾರೆ. ಸಾರಾಂಶದಲ್ಲಿ ಹೇಳುವುದಾದರೆ ರಷ್ಯಾನ್ ಖಗೋಳಯಾತ್ರಿಗಳು ಅಗಾಧ ಪ್ರಮಾಣದಲ್ಲೂ ಹಾಗೂ ಅಮೆರಿಕ ಗಗನಯಾನಿಗಳು ತೀರಾ ಕಡಿಮೆ ಪ್ರಮಾಣದಲ್ಲೂ ಆಹಾರ ಸೇವಿಸುತ್ತಾರೆ. ಅಂದಮೇಲೆ ಅವರು ಹೊರಹಾಕುವ ತ್ಯಾಜ್ಯದಲ್ಲೂ ಈ ವ್ಯತ್ಯಾಸ ಇರಲೇಬೇಕಲ್ಲವೇ? ಈಗ ಸಮಸ್ಯೆಯಾಗಿರುವುದೂ ಕೂಡ ಅದೇ. ರಷ್ಯಾನ್ ಅಂತರಿಕ್ಷ ಯಾತ್ರಿಗಳು ಸಿಕ್ಕಾಪಟ್ಟೆ ತಿಂದು ಸಿಕ್ಕಾಪಟ್ಟೆ ಮಲ ವಿಸರ್ಜಿಸುತ್ತಾ ತಮ್ಮ ಟಾಯ್ಲೆಟ್‌ಗಳನ್ನು ಹಾಳು ಮಾಡುತ್ತಿದ್ದಾರೆಂಬುದು, ಇದರಿಂದ ಟಾಯ್ಲೆಟ್‌ಗಳೂ ನಾಶವಾಗುತ್ತಿರುವುದಲ್ಲದೇ ತಡೆಯಲಾಗದಷ್ಟು ಕೆಟ್ಟ ವಾಸನೆ ಬೇರೆ ಬರುತ್ತದೆಂಬುದು, ಇದರಿಂದ ಅನೇಕ ಅಂತರಿಕ್ಷ ಯಾತ್ರಿಗಳು ಮೈಯಲ್ಲಿ ಹುಷಾರಿಲ್ಲದಂತಾಗಿದೆ ಎಂಬುದು ಅಮೆರಿಕ್ ಗಗನಯಾನಿಗಳ ಸಂಕಟ. ಎಷ್ಟು ಹೇಳಿದರೂ ಕೇಳದಿದ್ದಾಗ ಮೊನ್ನೆ ಅಮೆರಿಕನ್ ಗಗನಯಾನಿಗಳು ತಮ್ಮ ಟಾಯ್ಲೆಟ್ ಬಳಸದಂತೆ ರಷ್ಯಾನ್ ಗಗನಯಾನಿಗಳಿಗೆ ತಾಕೀತು ಮಾಡಿಬಿಟ್ಟಿದ್ದಾರೆ. ಅಲ್ಲಿಗೆ ಶೀತಲ ಯುದ್ಧ ನಡೆಸಿದ ಎರಡು ದೇಶಗಳ ಅಂತರಿಕ್ಷದ ಅಮೇಧ್ಯ ಯುದ್ಧ ಪ್ರಾರಂಭವಾಗಿಹೋಗಿದೆ.

ವಿಶೇಷ ಎಂದರೆ ಈ ಟಾಯ್ಲೆಟ್ ಅನ್ನು ನಿರ್ಮಿಸಿಕೊಟ್ಟಿದ್ದು ರಷ್ಯಾದ ಗಗನಯಾನಿಗಳೆ. ರಷ್ಯನ್ನರು ಅಂತರಿಕ್ಷ ಟಾಯ್ಲೆಟ್‌ಗಳನ್ನು ನಿರ್ಮಿಸುವುದರಲ್ಲಿ ಎಕ್ಸ್‌ಪರ್ಟ್ ಆಗಿದ್ದರಿಂದ ಅವರು ನಿರ್ಮಿಸಿದ ಟಾಯ್ಲೆಟ್‌ನ್ನು ಅಮೆರಿಕದ ನಾಸಾ 2007ರಲ್ಲಿ 19 ಮಿಲಿಯನ್ ಡಾಲರ್ (913 ಕೋಟಿ ರೂಪಾಯಿ) ದುಡ್ಡು ಕೊಟ್ಟು ಕೊಂಡುಕೊಂಡಿತ್ತು!. ವಾಸ್ತವದಲ್ಲಿ ಇದು ವಿಶ್ವದ ಅತ್ಯಂತ ದುಬಾರಿ ಟಾಯ್ಲೆಟ್ ಆಗಿತ್ತು, ಇದೊಂಥರಾ ಚೆನ್ನಾಗಿದೆ. ಮೊದಲು ತಾವೇ ನಿರ್ಮಿಸಿದ ಟಾಯ್ಲೆಟ್ಟನ್ನು ದುಬಾರಿ ದುಡ್ಡಿಗೆ ಅಮೆರಿಕನ್ನರಿಗೆ ಮಾರುವುದು, ಆಮೇಲೆ ಬೇಕಾಬಿಟ್ಟಿ ಅದೇ ಟಾಯ್ಲೆಟ್ ಅನ್ನು ಹಾಳು ಮಾಡೋದು. ಆಮೇಲೆ ಹೊಸ ಟಾಯ್ಲೆಟ್ ನಿರ್ಮಿಸಿ ಮತ್ತೆ ಅಮೆರಿಕನ್ನರಿಗೆ ಮಾರೋದು!

ಈ ಅಂತರಿಕ್ಷ ಟಾಯ್ಲೆಟ್‌ಗಳದ್ದೂ ಒಂಥರಾ ವಿಚಿತ್ರ ಕತೆಗಳಿವೆ. ಮನುಷ್ಯ ಬಾಹ್ಯಾಕಾಶಯಾನ ಮಾಡುವ ಮೊದಲೇ ನಾಯಿಗಳನ್ನು ಕಳಿಸಲಾಗಿತ್ತು. ಅವು ಬದುಕುಳಿದರೆ ತಾವೂ ಹೋಗಬಹುದೆಂಬ ಲೆಕ್ಕಾಚಾರದಿಂದ. 1957ರಲ್ಲಿ ಲೈಕ ಎಂಬ ಮಿಶ್ರತಳಿಯ ನಾಯಿಯೊಂದನ್ನು ಅಂತರಿಕ್ಷಕ್ಕೆ ಕಳಿಸಲಾಗಿತ್ತು, ತನ್ನ ಮಲಮೂತ್ರಗಳನ್ನು ತಾನೇ ತಿಂದುಬದುಕುವಂತೆ ಬಾಲದ ಕೆಳಭಾಗದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಇಲ್ಲಿಯತನಕ ಯಾವುದೇ ಗಂಡು ನಾಯಿ ಅಂತರಿಕ್ಷ ಯಾನ ಕೈಗೊಳ್ಳದಿರುವುದಕ್ಕೆ ಇದೇ ಕಾರಣ. ಹೆಣ್ಣು ನಾಯಿಗಾದರೆ ಮಲ ಮತ್ತು ಮೂತ್ರ ಎರಡೂ ಬಾಲದ ಕೆಳಗಿನ ಜಾಗದಿಂದಲೇ ವಿಸರ್ಜಿಸಲ್ಪಡುತ್ತದಾದ್ದರಿಂದ ಒಂದು ಕಡೆ ಅದನ್ನು ಪುನಃ ಉಪಯೋಗಿಸಿಕೊಳ್ಳುವ ವ್ಯವಸ್ಥೆ ಮಾಡಿದರೆ ಸಾಕು. ಗಂಡು ನಾಯಿಗಾದರೆ ಮಲ ಒಂದು ಕಡೆಯಿಂದ, ಮೂತ್ರ ಒಂದು ಕಡೆಯಿಂದ ಹೊರಬೀಳುತ್ತದಾದ್ದರಿಂದ ಅವುಗಳನ್ನು ಉಪಯೋಗಿಸುವುದಕ್ಕೆ ಎರಡೆರಡು ಕಡೆ ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಈ ಕಾರಣಕ್ಕಾಗಿ ಕೇವಲ ಹೆಣ್ಣು ನಾಯಿಗಳನ್ನಷ್ಟೇ ಅಂತರಿಕ್ಷಕ್ಕೆ ಕಳಿಸಲಾಗಿತ್ತು. ಈ ರೀತಿಯಲ್ಲಿ ನಾಯಿಗಳ ಮಲಮೂತ್ರ ವಿಸರ್ಜನೆಯ ಸಮಸ್ಯೆಯನ್ನು ಬಗೆಹರಿಸಲಾಯಿತು.

ನಂತರ ಮಾನವನೇ ಅಂತರಿಕ್ಷ ಯಾನ ಕೈಗೊಂಡ. 1961ರ ಏಪ್ರಿಲ್ 12ರಂದು ರಷ್ಯಾದ ಯೂರಿ ಗಗಾರಿನ್ ಅಂತರಿಕ್ಷ ಯಾನ ಮಾಡಿದ ಮೊದಲ ಮಾನವ. ಆತ ಒಂದು ಗಂಟೆ ನಲ್ವತ್ತೆಂಟು ನಿಮಿಷಗಳನ್ನು ಅಂತರಿಕ್ಷದಲ್ಲಿ ಕಳೆದ. ಇಷ್ಟು ಕಡಿಮೆ ಸಮಯದಲ್ಲಿ ಮಲಮೂತ್ರ ವಿಸರ್ಜನೆಯಿಲ್ಲದೇ ಮನುಷ್ಯ ಇರಬಹುದಾದ್ದರಿಂದ ಆತ ಅಂತಹ ಕೆಲಸವನ್ನೇನೂ ಮಾಡಲಿಲ್ಲ, ಒಂದು ವೇಳೆ ಅವಶ್ಯ ಬಿದ್ದರೆ ಇರಲಿ ಎಂದು ಆತ ಪಯಣಿಸಿದ ಬಾಹ್ಯಾಕಾಶ ನೌಕೆಯಲ್ಲೇ ವ್ಯವಸ್ಥೆ ಮಾಡಲಾಗಿತ್ತು. ಅದೇ ವರ್ಷ ಮೇ 5ರಂದು ಅಂತರಿಕ್ಷ ಯಾನ ಮಾಡಿದ ಎರಡನೇ ಮಾನವ ಅಮೆರಿಕದ ಅಲನ್ ಶೆಪರ್ಡ್ ಹಲವಾರು ಗಂಟೆಗಳ ಕಾಲ ಗುಳಿಗೆ ತೆಗೆದುಕೊಳ್ಳುತ್ತಲೇ ಕಾಲಕಳೆದರೂ ತಡೆದುಕೊಳ್ಳಲಾಗಲಿಲ್ಲ, ಕೊನೆಗೆ ತನ್ನ ಬಾಹ್ಯಾಕಾಶ ಉಡುಗೆಯಲ್ಲೇ ಮೂತ್ರ ವಿಸರ್ಜನೆ ಮಾಡಿಬಿಟ್ಟ. ಆಮೇಲೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರ ಸ್ಥಾಪನೆಯಾದ ಮೇಲೆ, ತಿಂಗಳುಗಟ್ಟಲೇ ಅಲ್ಲಿ ಇರಬೇಕಾದ ಪರಿಸ್ಥಿತಿ ಸೃಷ್ಟಿಯಾದ ಮೇಲೆ ರಷ್ಯನ್ನರು ಟಾಯ್ಲೆಟ್‌ಗಳನ್ನು ನಿರ್ಮಿಸಿದರು. ಅಷ್ಟೇ ಅಲ್ಲ, ನೂರಾರು ಕೋಟಿ ರೂಪಾಯಿಗಳಿಗೆ ಅವುಗಳನ್ನು ಅಮೆರಿಕನ್ನರಿಗೂ ಮಾರಿದರು!

ಈಗ ಟಾಯ್ಲೆಟ್‌ಗಾಗಿಯೇ ಜಗಳ ಶುರುವಾಗಿದೆ. ಅಂತರಿಕ್ಷ ಅಧ್ಯಯನದಂಥ ಗಹನವಾದ ವಿಚಾರವನ್ನು ಬಿಟ್ಟು ಹೀಗೆ ಜಗಳವಾಡುತ್ತಾ ಕುಳಿತರೆ ಅದು ಕೇವಲ ಅಮೆರಿಕ-ರಷ್ಯಾಗಳಿಗೆ ಮಾತ್ರವಲ್ಲ ಇಡೀ ಪ್ರಪಂಚಕ್ಕೆ ಆಗುವ ನಷ್ಟವಾಗುತ್ತದೆ. ಈ ಶಿಟ್ ಯುದ್ಧ ಬೇಗ ಮುಗಿಯಲೆಂದು ಆಶಿಸೋಣ. ■



ಲಾಲ್‌ಘರ್ ಆದಿವಾಸಿಗಳ ಜೀವನ್ಮರಣ ಹೋರಾಟ



ಸುತ್ತ ಮುತ್ತ

▶ಕುಮಾರ್ ಬುರಡಿಕಟ್ಟೆ

ಪಶ್ಚಿಮ ಬಂಗಾಳದ ಸಿಂಗೂರು ಮತ್ತು ನಂದಿಗ್ರಾಮಗಳಲ್ಲಿ ಆಡಳಿತಾರೂಢ ಸಿಪಿಎಂ ಸರ್ಕಾರ ನಡೆಸಿದ ರಾಕ್ಷಸ ದೌರ್ಜನ್ಯಗಳ ಗಾಯವಿನ್ನೂ ಮಾಸುವ ಮೊದಲೇ ಅದೇ ಸರ್ಕಾರ ಮತ್ತೊಂದು ಕ್ರೂರ ಪೈಶಾಚಿಕತನಕ್ಕೆ ಕೈಹಾಕಿದೆ. ಎರಡು ವರ್ಷಗಳ ಹಿಂದೆ ಸಿಪಿಎಂ ಸರ್ಕಾರ ಸಿಂಗೂರು-ನಂದಿಗ್ರಾಮಗಳಲ್ಲಿ ಬಡರೈತರ ಜೀವನಾಧಾರವಾಗಿದ್ದ ಫಲವತ್ತಾದ ಭೂಮಿಯನ್ನು ಕಿತ್ತುಕೊಂಡು ಇಂಡೋನೇಶಿಯಾದ ಸಲೀಂಗ್ರೂಪ್‌ನ ವಿಶೇಷ ಆರ್ಥಿಕ ವಲಯಕ್ಕೆ ಮತ್ತು ಟಾಟಾನ ನ್ಯಾನೋ ಕಾರು ತಯಾರಿಕಾ ಘಟಕಕ್ಕೆ ಬಿಡಿಗಾಸಿಗೆ ಕೊಟ್ಟಿತ್ತು. ತಮಗೆ ಅನ್ನ ನೀಡುತ್ತಿದ್ದ ಭೂಮಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಬೀದಿಗಿಳಿದು ಪ್ರತಿಭಟಿಸಿದ ರೈತರ ಮೇಲೆ ಸಿಪಿಎಂನ ಗೂಂಡಾಗಳು ಮತ್ತು ನಟೋರಿಯಸ್ ಪೊಲೀಸರು ಸೇರಿಕೊಂಡು ಸುಮಾರು ಐವತ್ತಕ್ಕೂ ಹೆಚ್ಚು ಅಮಾಯಕ ರೈತರನ್ನು ಕೊಂದು ಹಾಕಿದ್ದರಲ್ಲದೇ ಅಳಿದುಳಿದವರ ಮೇಲೆ ಅತ್ಯಾಚಾರ, ಹೇಳತೀರದ ದೌರ್ಜನ್ಯಗಳನ್ನು ನಡೆಸಿದ್ದರು. ಅದಿನ್ನೂ ಜನ ಮನಸ್ಸಿನಲ್ಲಿ ಹಸಿಹಸಿಯಾಗಿರುವಾಗಲೇ ಬಂಗಾಳ ಸರ್ಕಾರ ಅಂತಹುದೇ ಮತ್ತೊಂದು ಪೈಶಾಚಿಕ ನರಮೇಧಕ್ಕೆ ಸಜ್ಜಾಗಿ ಹೊರಟಿದೆ. ಆವತ್ತು ನಂದಿಗ್ರಾಮ-ಸಿಂಗೂರುಗಳ ಬಡ ರೈತರು ಬಲಿಯಾಗಿದ್ದರೆ ಈ ಹೊತ್ತು ಲಾಲ್‌ಘರ್‌ನ ಬಡ ಆದಿವಾಸಿಗಳು ಬಲಿಯಾಗಬೇಕಿದೆ.

ಲಾಲ್‌ಘರ್ ಎಂಬುದು ಪಶ್ಚಿಮ ಬಂಗಾಳದ ಮಿಡ್ನಾಪುರ ಜಿಲ್ಲೆಯಲ್ಲಿ ಹರಡಿಕೊಂಡಿರುವ ವಿಸ್ತಾರವಾದ ಒಂದು ಅರಣ್ಯ ಪ್ರದೇಶ. ಬಹುತೇಕವಾಗಿ ಕಾಡಿನ ಲಘು ಉತ್ಪನ್ನಗಳನ್ನು ಆಯ್ದುಕೊಂಡೋ, ಬೇಟೆಯಾಡಿಕೊಂಡೋ ಅಥವಾ ತುಂಡು ಭೂಮಿಯಲ್ಲಿ ಅಲ್ಪ ಸ್ವಲ್ಪ ಸಾಗುವಳಿ ಮಾಡಿಕೊಂಡೋ ಬದುಕುತ್ತಿರುವ ಆದಿವಾಸಿ ಸಮುದಾಯ ಇಲ್ಲಿ ವಾಸಿಸುತ್ತಿದೆ. ಈ ದೇಶದಲ್ಲಿ ಆದಿವಾಸಿಗಳು ಅದೇನು ಕರ್ಮ ಮಾಡಿದ್ದಾರೋ ಗೊತ್ತಿಲ್ಲ, ದೇಶಕ್ಕೆ ಸ್ವತಂತ್ರ ಬಂದಾಗಿನಿಂದಲೂ ಗಣಿಗಾರಿಕೆಗಾಗಿ, ದೊಡ್ಡ ದೊಡ್ಡ ಡ್ಯಾಮ್‌ಗಳಿಗಾಗಿ, ರೆಸಾರ್ಟ್‌ಗಳಿಗಾಗಿ, ರಕ್ಷಿತ ಅರಣ್ಯಗಳಿಗಾಗಿ - ಹೀಗೇ ಒಂದಲ್ಲಾ ಒಂದು ಪ್ರಾಜೆಕ್ಟ್‌ಗಾಗಿ ಅವರನ್ನು ತಮ್ಮ ನೆಲದಿಂದ ಹೊರದಬ್ಬುತ್ತಲೇ ಬರಲಾಗುತ್ತಿದೆ. ಅದಕ್ಕೆ ಲಾಲ್‌ಘರ್‌ನ ಗಿರಿಜನರೂ ಹೊರತಾಗಿಲ್ಲ. 2008ರ ನವೆಂಬರ್‌ನಲ್ಲಿ ಪಶ್ಚಿಮ ಬಂಗಾಳದ ಸಿಪಿಎಂ ಸರ್ಕಾರ ಜಿಂದಾಲ್ ಎಂಬ ಬಂಡವಾಳಿಗನಿಗೆ ವಿಶೇಷ ಆರ್ಥಿಕ ವಲಯ ನಿರ್ಮಿಸುವುದಕ್ಕಾಗಿ ಈ ಬಡ ಆದಿವಾಸಿಗಳು ವಾಸಿಸುವ 5000 ಎಕರೆ ಜಮೀನನ್ನು ಕಿತ್ತುಕೊಡಲು ನಿರ್ಧಾರ ಮಾಡಿತು. ಆದಿವಾಸಿಗಳ ಒಂದು ವಿಶಿಷ್ಟ ಗುಣಲಕ್ಷಣ ಎಂದರೆ, ತಮ್ಮ ಅರಣ್ಯ ನೆಲದಿಂದ ಅವರನ್ನು ಒಕ್ಕಲೆಬ್ಬಿಸಿಬಿಟ್ಟರೆ ಒಂದು ರೀತಿಯಲ್ಲಿ ನೀರಿನಿಂದ ಹೊರತೆಗೆದ ಮೀನಿನಂತೆ ಒದ್ದಾಡುತ್ತಾ ಸತ್ತೇ ಹೋಗುತ್ತಾರೆ. ಏಕೆಂದರೆ, ಅವರಿಗೆ ಕಾಡಿನ ಉತ್ಪನ್ನಗಳನ್ನು ಆಯುವುದು, ಬೇಟೆಯಾಡುವುದು ಮತ್ತು ವ್ಯವಸಾಯ ಬಿಟ್ಟರೆ ಬೇರೆ ಕಸುಬುಗಳು ಗೊತ್ತಿಲ್ಲ. ಯಾವಾಗ, ಸರ್ಕಾರ ತಮ್ಮ ನೆಲವನ್ನು ಜಿಂದಾಲ್ ಬಂಡವಾಳಿಗನಿಗೆ ಕೊಟ್ಟು ತಮ್ಮನ್ನು ಕಾಡಿನಿಂದ ಹೊರದಬ್ಬುವ ನಿರ್ಧಾರ ಮಾಡಿತೋ ಅನಿವಾರ್ಯವಾಗಿ ಆದಿವಾಸಿ ಗಿರಿಜನರು ಅದರ ವಿರುದ್ಧವಾಗಿ ಪ್ರತಿಭಟನೆಗಿಳಿದರು. ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸುವುದಕ್ಕಾಗಿ ಹಾಗೂ ಹೋರಾಟನಿರತ ಆದಿವಾಸಿಗಳಿಗೆ ಬೆಂಬಲ ಸೂಚಿಸುವುದಕ್ಕಾಗಿ ಮಾವೋವಾದಿಗಳು 2008ರ ನವೆಂಬರ್‌ನಲ್ಲಿ ಜಿಂದಾಲ್‌ನ ಈ ವಿಶೇಷ ಆರ್ಥಿಕ ವಲಯದ ಉದ್ಘಾಟನೆಯಾದ ತಕ್ಷಣವೇ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಮತ್ತು ಜಿಂದಾಲ್‌ಗಳ ಬೆಂಗಾವಲು ಪಡೆಯ ಮೇಲೆ ಕ್ಲೆಮೋರ್ ಮೈನ್ಸ್ ಬಾಂಬ್‌ದಾಳಿ ಮಾಡಿಬಿಟ್ಟರು. ಇದರಲ್ಲಿ ಹಲವು ಪೊಲೀಸರು ಗಂಭೀರವಾಗಿ ಗಾಯಗೊಂಡರು.


ಇದನ್ನೇ ನೆಪ ಮಾಡಿಕೊಂಡ ಪಶ್ಚಿಮ ಬಂಗಾಳ ಪೊಲೀಸರು ಆದಿವಾಸಿ ಗಿರಿಜನರ ಹೋರಾಟವನ್ನು ಕ್ರೂರವಾಗಿ ಬಗ್ಗುಬಡಿಯುವುದಕ್ಕೆ ಪ್ರಾರಂಭಿಸಿಬಿಟ್ಟರು. ವಾಸ್ತವದಲ್ಲಿ, ಪೊಲೀಸರ ಮೇಲೆ ಬಾಂಬ್ ದಾಳಿ ನಡೆಸಿದ್ದು ಆದಿವಾಸಿಗಳಲ್ಲ, ಬದಲಿಗೆ ಮಾವೋವಾದಿಗಳು. ಪೊಲೀಸರಿಗೆ ನೆಪ ಬೇಕಿತ್ತು. ಅಹಿಂಸಾತ್ಮಕವಾಗಿಯೇ ಹೋರಾಡುತ್ತಿದ್ದ ಆದಿವಾಸಿ ಗಿರಿಜನರಿಗೆಲ್ಲಾ ಮಾವೋವಾದಿಗಳು ಎಂಬ ಹಣೆಪಟ್ಟಿ ಹಚ್ಚಿ ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡುವಂತೆ ಗಿರಿಜನರ ಹಾಡಿಗಳಿಗೆ ದಾಳಿಯಿಟ್ಟರು. ಗಿರಿಜನರಿನ್ನೂ ಬೆಳಗಿನ ಜಾವದ ನಿದ್ರೆಯಲ್ಲಿದ್ದಾಗಲೇ ಅವರ ಒಂದೊಂದು ಮನೆಗಳಿಗೂ ನುಗ್ಗಿ ಧ್ವಂಸ ಮಾಡಿದರು. ನೂರಾರು ಜನರನ್ನು ▶▶▶


ವಿಜಯ ಕರ್ನಾಟಕ

ವಿಭಟ್ಟರ 'ಜ್ಯೋತಿಷ್ಯ' ಪ್ರಸಂಗ!

ಬೆಂಗಳೂರಿನ ಶಂಕರಪುರಂನ ವಿಜಯ ಕರ್ನಾಟಕ ದಿನಪತ್ರಿಕೆಯ ವರ್ಲ್ಡ್ ಫೇಮಸ್ ಸಂಪಾದಕ ವಿಶ್ವೇಶ್ವರ ಭಟ್ಟರು ಪಿಗ್ಗಿ ಬಿದ್ದ ಪ್ರಸಂಗವಿದು.

ಹೇಳಿಕೇಳಿ ವಿಜಯ ಕರ್ನಾಟಕ RSS ಪಟುಗಳ ಆಶ್ರಯತಾಣ. ಇದರ ಯಾವ ಪುಟ ತಿರುವಿ ಹಾಕಿದರೂ ಬ್ರಾಹ್ಮಣ್ಯದ ಕಮಟು ವಾಸನೆ, ಪುರೋಹಿತರ ವಟವಟ, ಮಂದೂತ್ವದ ಗಬ್ಬುನಾತ ಮುಖಕ್ಕೆ ರಾಚುತ್ತಿರುತ್ತದೆ. ಇಷ್ಟು ಸಾಲದೆಂಬಂತೆ ಇತ್ತೀಚೆಗೆ ಜ್ಯೋತಿಷ್ಯ ವಿಜಯ, ಸೋಮಯಾಜಿಯ ದಿನಭವಿಷ್ಯ, ಆನಂದತೀರ್ಥ ಕೆರೆಗೋಡು ಎಂಬಾತನ ಪ್ರಶ್ನೆ ಪರಿಹಾರಗಳೆಂಬ ದಡ್ಡರ ಕಾಲಂಗಳೂ ಶುರುವಾಗುತ್ತಿವೆ. ಇದನ್ನೆಲ್ಲಾ ಲೆಕ್ಕ ಹಿಡಿದರೆ-ಅರ್ಥಾತ್ ವಿಕದೊಳಗಿನ ಬ್ರಾಹ್ಮಣ್ಯ-ಜ್ಯೋತಿಷ್ಯಗಳನ್ನು ಮೈನಸ್ ಮಾಡಿ ನೋಡಿದರೆ-ಸಿಗುವುದು ಬರೀ ಜಾಹೀರಾತುಗಳಷ್ಟೆ. ಉಳಿದಂತೆ ಆದರಲ್ಲಿ ಓದಲು ಲಾಯಕ್ಕಾಗಿರುವ, ಉಪಯೋಗವಾಗುವ ನಾಲ್ಕೇ ನಾಲ್ಕು ಸಾಲುಗಳೂ ಸಿಗುವುದು ದೌಟು ಎಂಬಂತಾಗಿ ಹೋಗಿದೆ.





ನವರತ್ನ ಉಂಗುರ ರಚನೆ

ಇಲ್ಲೊಂದು ನವೀನ ಕ್ರಮ

ಶ್ರೀಧರ ಭಟ್ಟನ ನವರತ್ನ ಜ್ಯೋತಿಷ್ಯ........

ಇಂಥ ತೌಡು ಕುಟ್ಟುವ ಜರ್ನಲಿಸಂನ ವಿಶ್ವೇಶ್ವರ ಭಟ್ಟರನ್ನು ಟಿ.ಎನ್. ಚಂದ್ರಕಾಂತ್ ಎನ್ನುವ ಸಾಮಾನ್ಯ ಓದುಗರೊಬ್ಬರು ಕಳೆದ ವಾರ 'ಜೋಕರ್ ಸ್ಥಿತಿ'ಗೆ ತಂದು ನಿಲ್ಲಿಸಿದ್ದಾರೆ.

ಏನಾಯಿತೆಂದರೆ ವಿಕದೊಳಗೆ ವಿಭಟ್ಟರು ಬಿಟ್ಟೂಬಿಡದೆ ಜ್ಯೋತಿಷ್ಯದ ಐಟಂಗಳನ್ನು ಪ್ರಿಂಟಿಸುತ್ತಾ ತಮ್ಮ ಜನ್ಮ ಪಾವನ ಮಾಡಿಕೊಳ್ಳುತ್ತಾ ಬರುತ್ತಿದ್ದಾರಲ್ಲವೆ, ಅದೇ ರೀತಿ ಮೊನ್ನೆ ಜೂನ್ 9 ರಂದು ವಿಜಯ ಕರ್ನಾಟಕದಲ್ಲಿ

'ನವರತ್ನ ಉಂಗುರ ರಚನೆ

ಇಲ್ಲೊಂದು ನವೀನಕ್ರಮ'

-ಎಂಬ ಬರಹ ಪ್ರಕಟವಾಯಿತು. ಇದನ್ನು ಬರೆದಾತ ಶ್ರೀಧರಭಟ್ಟ ಕಕ್ಕರ ಎಂಬ ಬೆಂಗಳೂರಿನ ಒಬ್ಬ ಜ್ಯೋತಿಷಿ.

ಈ ಮಹಾನುಭಾವನೋ ನವಗ್ರಹ, ನವರತ್ನಗಳೆಂಬ ಗೋಲಿಕಾರಣ್ಯದಲ್ಲಿ ಮನಬಂದಂತೆ ವಿಹರಿಸುತ್ತಾ ರವಿಗೆ ಮಾಣಿಕ್ಯ ಚಂದ್ರನಿಗೆ ಮುತ್ತು ಕುಜನಿಗೆ ಹವಳವನ್ನು ಜೋಡಿಸಬೇಕೆಂತಲೂ ಅದರಿಂದ ಶುಭಪ್ರಾಪ್ತಿ ಎಂತಲೂ ಓದುಗರಿಗೆ ಬೋಧನೆ ಮಾಡಿದ್ದನು.

ಇದನ್ನು ಓದಿದ ಟಿ.ಎನ್. ಚಂದ್ರಕಾಂತ್‌ರಿಗೆ ಮೈಯೆಲ್ಲಾ ಉರಿದುಹೋಗಿದೆ. ಅವರು ಯಾವ್ಯಾವುದೋ ಗ್ರಹಗಳಿಗೆ ಮತ್ಯಾವುದೋ ರತ್ನ ಇಡುವ ಬದಲಾಗಿ ವಿಕ ಸಂಪಾದಕ ವಿಶ್ವೇಶ್ವರ ಭಟ್ಟರ ಕಿವಿಗೇ ನೇರವಾಗಿ ಹೂ ಇಡಲು ತೀರ್ಮಾನಿಸಿದರು. ಇದೂ ಸಹ ಹೇಗಾಯಿತೆಂದರೆ ಶ್ರೀಧರ ಭಟ್ಟನ 'ನವರತ್ನ-ನವಗ್ರಹ' ಜ್ಯೋತಿಷ್ಯ ಓದಿದಾಗ ಚಂದ್ರಕಾಂತ್‌ರ ಗೆಳೆಯರ ನಡುವೆ ಒಂದು ಚರ್ಚೆ ಆಗಿದೆ.

ಜ್ಯೋತಿಷ್ಯ ಸುಳ್ಳು, ವಾಸ್ತುಶಾಸ್ತ್ರ ಅಸಂಬದ್ಧ.. ಹೀಗೆ

ಜೊತೆಗೆ "ಜ್ಯೋತಿಷ್ಯ ಹೇಳುವವರಂತೂ ಹುಟ್ಟಾ ವಂಚಕರು. ಯಾರ್ಯಾರೋ ಮನಸ್ಸಿಗೆ ತೋಚಿದ್ದು ಬರೆಯುತ್ತಾರೆ. ದಡ್ಡ ಸಂಪಾದಕರು ಅದನ್ನೇ ಪ್ರಸಾದವೆಂದು ಸ್ವೀಕರಿಸಿ ಪ್ರಿಂಟ್ ಮಾಡುತ್ತಾರೆ" ಅಂದಿದ್ದಾರೆ ಚಂದ್ರಕಾಂತ್.

ಆದರೆ ಇದನ್ನು ಒಪ್ಪದ ಅವರ ಮಿತ್ರರು "ಯಾರ್ಯಾರೋ ಜ್ಯೋತಿಷ್ಯದ ಬಗ್ಗೆ ಬರೆದರೆ ಅಷ್ಟು ಸುಲಭವಾಗಿ ಯಾರೂ ಪ್ರಿಂಟ್ ಮಾಡಲ್ಲ ಹೋಗಯ್ಯ" ಅಂದಿದ್ದಾರೆ. ಸರಿ, ಚಂದ್ರಕಾಂತ್ ನಿಂತ ಹೆಜ್ಜೆಯಲ್ಲೇ "ವಿಜಯ ಕರ್ನಾಟಕದಲ್ಲಿ ನಾನು ಒಂದು ಜ್ಯೋತಿಷ್ಯ ಕುರಿತ ಲೇಖನ ಬರೀತೀನಿ, ಅದು ಪ್ರಿಂಟ್ ಆಗುತ್ತೆ ನೋಡ್ತಿರಿ" ಎಂದು ಬೆಟ್ ತೆಗೆದುಕೊಂಡಿದ್ದಾರೆ.



ಇಲ್ಲಿ ಚಂದ್ರಕಾಂತ್ ಪರಿಚಯ ಹೇಳಬೇಕೆಂದರೆ ಅವರು ವಿಜಯಾ ಕಾಲೇಜಿನಲ್ಲಿ ಕೆಮಿಸ್ಟ್ರಿ ಲೆಕ್ಚರರ್ ಆಗಿದ್ದವರು. ಈಗ ತಮ್ಮದೇ SAFE ಎಂಬ ಟುಟೋರಿಯಲ್ಸ್ ನಡೆಸುತ್ತಿದ್ದಾರೆ. ಅವರಿಗೆ ರಾಜ್ಯಾದ್ಯಂತ ಸಾವಿರಾರು ಶಿಷ್ಯಗಣವಿದೆ. ಅತೀ ಮುಖ್ಯವಾಗಿ ಈ ಚಂದ್ರಕಾಂತ್ ನಾಸ್ತಿಕವಾದಿ. ದೇವರು, ದೆವ್ವ, ಜಾತಕ-ಜ್ಯೋತಿಷ್ಯ ಏನನ್ನೂ ನಂಬದ ಆಸಾಮಿ.

ಅಂತ ಚಂದ್ರಕಾಂತ್ ವಿಭಟ್ಟ ಹಾಗೂ ಶ್ರೀಧರ ಭಟ್ ಸೇರಿ ಕಂಡುಹಿಡಿದಿದ್ದ ನವರತ್ನ ಉಂಗುರದ ಜ್ಯೋತಿಷ್ಯಕ್ಕೆ ಪ್ರತಿಯಾಗಿ ತಾವೂ ಒಂದು ಕಿರುಲೇಖನ ಬರೆದು ಕಳಿಸಿದರು.

ಅಸಲಿ ತಮಾಷೆ ನಡೆದದ್ದೇ ಆಗ. ವಿಶ್ವೇಶ್ವರ ಭಟ್ಟರು ಲೇಖನದ ತಲೆ ಬುಡ ಏನಂತಲೂ ನೋಡದೆ 'ನವರತ್ನ ಉಂಗುರ ಮತ್ತೊಂದು ಕ್ರಮ' ಎಂಬ ಹೆಡ್ಡಿಂಗ್‌ನಲ್ಲಿ ಅದನ್ನು ಪ್ರಕಟಿಸಿಬಿಟ್ಟದ್ದಾರೆ.

ದಿ. 16.6.09 ರ ವಿಜಯ ಕರ್ನಾಟಕದ ಪುಟ 7ರಲ್ಲಿ ಡಾ. ಚಂದ್ರಕಾಂತ (ಜ್ಯೋತಿಷಿ) ಬೆಂಗಳೂರು ಎಂಬ ಹೆಸರಿನಲ್ಲೇ ಈ ಬರಹ ಪ್ರಕಟವಾಗಿದೆ.

ಚಂದ್ರಕಾಂತ್ ಗೆಳೆಯರು ಈ ಪರಿಹಾಸ್ಯ ಕಂಡು ದಂಗಾಗಿಹೋಗಿದ್ದಾರೆ. ಜ್ಯೋತಿಷ್ಯ ಶಾಸ್ತ್ರ ಒಂದು ಅಸಂಬದ್ಧಗಳ ಕಂತೆ, ದಡ್ಡರಿಗಾಗಿ ಬುದ್ಧಿವಂತರು ತಯಾರಿಸಿರುವ ಐಟಂ ಅದು ಎಂಬುದು ಬೇರೆ ಮಾತು. ಆದರೆ ಮೂಢನಂಬಿಕೆ ಇರುವ ಜನ ಅದನ್ನೊಂದು ಶಾಸ್ತ್ರ ಅಂತಲೇ ನಂಬುತ್ತಾರೆ.



ಜ್ಯೋತಿಷ್ಯ ವಿಜಯ

ನವರತ್ನ ಉಂಗುರ ಮತ್ತೊಂದು ಕ್ರಮ

ವಿಚಾರವಾದಿ ಚಂದ್ರಕಾಂತ್ ಬರೆದ ತಮಾಷೆಯ ಜ್ಯೋತಿಷ್ಯ ವಿ.ಕ.ದಲ್ಲಿ ಪ್ರಕಟಗೊಂಡಿರುವುದು....

ದಡ್ಡರಿಗಾಗಿ ಬುದ್ಧಿವಂತರ ಸ್ಕೀಮೇ ಜ್ಯೋತಿಷ್ಯ

ಭೂಮಿಯಿಂದ ಲಕ್ಷಾಂತರ ಕಿಲೋಮೀಟರು ದೂರದಲ್ಲಿರುವ ಸೂರ್ಯ, ಚಂದ್ರ, ಶುಕ್ರ, ಗುರು, ಶನಿ, etc ಗ್ರಹಗಳನ್ನು ಮನುಷ್ಯನ ಜೀವನಕ್ಕೆ ಮೊದಲ ಗಂಟು ಹಾಕಿದವರು ಪುರೋಹಿತರು. ಈಗಲೂ ಸಾವಿರಾರು ಜನ ಇದನ್ನೇ ಒಂದು ದಂಧೆ ಮಾಡಿಕೊಂಡು ಮುಗ್ಧರನ್ನು, ಪೆದ್ದುಗುಂಡ ಜನರನ್ನು ಸುಲಿಯುತ್ತಾ ಹೊಟ್ಟೆ ಹೊರೆದು ಕೊಳ್ಳುತ್ತಿದ್ದಾರೆ. ಇಂತಾ ಅತೀ ಬುದ್ಧಿವಂತ ಕೆಲವರೇ ಸುಲಿಗೆಯ ಹೊಸ ಸ್ಕೀಮು ಹುಡುಕಿ ಈಗ 'ನವಗ್ರಹ-ನವರತ್ನ'ದ ಆಟ ಚಾಲು ಮಾಡಿದ್ದಾರೆ.



ಈಗ ವಿಜಯ ಕರ್ನಾಟಕ ಇಂಥ ಸುಲಿಯುವವರ ಬೆನ್ನು ತಟ್ಟುತ್ತಾ ಸುಲಿಸಿಕೊಳ್ಳುವವರ ಕಿವಿಗೆ ಹೂ ಮುಡಿಸುತ್ತಾ 'ನವರತ್ನ' ಲೇಖನಗಳ ಸೀರಿಯಲ್ ಅನ್ನೇ ಪ್ರಕಟಿಸುತ್ತಿದೆ.

ಈಗಂತೂ ಯಾವ ಟಿವಿ ಚಾನಲ್ ನೋಡಿದರೂ ದಿನಬೆಳಗಾದರೆ ಜಾತಕ-ಜ್ಯೋತಿಷ್ಯದ್ದೇ ಭರಾಟೆ. ನಿಜವೋ ಸುಳ್ಳೋ ಅವರು ನಾಲ್ಕು ಮಾತು ಒದರಿ ತೊಲಗುತ್ತಾರೆ.



ಆದರೆ ಟಿ.ಎನ್. ಚಂದ್ರಕಾಂತ್ ಬೇಕಂತಲೇ ತಪ್ಪು ತಪ್ಪು ವಿಚಾರ ಬರೆದು ಕಳಿಸಿದರೂ ಅದು ಸರೀನಾ ತಪ್ಪಾ ಎಂತಲೂ ಚೆಕ್ ಮಾಡದೆ ಪತ್ರಿಕೆಯ ಸಂಪಾದಕ ಅದನ್ನು ಪ್ರಕಟಿಸುತ್ತಾನೆಂದರೆ ಏನು ಹೇಳಬೇಕು?

ಈಗ ಚಂದ್ರಕಾಂತ್ "ನಾನು ಜ್ಯೋತಿಷಿಯೇ ಅಲ್ಲ, ಬೇಕಂತ ಪರೀಕ್ಷೆ ಮಾಡಲು ಮನಸ್ಸಿಗೆ ಬಂದಿದ್ದು ಬರೆದು ಕಳಿಸಿದೆ. ಈಗ ಅದೂ ಪ್ರಿಂಟಾಗಿದೆಯಲ್ಲ" ಅಂತ ಗೇಲಿ ಮಾಡುತ್ತಿದ್ದಾರೆ.

ವಿಭಟ್ಟರು ಇದರಿಂದಲಾದರೂ ಪಾಠ ಕಲಿಯಲಿ. ಅದು ಬಿಟ್ಟು ನಿರುದ್ಯೋಗ ಸಮಸ್ಯೆ ಇರುವವರಿಗೆ, ದಕ್ಷಿಣ ದಿಕ್ಕಿನಲ್ಲಿರುವ ಕಂಪನಿಗೆ ಉತ್ತರ ದಿಕ್ಕಿನಿಂದ ಅರ್ಜಿ ಹಾಕು, ಎಂದು ಅನಂತ ತೀರ್ಥನಿಂದ ಸಲಹೆ ಕೊಡಿಸುವುದು ಇನ್ನು ಮದುವೆಯಾಗಿಲ್ಲದಿರುವವರಿಗೆ 'ಪೂರ್ವ ದಿಕ್ಕಿಗೆ ಅಂಡು ತಿರುಗಿಸಿ, ಪಶ್ಚಿಮ ದಿಕ್ಕಿಗೆ ತಲೆ ಮಾಡಿ ಕೂತಾಗ ಈಶಾನ್ಯ ದಿಕ್ಕಿನಿಂದ ಉಟ್ಟಿಟ್ಟು ತರುವ ಕನ್ಯೆಯನ್ನು ಮದುವೆಯಾದರೆ ನಿನ್ನ ಜೀವನ ಸಲೀಸು' ಎಂಬಂತ ಹಾಸ್ಯಾಸ್ಪದ ಭವಿಷ್ಯ ಹೇಳಿಸುವುದನ್ನು ನಿಲ್ಲಿಸಬಾರದಾ!

ಚಂದ್ರಕಾಂತರಿಂದ ಕಿವಿಗೆ ಚೆಂಡು ಹೂ ಸಿಗಾಸಿಕೊಂಡ ಮೇಲಾದರೂ!

ಹಾಗಿರುವಾಗ ವಿಕ ಪ್ರತಿ ದಿನ ಅರ್ಧ ಪುಟವನ್ನು ಜ್ಯೋತಿಷ್ಯ ರಾಶಿಫಲಗಳಿಗೆ ಖರ್ಚು ಮಾಡುತ್ತಿದೆಯಲ್ಲಾ ಅದನ್ನು ಕನಿಷ್ಠ ಪಕ್ಷ ಆ ಕ್ಷೇತ್ರದ ತಜ್ಞರಿಂದಲಾದರೂ ಬರೆಸಬೇಕಲ್ಲವೆ?

ಅದು ಬಿಟ್ಟು ಯಾರೋ ಹುಡುಗಾಟಕ್ಕೆ ಬಾಲಿಶವಾಗಿ ಬರೆದು ಕಳಿಸಿದ್ದನ್ನೇ ವಿಭಟ್ಟರು ಅಷ್ಟು ಅರ್ಜೆಂಟಾಗಿ ಪ್ರಿಂಟಿಸಿದ್ದೇಕೆ?

ಅದು ಪ್ರಪಂಚದ ಅತ್ಯಧಿಕ ಪ್ರಸಾರವಿರುವ ಕನ್ನಡ ದಿನಪತ್ರಿಕೆ ವಿಜಯ ಕರ್ನಾಟಕದ ಗುಣಮಟ್ಟ!

ಸಂಪಾದಕ ವಿಶ್ವೇಶ್ವರ ಭಟ್ಟರು ತಮ್ಮ ಪೆದ್ದು ಓದುಗರಿಗೆ ನವರತ್ನ ಉಂಗುರ ಮಾರ್ಕೆಟಿಂಗ್ ಮಾಡಲು ಹವಣಿಸುತ್ತಿರುವಾಗ ಕಿಲಾಡಿ ಓದುಗನೊಬ್ಬ ಭಟ್ಟರ ಕಿವಿಗೆ ಹೂ ಮುಡಿಸಿ ನಗುತ್ತಿದ್ದಾನೆ.

ಇದು ಚೆಂಡು ಹೂ ಸೈಜಿನದ್ದೇ ಹೂ

● ಬಿಳಿದಾಳೆ ಪಾರ್ವತೀಶ

▶▶

ಬಂಧಿಸಿ ಪೊಲೀಸ್ ಸ್ಟೇಶನ್‌ಗಳಲ್ಲಿ ಚಿತ್ರಹಿಂಸೆ ಕೊಟ್ಟರು. ಮಹಿಳೆಯರ ಮೇಲೆ ಲೈಂಗಿಕವಾಗಿ ದಾಳಿ ನಡೆಸಿದರು. ಮಹಿಳೆಯರು, ವೃದ್ಧರು, ಮಕ್ಕಳೆನ್ನದೆ ರೈಫಲ್‌ಗಳ ಒರಟು ತುದಿಯಿಂದ ಗುದ್ದಿಹಾಕಿದರು. ಈ ಹೊಡೆತದಿಂದಾಗಿ ಒಬ್ಬ ಮಹಿಳೆಯಂತೂ ತನ್ನ ಎರಡೂ ಕಣ್ಣುಗಳನ್ನು ಶಾಶ್ವತವಾಗಿ ಕಳೆದುಕೊಳ್ಳಬೇಕಾಯಿತು. ಒಬ್ಬ ಗರ್ಭಿಣಿ ಮಹಿಳೆಯನ್ನು (ಆಕೆಯ ಗಂಡನನ್ನು ಮೊದಲೇ ಬಂಧಿಸಲಾಗಿತ್ತು) ಮನೆಯಿಂದ ಹೊರಗೆಳೆದು ನಡುಬೀದಿಯಲ್ಲೇ ಲಾಠಿಗಳಿಂದ ಕ್ರೂರವಾಗಿ ಬಡಿದು ಹಿಂಸೆ ಕೊಟ್ಟರು. ಹಳ್ಳಿಯಲ್ಲಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಮನೆಗೆ ಹಿಂತಿರುಗುತ್ತಿದ್ದ ಶಾಲಾಮಕ್ಕಳನ್ನು, ಒಬ್ಬ ನಿವೃತ್ತ ಶಿಕ್ಷಕನನ್ನು ಬಂಧಿಸಿ ಕಾನೂನುಬಾಹಿರವಾಗಿ ಬಂಧಿಸಿ ಲಾಕಪ್‌ನಲ್ಲಿ ದೈಹಿಕ ಹಿಂಸೆ ಕೊಟ್ಟರು. ದುರಂತ ಎಂದರೆ ಬಾಂಬ್ ಸ್ಫೋಟಕ್ಕೂ, ಈ ಮುಗ್ಧ ಆದಿವಾಸಿಗಳಿಗೂ ಯಾವುದೇ ಸಂಬಂಧವಿರಲಿಲ್ಲ, ವಾಸ್ತವದಲ್ಲಿ ಇವರೆಲ್ಲಾ ಸ್ಫೋಟ ನಡೆದ ಸ್ಥಳದಿಂದ ಬಹುದೂರ ಇರುವ ಬಿನಾಪುರ್ ಮತ್ತು ಲಾಲ್‌ಘರ್ ಪ್ರದೇಶದವರಾಗಿದ್ದರು. ನಿಜ ಹೇಳಬೇಕೆಂದರೆ ಜಿಂದಾಲ್ ವಿಶೇಷ ಆರ್ಥಿಕ ವಲಯವನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದ ಆದಿವಾಸಿಗಳನ್ನು ಬಗ್ಗು ಬಡಿಯುವುದಕ್ಕೆ ಪೊಲೀಸರಿಗೆ ಈ ಬಾಂಬ್ ಸ್ಫೋಟ ಒಂದು ವರದಾನವಾಗಿ ಬಂದಿತ್ತು.


ಯಾವಾಗ ಪೊಲೀಸರ ದೌರ್ಜನ್ಯಗಳು ಎಲ್ಲೆ ಮೀರಿದವೋ ಆದಿವಾಸಿಗಳಿಗೆ ತಮ್ಮ ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರ ಎತ್ತಿಕೊಳ್ಳದೇ ಬೇರೆ ದಾರಿ ಉಳಿಯಲಿಲ್ಲ. ಶಸ್ತ್ರಾಸ್ತ್ರ ಎಂದರೆ ಅವರ ಪಾಲಿಗೆ ಬಿಲ್ಲು, ಬಾಣ, ಭರ್ಜಿಗಳು. ಪೊಲೀಸರು ಬಂದೂಕು, ಗ್ರೆನೇಡ್ ಸ್ಫೋಟಕ, ಟಿಯರ್ ಗ್ಯಾಸ್‌ಗಳನ್ನು ಹಿಡಿದು ಅವರ ಮೇಲೆ ದಾಳಿ ಮಾಡಿದರೆ ಅದಕ್ಕೆ ಆದಿವಾಸಿಗಳು ಬಿಲ್ಲುಬಾಣಗಳಿಂದ ಉತ್ತರಿಸಲಾರಂಭಿಸಿದರು. ದೌರ್ಜನ್ಯ, ಶೋಷಣೆ, ಅವಮಾನಗಳನ್ನು ಸಹಿಸಿಕೊಳ್ಳಲು ಅವರು ಸಿದ್ಧರಿರಲಿಲ್ಲ. ಈ ಪ್ರಕ್ರಿಯೆಯಲ್ಲಿಯೇ 'ಪೊಲೀಸ್ ದೌರ್ಜನ್ಯಗಳ ವಿರೋಧಿ ಪ್ರಜಾ ಸಮಿತಿ' ಎಂಬ ಸಮಿತಿಯನ್ನೂ ರೂಪಿಸಿಕೊಂಡರು. ಕೆಲವೇ ಆದಿವಾಸಿ ಹಾಡಿಗಳಿಗೆ ಸೀಮಿತವಾಗಿದ್ದ ಈ ಹೋರಾಟ ಕೆಲವೇ ದಿನಗಳಲ್ಲಿ ಅಕ್ಕಪಕ್ಕದ ಮೂರು ಜಿಲ್ಲೆಗಳ 1100 ಗಿರಿಜನ ಹಾಡಿಗಳಿಗೆ ವಿಸ್ತರಿಸಿತು. ಹಳ್ಳಿ ಮಟ್ಟದಲ್ಲಿ ಸಮಿತಿಯ ಘಟಕಗಳು ರೂಪುಗೊಂಡವು. ಹೊರಗಿನಿಂದ ಪೊಲೀಸರಾಗಲಿ, ಬಂಡವಾಳಶಾಹಿಗಳಾಗಲಿ ಅಥವಾ ಸಿಪಿಎಂನ ಗೂಂಡಾಗಳಾಗಲಿ ಈ ಪ್ರದೇಶವನ್ನು ಪ್ರವೇಶಿಸದಂತೆ ರಸ್ತೆಗಳನ್ನು ಬ್ಲಾಕ್ ಮಾಡಿ ಇಡೀ ಪ್ರದೇಶವನ್ನು 'ವಿಮೋಚಿತ ಪ್ರದೇಶ'ವನ್ನಾಗಿ ಪರಿವರ್ತಿಸಿದರು. ಮಹಿಳೆಯರು ಮತ್ತು ಯುವಕರು ಈ ಪ್ರದೇಶದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡರು. ತಮ್ಮ ತಮ್ಮ ನಡುವಿನ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವುದಕ್ಕಾಗಿ ಪುಟ್ಟ ರಸ್ತೆಗಳನ್ನು ನಿರ್ಮಿಸಿಕೊಂಡರು. ಉಚಿತ ಆರೋಗ್ಯ ಸೇವೆ ಒದಗಿಸುವುದಕ್ಕಾಗಿ ಆರೋಗ್ಯ ಕೇಂದ್ರಗಳನ್ನು ತೆರೆದರು. ನೀರಾವರಿಗಾಗಿ ಪುಟ್ಟ ಕೆರೆಕಟ್ಟೆಗಳನ್ನು ಕಟ್ಟಿಕೊಂಡರು. ವಾಸ್ತವದಲ್ಲಿ ಸ್ವಾತಂತ್ರ್ಯ ಬಂದ ಅರವತ್ತು ವರ್ಷಗಳಲ್ಲಿ ಸಿಪಿಎಂ ಕಮ್ಯೂನಿಸ್ಟರನ್ನೂ ಒಳಗೊಂಡಂತೆ ಅಧಿಕಾರ ನಡೆಸಿದ ಯಾವುದೇ ಸರ್ಕಾರಗಳು ಈ ಗಿರಿಜನರಿಗಾಗಿ ಮಾಡಲು ಸಾಧ್ಯವಿಲ್ಲದ್ದನ್ನು ಆದಿವಾಸಿಗಳೇ ಖುದ್ದಾಗಿ ಯಾವ ಸರ್ಕಾರಿ ನೆರವಿಲ್ಲದೇ ಮಾಡಿಕೊಂಡಿದ್ದರು.

ಈಗ ಸಿಪಿಎಂ ಸರ್ಕಾರಕ್ಕೆ ತನ್ನ ರಾಜ್ಯದೊಳಗೇ ತನ್ನ ಅಧಿಕಾರ ನಡೆಯದಂತಹ ಒಂದು 'ವಿಮೋಚಿತ ಪ್ರದೇಶ'ವೊಂದು ರೂಪುಗೊಂಡಿರುವುದು ಅರಿವಿಗೆ ಬಂತು. ನಂದಿಗ್ರಾಮದಲ್ಲಿ ಐವತ್ತಕ್ಕೂ ಹೆಚ್ಚು ಹೆಣಗಳನ್ನು ಉರುಳಿಸಿ ಅದನ್ನು ಜನರಿಂದ ಮತ್ತೆ ವಶಪಡಿಸಿಕೊಂಡಂತೆಯೇ ಈಗ ಲಾಲ್‌ಘರ್ ವಿಮೋಚಿತ ಪ್ರದೇಶವನ್ನೂ ವಶಪಡಿಸಿಕೊಳ್ಳುವುದಕ್ಕೆ ಸರ್ಕಾರ ಮುಂದಾಗಿದೆ. ಇತ್ತೀಚಿನ ವರದಿಗಳ ಪ್ರಕಾರ 500 ಕೇಂದ್ರ ಮೀಸಲು ಪಡೆಯ ಪೊಲೀಸರು, ನಾಲ್ಕು ಟ್ರಕ್ ರಾಜ್ಯ ಸಶಸ್ತ್ರ ಪೊಲೀಸರು ಹಾಗೂ ಲೆಕ್ಕವಿಲ್ಲದಷ್ಟು ಸಿಪಿಎಂ ಗೂಂಡಾಗಳು ಸೇರಿಕೊಂಡು ನಾಲ್ಕೂ ದಿಕ್ಕಿನಿಂದ ಈ ಪ್ರದೇಶಕ್ಕೆ ಮುತ್ತಿಗೆ ಹಾಕಿದ್ದಾರೆ. ಬಂದೂಕು, ಗ್ರೆನೆಡ್ ಬಾಂಬ್, ಟಿಯರ್‌ಗ್ಯಾಸ್, ಲಾಠಿ, ಬೂಟುಗಳ ದಾಳಿಗೆ ಅಮಾಯಕ ಆದಿವಾಸಿಗಳು ಬಿಲ್ಲು-ಬಾಣಗಳಿಂದ ಉತ್ತರಿಸುತ್ತಿದ್ದಾರೆ. ಎಷ್ಟು ಆದಿವಾಸಿ ಹೆಣಗಳು ಉರುಳುತ್ತವೆಯೋ ಗೊತ್ತಿಲ್ಲ, ಸದ್ಯದಲ್ಲಿ ಪಶ್ಚಿಮ ಬಂಗಾಳದ ಕಮ್ಯೂನಿಸ್ಟರು ತಮ್ಮ ನೆಲದಲ್ಲಿ ಇನ್ನೊಂದು ನಂದೀಗ್ರಾಮವನ್ನು ಸೃಷ್ಟಿಸಿದರೂ ಆಶ್ಚರ್ಯವಿಲ್ಲ. ■

ಮುತ್ತುಟ್ಟು ಫೈನಾನ್ಸ್-ಎಸ್.ಬಿ.ಜ್ಯುವೆಲ್ಲರ್ಸ್

ಎರಡು ರೋಚಕ ಡಕಾಯಿತಿಗಳ ಮರ್ಮ

ಯಾವ ಹಾಲಿವುಡ್ ಚಿತ್ರದ ಕತೆಗೂ ಕಮ್ಮಿಯಿಲ್ಲದಂತೆ ನಡೆದದ್ದು ಮುತ್ತುಟ್ಟು ಫೈನಾನ್ಸ್ ದರೋಡೆ. ವಿದ್ಯಾರಣ್ಯಪುರದ ಎಸ್.ಬಿ. ಜ್ಯುವೆಲ್ಸ್ ಡಕಾಯಿತಿಯಂತೂ ಹಿಂದಿಯಲ್ಲಿ ಅಮಿತಾಬ್ ನಟಿಸಿದ 'ಕಾಂಟೆ' ಚಿತ್ರದಂತೆಯೇ ಇದೆ. ಈ ಎರಡೂ ಹೈಟೆಕ್ ಡಕಾಯಿತಿಗಳ ಹಿಂದೆ ಒಂದೇ ತಂಡವಿಲ್ಲ ಎಂಬುದು ಎಷ್ಟು ಸತ್ಯವೋ ಅಷ್ಟೇ ತಲೆನೋವಿನ ಸಂಗತಿಯೆಂದರೆ ಇಂಥ ಡಕಾಯಿತಿಗಳ ಹಿಂದಿರುವುದು ಹಳೇ ಡಕಾಯಿತಿ ಗ್ಯಾಂಗ್‌ಗಳಲ್ಲ. ಈ ಪಾಟಿ ಡಕಾಯಿತಿ ಮಾಡಿದ ನಿರ್ಮಲ್ ಓರ್ವ ಸಾಫ್ಟ್‌ವೇರ್ ತಜ್ಞ. ಹಿಂದ್ಯಾವತ್ತೂ ಕ್ರೈಮು ಎಸಗಿದವನಲ್ಲ. ಯಾವ ಸುಳಿವನ್ನೂ ಬಿಟ್ಟಿರಲಿಲ್ಲ. ವೃತ್ತಿಪರ ಡಕಾಯಿತರೋ ಪಾತಕಿಗಳೋ ಆಗಿದ್ದರೆ ಹೇಗೋ ಪತ್ತೆ ಹಚ್ಚಬಹುದು. ಆದರೆ ಯಾವ ಅಪರಾಧಿ ಹಿನ್ನೆಲೆಯೂ ಇಲ್ಲದೇ ಸಣ್ಣದೊಂದು 'ಕ್ಲೂ' ಕೂಡ ಉಳಿಸದೇ ಭಾರಿ ಡಕಾಯಿತಿ ಮಾಡುವ ಮಟ್ಟಕ್ಕೆ ನಿರುದ್ಯೋಗಿ ಟೆಕ್ಕಿಗಳೂ ನಿಂತರೆಂದರೆ ಬೆಂಗಳೂರಿನ ಪಾಡೇನು?


ವಶಪಡಿಸಿಕೊಳ್ಳಲಾದ ಚಿನ್ನಾಭರಣ.....

ದರೋಡೆಯ ಮೊತ್ತ, ಬಳಸಿದ ತಂತ್ರ ಮತ್ತು ನಡೆಸಿದ ರೀತಿಯನ್ನೇ ಲೆಕ್ಕಹಾಕುವುದಾದರೆ; ಇದು ಬೆಂಗಳೂರಿಗಷ್ಟೇ ಅಲ್ಲ, ಇಡೀ ಕರ್ನಾಟಕಕ್ಕೇ ಅಪರಿಚಿತವಾದ ಡಕಾಯಿತಿ. ಜೂನ್ ಎರಡರಂದು ಜೀವನ ಭೀಮಾನಗರ ಪೊಲೀಸ್‌ಠಾಣೆ ವ್ಯಾಪ್ತಿಯ ಮುತ್ತುಟ್ಟು ಫೈನಾನ್ಸ್ ದರೋಡೆ ಮತ್ತು ಜೂನ್ 14ರಂದು ವಿದ್ಯಾರಣ್ಯಪುರದ ಎಸ್.ಬಿ. ಜ್ಯುವೆಲ್ಸ್‌ಗೆ ಹಾಡುಹಗಲೇ ಸುರಂಗ ಕೊರೆದ ದೋಚಿದ ರೀತಿಗೆ ಪೊಲೀಸರೇ ದಂಗುಬಡಿದಿದ್ದಾರೆ.

ಯಾವ ಹಾಲಿವುಡ್ ಚಿತ್ರದ ಕತೆಗೂ ಕಮ್ಮಿಯಿಲ್ಲದಂತೆ ನಡೆದದ್ದು ಮುತ್ತುಟ್ಟು ಫೈನಾನ್ಸ್ ದರೋಡೆ. ವಿದ್ಯಾರಣ್ಯಪುರದ ಎಸ್.ಬಿ. ಜ್ಯುವೆಲ್ಸ್ ಡಕಾಯಿತಿಯಂತೂ ಹಿಂದಿಯಲ್ಲಿ ಅಮಿತಾಬ್ ನಟಿಸಿದ 'ಕಾಂಟೆ' ಚಿತ್ರದಂತೆಯೇ ಇದೆ. ಈ ಎರಡೂ ಹೈಟೆಕ್ ಡಕಾಯಿತಿಗಳ ಹಿಂದೆ ಒಂದೇ ತಂಡವಿಲ್ಲ ಎಂಬುದು ಎಷ್ಟು ಸತ್ಯವೋ ಅಷ್ಟೇ ತಲೆನೋವಿನ ಸಂಗತಿಯೆಂದರೆ ಇಂಥ ಡಕಾಯಿತಿಗಳ ಹಿಂದಿರುವುದು ಹಳೇ ಡಕಾಯಿತಿ ಗ್ಯಾಂಗ್‌ಗಳಲ್ಲ, ಹಿಂದೆ ಕ್ರೈಮ್ ಪಟ್ಟಿಯಲ್ಲಿದ್ದ ತಂಡಗಳಾದರೆ ಪತ್ತೆ ಸುಲಭ. ದೋಚಿದ ರೀತಿ, ಬಳಸಿದ ತಂತ್ರಗಳ ಆಧಾರದ ಮೇಲೆ ಇಂಥದ್ದೇ ತಂಡದ ಕೃತ್ಯವಿದು ಎಂದು ಪಳಗಿದ ಪೊಲೀಸರು ಲೆಕ್ಕ ಹಾಕುತ್ತಿದ್ದರು. ಒಂದಲ್ಲಾ ಒಂದು ಸುಳಿವು ಸಿಗುತ್ತಿತ್ತು.

ಆದರೆ ಮುತ್ತುಟ್ಟು ಫೈನಾನ್ಸ್ ಡಕಾಯಿತಿಯಲ್ಲಿ ಇಂಥ ಯಾವುದೇ ಕ್ಲೂ ಇರಲಿಲ್ಲ. ಈತನಕ ಕರ್ನಾಟಕದಲ್ಲಿ ನಡೆದ ದರೋಡೆ ಪ್ರಕರಣಗಳ ಪೈಕಿ ಇದು ದೊಡ್ಡ ಮೊತ್ತದ ಡಕಾಯಿತಿಯಾಗಿತ್ತು. ಕಮೀಷನರ್ ಶಂಕರ್‌ಬಿದರಿ ಫೈನಾನ್ಸ್ ಮತ್ತು ಆಭರಣಗಳ ಮಳಿಗೆಗಳು ತಮ್ಮದೇ ಆದ ಸೆಕ್ಯೂರಿಟ್ ವ್ಯವಸ್ಥೆ ಮಾಡಿಕೊಳ್ಳುವಂತೆ ಕಾನೂನಿಗೆ ತಿದ್ದುಪಡಿ ತರಲು ತಲೆಕೆಡಿಸಿಕೊಳ್ಳುವಷ್ಟು ಹೈಟೆಕ್ಕಾಗಿದ್ದ ಮುತ್ತುಟ್ಟು ಫೈನಾನ್ಸ್ ಡಕಾಯಿತಿಯ ಹಿಂದಿದ್ದ ನಿರ್ಮಲರಾಜ್ ಹೇಳಿಕೇಳಿ ಸಾಫ್ಟ್‌ವೇರ್ ತಜ್ಞ. ಐದೂವರೆ ಕೋಟಿ ರೂಪಾಯಿಗಳಷ್ಟು ಬೃಹತ್ ಮೊತ್ತದ ಚಿನ್ನಾಭರಣಗಳನ್ನು ಫೈನಾನ್ಸ್ ಕಚೇರಿಗೆ ನುಗ್ಗಿ ದರೋಡೆ ಮಾಡುವಷ್ಟು ಪರಿಣತಿಯಾಗಲಿ ಅದಕ್ಕೆ ಬೇಕಾದ ನುರಿತ ತಂಡವಾಗಲಿ ಆತನಿಗಿತ್ತೆಂಬುದಕ್ಕೆ, ಆತ ಈತನಕ ಸಣ್ಣದೊಂದು ಹೊಡೆದಾಟ ಕೂಡಾ ನಡೆಸಿದವನಲ್ಲ.

ಯಾವುದೇ ಅಪರಾಧಿ ಹಿನ್ನೆಲೆಯಿಲ್ಲದ ನಿರ್ಮಲ್ ರಾಜ್ ಈತನಕ ಯಾರೂ ಮಾಡದ ಬೃಹತ್ ಮೊತ್ತದ ದರೋಡೆ ನಡೆಸಿದ್ದು ಎಂಥವರನ್ನೂ ಅಚ್ಚರಿಗೆ ಬೀಳಿಸುವಂತಿದೆ. ಇಂದಿರಾನಗರದ ಸಮೀಪದ ಪೀಸಿಎಸ್ ಲೇಔಟಿನ ನಿರ್ಮಲ್‌ನ ಪೂರ್ತಿ ಹೆಸರು ನಿರ್ಮಲ್ ರಾಜ್‌ಕುಮಾರ್. ಮದುವೆಯಾಗಿದೆ. ಮಗುವೂ ಇದೆ. ಮೂಲತಃ ರಾಜಸ್ತಾನದ ಈತನ ತಂದೆ ಯಾವುದೋ ಕಾಲಕ್ಕೆ ಬೆಂಗಳೂರಿಗೆ ಬಂದು ಲೇವಾದೇವಿ ನಡೆಸಿಕೊಂಡಿದ್ದ. ಮೊದಮೊದಲು ಕಂಪ್ಯೂಟರ್ ನೆಟ್‌ವರ್ಕಿಂಗ್ ಮಾಡಿಕೊಂಡಿದ್ದ ನಿರ್ಮಲ್ ಕೆಲಕಾಲ ರಿಯಲ್ ಎಸ್ಟೇಟ್ ದಂಧೆಗೂ ಕೈಹಾಕಿದ್ದ. ದುಡ್ಡನ್ನೂ ಗಳಿಸಿದ್ದ. ಹಾಗೇ ಗಳಿಸಿದ ದುಡ್ಡನ್ನು ಮೀಟರ್ ಬಡ್ಡಿಗೆ ಬಿಟ್ಟದ್ದೇ ಆತನ ದುರಂತಕ್ಕೆ ಕಾರಣವಾಯಿತು.

ಯಾರೋ ಫೈನಾನ್ಸಿಯರ್ ಒಬ್ಬನಿಗೆ ಅರವತ್ತು ಲಕ್ಷ ಕೊಟ್ಟ. ಎಸ್.ಪಿ.ರೋಡಿನ ಕಂಪ್ಯೂಟರ್ ಬಿಡಿ ಭಾಗಗಳ ವ್ಯಾಪಾರಿ ಕೇವಲ್‌ಚಂದ್ ಎಂಬಾತನಿಗೆ ನಲವತ್ತು ಲಕ್ಷದ ಸಾಲ ಕೊಟ್ಟ. ಕಮರ್ಷಿಯಲ್ ಸ್ಟ್ರೀಟ್‌ನ ಜ್ಯುವೆಲ್ಲರ್ ದೌಲತ್‌ರಾಮ್ ಎಂಬ ಮಾರ್ವಾಡಿಗೆ ಮತ್ತೆ ಮೂವತ್ತು ಲಕ್ಷದ ಸಾಲ ಕೊಟ್ಟ. ಕೊಟ್ಟ ಸಾಲಕ್ಕೆ ಕೈ ಎತ್ತಿದ ಸಾಲಗಾರರೆಲ್ಲ ಬೆಂಗಳೂರನ್ನೇ ಬಿಟ್ಟು ನಾಪತ್ತೆಯಾದರು. ಅದೇ ಹೊತ್ತಿಗೆ ರಿಯಲ್ ಎಸ್ಟೇಟ್ ನೆಲ ಕಚ್ಚಿತು.

ಕೋಟಿ ಲೆಕ್ಕದ ಸಾಲ ಕೊಟ್ರೂ ದಿನನಿತ್ಯದ ಖರ್ಚಿಗೆ ತತ್ವಾರಪಡುವಂತಾದ ನಿರ್ಮಲ್ ಕೊನೆಕೊನೆಗೆ ತನ್ನ ಒಡವೆಗಳನ್ನೇ ಗಿರವಿಇಡುವ ಸ್ಥಿತಿಗೆ ಬಂದುಬಿಟ್ಟ. ಹಾಗೇ ಗಿರವಿದಾರರನ್ನು ಹುಡುಕಿ ಹೊರಟ ನಿರ್ಮಲ್‌ಗೆ ದಕ್ಕಿದ್ದು ಜೀವನಭೀಮಾನಗರದ ನ್ಯೂ ತಿಪ್ಪಸಂದ್ರ ಮುಖ್ಯರಸ್ತೆಯಲ್ಲಿರುವ ಕೇರಳ ಮೂಲದ ಮುತ್ತುಟ್ಟು ಫೈನಾನ್ಸ್. ಪದೇಪದೇ ತನ್ನ ಒಡವೆ ಗಿರವಿಇಡಲು ಹೋಗುತ್ತಿದ್ದ ನಿರ್ಮಲ್‌ಗೆ ಮುತ್ತುಟ್ಟು ಫೈನಾನ್ಸ್ ಮಳಿಗೆಯಲ್ಲಿ ಸಿಕ್ಕಾಪಟ್ಟೆ ಚಿನ್ನಾಭರಣಗಳಿರುವುದು ಗೊತ್ತಾಗಿದೆ. ಇಡೀ ಫೈನಾನ್ಸ್ ಅಡ್ಡೆಯ ಬೀಗದ ಕೈಯಿರುವುದು ಅದರ ಮ್ಯಾನೇಜರ್ ಐಸಾಕ್.ವಿ. ಜಾನ್ ಎಂಬಾತನ ಬಳಿಯೇ ಎಂಬುದೂ ಗೊತ್ತಾಗಿದೆ ಮತ್ತು ಕೋಟಿಗಟ್ಟಲೇ ಮೊತ್ತದ ಚಿನ್ನಾಭರಣಗಳಿದ್ದೂ ಮುತ್ತುಟ್ಟು ಫೈನಾನ್ಸ್ ಅಡ್ಡೆಗೆ ಒಬ್ಬನೇ ಒಬ್ಬ ವಾಚ್‌ಮನ್ ಇಲ್ಲವೆಂಬುದನ್ನು ನಿರ್ಮಲ್ ಗ್ರಹಿಸಿದ್ದಾನೆ.

ಹೆಚ್ಚೂಕಮ್ಮಿ ನಲವತ್ತು ಕೆ.ಜಿ.ಗಳಷ್ಟು ಬಂಗಾರ ದೋಚಬೇಕೆಂದರೆ ಅದಕ್ಕೆ ಹಿಂದಿಯ 'ಕಾಂಟೆ' ಎಂಬ ಚಿತ್ರದ ಕತೆಯಂಥದ್ದೇ ತಯಾರಿಬೇಕು. ಪಳಗಿದ ತಂಡವೇ ಇರಬೇಕು. ಯಾರೂ ಅಪರಾಧಿ ಹಿನ್ನೆಲೆಯವರಿರಕೂಡದು. ಜೊತೆಗೆ ವ್ಯವಸ್ಥಿತವಾಗಿ ಬೀಗದ ಕೈ ಬಳಸಿಯೇ ದೋಚಬೇಕು. ಇಂಥದೊಂದು ಹುಳ ನಿರ್ಮಲ್‌ನ ತಲೆ ಹೊಕ್ಕಿದ್ದೇ ಆತ ಮೊದಲು ಸಂಪರ್ಕಿಸಿದ್ದು ತಮಿಳುನಾಡಿನ ತಿರುವಣ್ಣಾಮಲೈನ ಜಯಕುಮಾರ್ ಎಂಬ ಹಳೇ ಪಾತಕಿಯನ್ನು. ಕೆಲದಿನಗಳ ಕಾಲ ಇಂದಿರಾನಗರ ಸುತ್ತಮುತ್ತ ಪ್ಲಂಬಿಂಗ್ ಕೆಲಸ ಮಾಡಿಕೊಂಡಿದ್ದ ಜಯಕುಮಾರ್ ಇಲ್ಲಿಗೆ ವರ್ಷದ ಹಿಂದೆ ಬಯ್ಯಪ್ಪನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಿಡ್ನಾಪ್ ಪ್ರಕರಣವೊಂದರಲ್ಲಿ ಜೈಲು ಕಂಡಿದ್ದ. ಅದು ಕೂಡ ಮೀಟರ್ ಬಡ್ಡಿ ಸಂಬಂಧಿ ಅಪಹರಣವೆ. ಜಯಕುಮಾರ್ ತನ್ನದೇ ಗ್ಯಾಂಗ್ ಒಂದನ್ನು ನಿಭಾಯಿಸಿದ್ದ.

ಯಾವತ್ತು ನಿರ್ಮಲ್ ದರೋಡೆಯ ಪ್ಲಾನ್ ಕೊಟ್ಟನೋ ಜಯಕುಮಾರ್ ತನ್ನ ತಿರುವಣ್ಣಾಮಲೈ ಸಹಚರರಾದ ಭಾಸ್ಕರನ್, ದಾಸ್‌ಪ್ರಕಾಶ್, ಮಣಿವಣ್ಣನ್ ಮತ್ತು ಸುರೇಶ್‌ರನ್ನು ಬೆಂಗಳೂರಿಗೆ ಕರೆಸಿಕೊಂಡ. ಸೇತು ಎಂಬ ಮತ್ತೊಬ್ಬ ರೌಡಿಯನ್ನೂ ಬೆಂಗಳೂರಿಗೆ ಬರಮಾಡಿಕೊಂಡ. ಜೈಲಲ್ಲಿದ್ದಾಗ ಪರಿಚಿತರಾಗಿದ್ದ ಪರಪ್ಪನ ಅಗ್ರಹಾರದ ಮನೋಜ್, ಹೂಡಿಯ ಲಾರೆಲ್,

▶▶▶

ವಿದ್ಯಾರಣ್ಯಪುರದ ಎಸ್.ಬಿ. ಜ್ಯುವೆಲ್ಲರ್ಸ್

ಕಕ್ಕಸ್ಸಿಗೇ ಸುರಂಗ ಕೊರೆದ

ಕೇವಲ ಮೂರು ಗಂಟೆಯ ಅವಧಿಯಲ್ಲಿ ಸುರಂಗವೊಂದನ್ನು ಕೊರೆದು, ಟಾಯ್ಲೆಟ್ಟಿನ ಹೊಲಸನ್ನೂ ಲೆಕ್ಕಿಸದೇ ನುಗ್ಗಿಬಂದು, ಆಭರಣದಂಗಡಿಗೆ ಕನ್ನ ಹಾಕಿ ಒಂದೂಕಾಲು ಕೋಟಿ ಮೊತ್ತದ ಚಿನ್ನ ದೋಚಬೇಕೆಂದರೆ; ಅದು ಹೈಟೆಕ್ ಕ್ರಿಮಿನಲ್‌ಗಳಿಗೆ ಸಾಧ್ಯವಾಗುವ ಡಕಾಯಿತಿಯಲ್ಲ.

ಅತ್ತ ಮುತ್ತುಟ್ಟು ಫೈನಾನ್ಸ್ ಡಕಾಯಿತಿಯ ಆರೋಪಿಗಳನ್ನು ಹಿಡಿದು ಜೈಲಿಗೆ ದಬ್ಬಿ ಹೈರಾಣಾದ ಪೊಲೀಸರಿಗೆ ಇದಾಗಿ ಎರಡೇ ದಿನಕ್ಕೆ ಇಂಥದೊಂದು ವಿಲಕ್ಷಣ ಡಕಾಯಿತಿ ನಡೆದರೆ ಏನಾಗಬೇಡ?

ಇದು ಜೂನ್ 13 ರಂದು ವಿದ್ಯಾರಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ವಿಶಿಷ್ಟ ಡಕಾಯಿತಿ. ವಿದ್ಯಾರಣ್ಯಪುರಕ್ಕೆ ಹೊಂದಿಕೊಂಡಂತೆ ನರಸೀಪುರ ಬಡಾವಣೆಯಿದೆ. ಅದರ ಮುಖ್ಯರಸ್ತೆಯಲ್ಲೇ ಇದ್ದದ್ದು ಎಸ್.ಬಿ. ಜ್ಯುವೆಲ್ಲರ್ಸ್ ಎಂಬ ಆಭರಣ ಮಳಿಗೆ. ಅದರ ಮಾಲೀಕ ಬಾಹುಬಲಿ ಜೈನ್ ಪಕ್ಕದ ವಿದ್ಯಾರಣ್ಯಪುರ ವಾಸಿ. ಪ್ರತಿ ಮಧ್ಯಾಹ್ನ ಒಂದೂವರೆಯಿಂದ ಸಂಜೆ ಐದರ ತನಕ ಎಸ್.ಬಿ. ಜ್ಯುವೆಲ್ಲರ್ಸ್ ಮುಚ್ಚಿರುತ್ತದೆ. ಊಟಕ್ಕೆ ಹೋದ ಬಾಹುಬಲಿ ಜೈನ್ ಮತ್ತೆ ಮಳಿಗೆ ತೆರೆಯುವುದು ಸಂಜೆಗೇ. ಮಿಕ್ಕಂತೆ ಆತನ ಪತ್ನಿ ಬೀನಾ ಜೈನ್ ಆಗಾಗ ಬಂದು ಅಂಗಡಿ ನೋಡಿಕೊಳ್ಳುತ್ತಾಳೆ.

ಇದನ್ನು ಸೂಕ್ಷ್ಮವಾಗಿ ಗಮನಿಸಿಯೇ ಯಾವುದೋ ತಂಡವೊಂದು ಕಾರ್ಯ ಸಾಧಿಸಿದೆ. ಜೂನ್ 13 ರ ಮಧ್ಯಾಹ್ನ ಬಾಹುಬಲಿ ಜೈನ್ ಅಂಗಡಿ ಮುಚ್ಚಿದ್ದೇ ತಡ, ತಂಡ ಕಾರ್ಯಚರಣೆಗಿಳಿದಿದೆ. ಇದು ಮತ್ತೊಂದು ರೀತಿಯ ಹೈಟೆಕ್ ದರೋಡೆಯೇ. ಎಸ್.ಬಿ. ಜ್ಯುವೆಲ್ಲರ್ಸ್‌ಗೆ ಹೊಂದಿಕೊಂಡಂತೆ ಒಳಚರಂಡಿಯಿದೆ. ರಸ್ತೆ ಮತ್ತು ಚರಂಡಿಗೆ ಮಧ್ಯೆ ಕಾಂಕ್ರಿಟ್ ಹಾಕಿ ಮುಚ್ಚಿರುವುದೇ ದಕಾಯಿತರಿಗೆ ಲಾಭವಾಗಿದೆ.

ಮಳೆಗಾಲದ ರಾಡಿಭರಿತ ಮೋರಿಯೊಳಗೇ ತೆವಳಿಕೊಂಡು ಬಂದು ಎಸ್.ಬಿ. ಜ್ಯುವೆಲ್ಲರ್ಸ್‌ನ ಟಾಯ್ಲೆಟ್ಟಿನ ಪೈಪುಗಳು ಕೂಡುವಲ್ಲಿ ಸುರಂಗ ಕೊರೆದಿದ್ದಾರೆ. ಸರಿಸುಮಾರು ನೂರು ಮೀಟರ್ ಉದ್ದದ ಒಂದೂವರೆ ಅಡಿ ಅಗಲದ ಸುರಂಗ ಕೊರೆದರೆ ಅದು ಟಾಯ್ಲೆಟ್ಟನ್ನು ತಲುಪುತ್ತದೆ. ಅಂಥ ಟಾಯ್ಲೆಟ್ಟನಲ್ಲಿ ಆ ಕಾಲದಿಂದಲೂ ಶೇಖರಗೊಂಡ ಹೊಲಸು ರಾಶಿ ಬೇರೆ. ಹಾಗೇ ಕೊಳೆಯುವ ಹೊಲಸಿನಿಂದ ಮಿಥೇನ್ ಅನಿಲ ಉತ್ಪತ್ತಿಯಾಗುತ್ತದೆ. ಕಟ್ಟಿದ ಮೋರಿ ಶುಚಿಗೊಳಿಸಲೆಂದು ಚರಂಡಿಗಿಳಿದ ಎಷ್ಟೋ ಮಂದಿ ವಿಷಾನಿಲ ಕುಡಿದು ಸತ್ತೇ ಹೋಗಿದ್ದಾರೆ.


ದಕಾಯಿತರು ಕೊರೆದ ಸುರಂಗ...


ಆದರೆ ಈ ಪ್ರಕರಣದಲ್ಲಿ ಸುರಂಗ ಕೊರೆದು ಕಕ್ಕಸ್ಸಿನ ಹೊಲಸಿನಿಂದ ತೂರಿಬಂದವನಿಗೆ ವಿಷಾನಿಲದ ಪರಿವೆಯಿದೆ. ಅದರಿಂದ ಬದುಕುಳಿಯಲು ಆಕ್ಸಿಜನ್ ಸಿಲಿಂಡರ್ ಬಳಸಬೇಕೆಂಬ ಜ್ಞಾನವೂ ಇದೆ. ಅಂಥ ಹೈಟೆಕ್ ಜ್ಞಾನವಿದ್ದವನು ಚರಂಡಿಯ ರಾಡಿಯಲ್ಲಿ ತೆವಳುತ್ತಾ ಕಕ್ಕಸ್ಸಿನ ಹೊಲಸಲ್ಲೇ ಮುಳುಗೆದ್ದು ಬಂದು ಒಂದೂ ಕಾಲು ಕೋಟಿಯ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾನೆಂದರೆ ಇದು ಕೂಡ ಯಾರೋ ಅರೆ ಹೈಟೆಕ್, ಪೂರ್ತಿ ವೃತ್ತಿಪರ ಡಕಾಯಿತನ ಕೃತ್ಯವಾಗಿರಲೇಬೇಕು.

ಟಾಯ್ಲೆಟ್ ಸಂಬಂಧಿ ಕೆಲಸ ಮಾಡುತ್ತಲೇ ದರೋಡೆ ಮಾಡುವ ತಂಡವೆಂದರೆ ಮೊದಲು ನೆನಪಾಗುವುದು ದಂಡುಪಾಳ್ಯದ ಹಂತಕರು. ಅದು ಬಿಟ್ಟರೆ ಇತ್ತೀಚೆಗೆ ಬಿಹಾರದ ಕೂಲಿಗಳು ಬೆಂಗಳೂರಿಗೆ ಬಂದಿದ್ದಾರೆ. ಒಳಚರಂಡಿಗೂ ಆಭರಣದಂಗಡಿಗೂ ಮಧ್ಯೆ ಸುರಂಗವನ್ನೇ ಕೊರೆದು ದೋಚುವ ಮಟ್ಟಕ್ಕೆ ಪಾತಕಿಗಳು ನಿಷ್ಣಾತರಾಗಿದ್ದಾರೆ.

ಎಸ್.ಬಿ. ಜ್ಯುವೆಲ್ಲರ್ಸ್ ಮಳಿಗೆಯೊಳಗೆ ಸೀಸಿಟೀವಿಯಿತ್ತು. ಬಹುಶಃ ಡಕಾಯಿತನಿಗದು ಗೊತ್ತಿತ್ತೋ ಏನೋ. ಕಕ್ಕಸ್ಸಿನ ಮೂಲಕ ನುಸುಳಿ ಬಂದ ಪಾತಕಿ ಅದೆಷ್ಟು ಚಾಕಚಕ್ಯತೆಯಿಂದ ಸೀಸಿಟೀವಿಯ ಕ್ಯಾಮೆರಾ-ವೈರುಗಳನ್ನೆಲ್ಲ ಕಿತ್ತು ಹಾಕಿದ್ದಾನೆಂದರೆ ಮಾಮೂಲಿನ ಡಕಾಯಿತರಿಗೆ ಈ ರೀತಿಯ ಜ್ಞಾನವೇ ಇರುವುದಿಲ್ಲ. ದಂಡುಪಾಳ್ಯದವರೇ ಹೈಟೆಕ್ಕಾಗಿದ್ದಾರಾ? ಹೈಟೆಕ್ ಕ್ರಿಮಿನಲ್‌ಗಳು ಡಕಾಯಿತಿಗಿಳಿದಿದ್ದಾರಾ? ಅಥವಾ ಮುತ್ತುಟ್ಟು ಫೈನಾನ್ಸ್ ಡಕಾಯಿತಿಯಲ್ಲಾದಂತೆ ಯಾರೋ ಗೊತ್ತಿದ್ದವರೇ ಕೃತ್ಯವೆಸಗಿದ್ದಾರಾ? ಇಲ್ಲಿ ಯಾವುದೇ ಕ್ಲೂ ಇಲ್ಲ. ಪೊಲೀಸರ ಫಜೀತಿ ದೇವರೇ ಬಲ್ಲ! ■

ಬ್ಬರೂ ಜಯಕುಮಾರ್ ಜೊತೆ ಕೈಜೋಡಿಸಿದ್ದಾರೆ. ಪ್ರಾರಂಭದಲ್ಲಿ ಮಹದೇವಪುರದಲ್ಲಿ ಮನೆ ಮಾಡಿಕೊಂಡಿದ್ದ ಇಡೀ ತಂಡದ ಊಟ, ಕುದಿತ, ಮನೆ ಬಾಡಿಗೆ ಎಲ್ಲವನ್ನೂ ನಿರ್ಮಲ್‌ನೇ ನಿಭಾಯಿಸುತ್ತಿದ್ದ. ದಿನಂಪ್ರತಿ ಮುತ್ತುಟ್ಟು ಫೈನಾನ್ಸ್‌ನ ಆಗುಹೋಗುಗಳ ಮೇಲೆ ಕಣ್ಣಿಡುವುದೇ ಕೆಲಸವಾಗಿತ್ತು. ಇದಕ್ಕೆಂದೇ ಒಂದು ಬೈಕು ಮತ್ತೊಂದು ಕಾರನ್ನು ಖರೀದಿಸಿದ್ದ ನಿರ್ಮಲ್ ಐದು ಮೊಬೈಲ್ ಫೋನುಗಳನ್ನು ಜೋಡಿಸಿಕೊಂಡ. ಅದಕ್ಕೆ ಬೇಕಾದ ಸಿಮ್ ಕಾರ್ಡುಗಳಿಗೆ ನಕಲಿ ಹೆಸರು ಮತ್ತು ವಿಳಾಸಗಳನ್ನು ಕೊಟ್ಟಿದ್ದ!

ಅದೇ ಹೊತ್ತಿಗೆ ಮುತ್ತುಟ್ಟು ಫೈನಾನ್ಸ್ ಪಕ್ಕದ ಮಳಿಗೆಯೊಂದು ಖಾಲಿ ಬಿತ್ತು. ಹೇಳಿಕೇಳಿ ಅದು ಕಂಪ್ಯೂಟರ್ ಬಿಡಿಭಾಗಗಳ ಅಂಗಡಿ.


ಮುತ್ತುಟ್ಟು ಫೈನಾನ್ಸ್ ಕಚೇರಿ....

ಅಂಗಡಿಯನ್ನೇ ಬಾಡಿಗೆಗೆ ಪಡೆದುಬಿಟ್ಟರೆ ಪಕ್ಕದ ಫೈನಾನ್ಸ್ ಮೇಲೆ ಕಣ್ಣಿಡುವುದು ಸಲೀಸಾಗುತ್ತದೆಯೆಂದು ಲೆಕ್ಕ ಹಾಕಿದ ನಿರ್ಮಲ್ ಅದನ್ನು ಎರಡೂವರೆ ಲಕ್ಷಕ್ಕೆ ಬಾಡಿಗೆಗೆ ಹಿಡಿದ. ಅಲ್ಲಿಗೆ ಇಡೀ ಕಾರ್ಯಾಚರಣೆ ಒಂದು ಹಂತ ಮುಟ್ಟಿದಂತಾಯ್ತು.

ಮೊದಮೊದಲು ಬಾಗಿಲು ಒಡೆದೇ ದರೋಡೆ ಮಾಡಲು ಪ್ಲಾನ್ ಮಾಡಿದ್ದ ಪಾತಕಿಗಳಿಗೆ ಮತ್ತೊಂದು ಐಡಿಯಾ ಹೊಳೆದಿದೆ. ಅದು ಮ್ಯಾನೇಜರ್ ಬಳಿಯಿದ್ದ ಬೀಗದ ಕೈಯನ್ನೇ ಬಳಸಿ ದೋಚುವುದು. ಹಾಗಂತ ಅದು ಸಿಗಬೇಕಲ್ಲ. ಅದಕ್ಕೆಂದು ನಿರ್ಮಲ್ ಗ್ಯಾಂಗ್ ರೋಚಕ ಸಾಹಸವೊಂದನ್ನು ರೂಪಿಸಿದೆ. ಮೇ 2 ರ ರಾತ್ರಿ ಮಾಮೂಲಿನಂತೆ ಫೈನಾನ್ಸ್ ಅಡ್ಡೆಗೆ ಬೀಗ ಹಾಕಿ ತನ್ನ ಬೈಕನ್ನೇರಿ ಮನೆಗೆ ಹೋಗುತ್ತಿದ್ದ ಮ್ಯಾನೇಜರ್ ಐಸಾಕ್‌ನ ಬೈಕಿಗೆ ಸುರೇಶ್ ಮತ್ತು ಸೇತು ತಮ್ಮ ಬೈಕನ್ನೊಯ್ದು ಗುದ್ದಿದ್ದಾರೆ. ಅದೂ ಇಂದಿರಾನಗರದ ಹನ್ನೆರಡನೇ ಕ್ರಾಸಿನಂಥ ಜನನಿಭಿಡ ರಸ್ತೆಯಲ್ಲಿ!


ಸಿಕ್ಕಿಬಿದ್ದ ಆರೋಪಿಗಳು....

ಒಂದೆಡೆ ಸೇತು ಮತ್ತು ಸುರೇಶ್ ಡಿಕ್ಕಿ ಹೊಡೆದು ಮ್ಯಾನೇಜರ್ ಐಸಾಕ್‌ನನ್ನು ಬೀಳಿಸಿದರೆ ಇನ್ನೊಂದೆಡೆ ಅದಕ್ಕೆ ಸಂಬಂಧವೇ ಇಲ್ಲದಂತೆ ಜಯಕುಮಾರ್, ಭಾಸ್ಕರನ್, ಲಾರೆಲ್, ಮಣಿವಣ್ಣನ್ ಮತ್ತು ಮನೋಜ್ ಕಾರೊಂದರಲ್ಲಿ ಬಂದು ಆಕ್ಸಿಡೆಂಟಾಗಿ ಬಿದ್ದಿದ್ದ ಐಸಾಕ್‌ನನ್ನು ಎತ್ತಿ ಕಾರಿಗೆ ಹಾಕಿಕೊಂಡಿದ್ದಾರೆ. ಬಹುಶಃ ಆಸ್ಪತ್ರೆಗೆ ಕೊಂಡೊಯ್ಯುತ್ತಿರಬೇಕೆಂದು ನೆರೆದ ಜನ ಭಾವಿಸಿದ್ದಾರೆ. ಮ್ಯಾನೇಜರ್ ಐಸಾಕ್ ಕೂಡ ಯಾರೋ ದಾರಿಹೋಕರು ಗಾಯಗೊಂಡ ತನ್ನನ್ನು ಆಸ್ಪತ್ರೆಗೆ ಸಾಗಿಸುತ್ತಿದ್ದಾರೆಂದೇ ಭಾವಿಸಿದ್ದಾನೆ. ಯಾವತ್ತು ಐಸಾಕ್ ಚಿಕಿತ್ಸೆಗೆಂದು ಜಯಕುಮಾರ್‌ನ ಕಾರು ಹತ್ತಿದನೋ ಆತನ ಮೂಗಿಗೆ ಕ್ಲೋರೋಫಾರ್ಮ್ ಹಿಡಿದು ಪ್ರಜ್ಞೆ ತಪ್ಪಿಸಿದ್ದಾರೆ. ಇನ್ನೊಂದೆಡೆ ಆತನ ಬೈಕಿನ ಡಿಕ್ಕಿಯಲ್ಲಿದ್ದ ಕೀ ಬಂಚ್ ನಿರ್ಮಲ್‌ನ ಕೈ ಸೇರಿದೆ. ಇತ್ತ ಜಯಕುಮಾರ್ ತಂಡ ಚಿಕಿತ್ಸೆಗೆ ಕರೆದೊಯ್ಯುವ ನೆಪದಲ್ಲಿ ಕಾರಿಗೆ ಹಾಕಿಕೊಂಡ ಮ್ಯಾನೇಜರ್ ಐಸಾಕ್‌ನನ್ನು ಕೋಲಾರಿಗೆ ಕರೆದೊಯ್ದು ನಿರ್ಜನ ನೀಲಗಿರಿ ತೋಪೊಂದರಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಮಲಗಿಸಿದ್ದರೆ ಇತ್ತ ನಿರ್ಮಲ್, ಸೇತು, ಸುರೇಶ್ ತಂಡ ಫೈನಾನ್ಸ್‌ನ ಬೀಗ ತೆಗೆದು ಒಳನುಗ್ಗಿದೆ. ಒಂದಲ್ಲ ಎರಡಲ್ಲ; ಐವತ್ತು ನಲವತ್ತು ಕೆ.ಜಿ. ಗಳಷ್ಟು ತೂಕದ ಬಂಗಾರ!

ಅದನ್ನು ಮೂರು ಚೀಲಗಳಿಗೆ ತುಂಬಿಸಿಕೊಂಡ ನಿರ್ಮಲ್ ಇಡೀ ದಕಾಯಿತಿಯಲ್ಲಿ ಎಷ್ಟು ಹುಷಾರಾಗಿದ್ದ ಅಂದರೆ, ಎಲ್ಲಿ ಫೈನಾನ್ಸ್‌ನ ಒಳಗೆ ಸಿಸಿಟಿವಿ ಇರುತ್ತೋ ಎಂದು ಮಂಕಿಕ್ಯಾಪ್ ಧರಿಸಿದ್ದ. ಮ್ಯಾನೇಜರ್ ಐಸಾಕ್‌ನನ್ನು ಕೋಲಾರಿನ ನಿರ್ಜನ ತೋಪಿನಲ್ಲಿ ಎಸೆದು ಬಂದ ಜಯಕುಮಾರ್ ನಿರ್ಮಲ್‌ನ ಮನೆ ಸೇರುವುದಕ್ಕೂ ಇತ್ತ ದಕಾಯಿತಿ ಮುಗಿಸಿದ ನಿರ್ಮಲ್ ಚಿನ್ನದ ಮೂಟೆ ಹೊತ್ತು ಮನೆ ಸೇರುವುದಕ್ಕೂ ಒಂದೇ ಆಗಿತ್ತು.

ಹೊಡೆದ ಕೊಳ್ಳೆಯನ್ನು ಅವರವರ ಯೋಗ್ಯತಾನುಸಾರ ಹಂಚಿಕೊಂಡಿದ್ದಾರೆ. ದಕಾಯಿತಿಯ ರೂವಾರಿ ನಿರ್ಮಲ್ ತಾನು ಒಂಭತ್ತು ಕೆಜಿಯಷ್ಟು ಒಡವೆ ಇಟ್ಟುಕೊಂಡರೆ ಜಯಕುಮಾರ್ ತನ್ನ ಪಾಲೆಂದು ಏಳು ಕೆ.ಜಿ. 860 ಗ್ರಾಂಗಳಷ್ಟು ಚಿನ್ನ ಪಡೆದಿದ್ದ. ಭಾಸ್ಕರನ್‌ಗೆ 1.083 ಕೆಜಿ, ಮಣಿವಣ್ಣನ್ 4.118 ಕೆಜಿ, ಲಾರೆಲ್, ಮನೋಜ್ ದಾಸ್ ಪ್ರಕಾಶ್, ಸುರೇಶ್ ಮತ್ತು ಸೇತು ತಲಾ ಒಂದೂವರೆ ಕೆಜಿಯಂತೆ ಹಂಚಿಕೊಂಡರು. ದಕಾಯಿತಿ ಮಾಡಿದ ರಾತ್ರಿಯೇ ಪಾಲು ಮಾಡಿಕೊಂಡ ಪಾತಕಿಗಳೆಲ್ಲರೂ ಅವತ್ತೇ ಬೆಂಗಳೂರು ಬಿಟ್ಟಿದ್ದಾರೆ. ನಿರ್ಮಲ್ ದೆಹಲಿ ಟ್ರಿಪ್ಪಿಗೆಂದು ಹೋದರೆ ಮನೋಜ್ ಮತ್ತು ಲಾರೆಲ್ ಶಿಮ್ಲಾ ಪ್ರವಾಸ ಕೈಗೊಂಡಿದ್ದಾರೆ. ಜಯಕುಮಾರ್ ಸೇಫಾಗಿ ತಮಿಳುನಾಡು ಸೇರಿಕೊಂಡಿದ್ದ.

ನಿರ್ಮಲ್ ಮತ್ತು ಜಯಕುಮಾರ್ ಎಲ್ಲೂ ಯಾಮಾರಿರಲಿಲ್ಲ. ಪಕ್ಕದ ಅಂಗಡಿಯನ್ನು ಬಾಡಿಗೆಗೆ ಪಡೆಯುವಾಗಲೂ ಜಯಕುಮಾರ್ ತನ್ನ ಹೆಸರನ್ನು ಶೇಖರ್ ಎಂದು ಬದಲಿಸಿಕೊಂಡಿದ್ದ. ಮೊಬೈಲಿಗೆ ಬಳಸಿದ್ದ ಎಲ್ಲಾ ಸಿಮ್ ಕಾರ್ಡುಗಳಿಗೆ ನಕಲಿ ಹೆಸರನ್ನು ಕೊಟ್ಟಿದ್ದರು. ಕಛೇರಿಯ ಅಧಿಕೃತ ಕೀಯನ್ನೇ ಬಳಸಿ ದೋಚಿದ್ದರು. ನಡುರಸ್ತೆಯಲ್ಲಿ ಮ್ಯಾನೇಜರ್ ಐಸಾಕ್‌ನ ಬೈಕಿಗೆ ಡಿಕ್ಕಿ ಹೊಡೆದು ಬೀಗದ ಕೈ ಲಪಟಾಯಿಸುವಾಗ ಬೈಕಿನ ನಂಬರ್ ಪ್ಲೇಟ್ ಬದಲಾಯಿಸಿದ್ದರು. ಮುಖದ ಗುರುತು ಸಿಗದಂತೆ ಹೆಲ್ಮೆಟ್ ಧರಿಸಿದ್ದರು. ಐಸಾಕ್‌ನ ಪ್ರಜ್ಞೆ ತಪ್ಪಿಸಲು ಕ್ಲೋರೋಫಾರ್ಮ್ ಕೂಡ ಬಳಸಿದ್ದರು. ಪೊಲೀಸರಿಗೆ ಯಾವುದೇ 'ಕ್ಲೂ' ಸಿಗದೇ ಐದೂ ಕಾಲು ಕೋಟಿ ಮೊತ್ತದ ಚಿನ್ನಾಭರಣಗಳೆಲ್ಲ ತಮ್ಮ ಪಾಲಾಯಿತೆಂದೇ ಪಾತಕಿಗಳು ಲೆಕ್ಕ ಹಾಕಿದ್ದರು.

ಅಪರಾಧಿ ಎಷ್ಟೇ ಹುಷಾರಾಗಿದ್ದರೂ ಒಂದಲ್ಲಾ ಒಂದು 'ಕ್ಲೂ' ಬಿಟ್ಟಿರುತ್ತಾನೆಂಬ ತನಿಖಾ ಶಾಸ್ತ್ರದ ಸೂತ್ರವೊಂದು ಇಲ್ಲೂ ನಿಜವಾಗಿತ್ತು. ತಾವೇ ನಿಂತು ತನಿಖೆ ಕೈಗೆತ್ತಿಕೊಂಡ ಜಂಟಿ ಪೊಲೀಸ್ ಕಮಿಷನರ್ ಅಲೋಕ್‌ಕುಮಾರ್ ಇಡೀ ಮುತ್ತುಟ್ಟು ಫೈನಾನ್ಸ್ ಅಡ್ಡೆಯನ್ನು ಪರಿಶೀಲಿಸುತ್ತಿದ್ದಂತೆ ಒಂದು ಸಂಗತಿ ಬಯಲಾಯಿತು. ಅದು ಪಕ್ಕದ ಕಂಪ್ಯೂಟರ್ ಅಂಗಡಿ. ಪ್ರತಿನಿತ್ಯ ತೆರೆಯುತ್ತಿದ್ದ ಆ ಅಂಗಡಿ ದಕಾಯಿತಿ ನಡೆದ ಮರುದಿನದಿಂದ ಬಾಗಿಲು ಹಾಕಿತ್ತು!

ಅಲಸೂರು ಎಸಿಪಿ ಮಂಜನಾಥ್ ಮತ್ತು ಜೀವನ್‌ಭೀಮಾನಗರದ ಇನ್ಸ್‌ಪೆಕ್ಟರ್ ಕುಮಾರ್ ಪಕ್ಕದ ಅಂಗಡಿಯ ಬಗ್ಗೆ ತನಿಖೆ ಶುರು ಹಚ್ಚಿಕೊಳ್ಳುತ್ತಿದ್ದಂತೆ ವಿಚಿತ್ರ ಸಂಗತಿಗಳು ಗೊತ್ತಾದವು. ಶೇಖರ್ ಎಂಬ ಹೆಸರಲ್ಲಿ ಬಾಡಿಗೆ ಪಡೆದಿದ್ದ ಜಯಕುಮಾರ್ ಅಂಗಡಿ ಬಾಡಿಗೆ ಪಡೆಯುವಾಗ ತನ್ನ ಮೊಬೈಲ್ ನಂಬರ್ ಕೊಟ್ಟುಬಿಟ್ಟಿದ್ದ! ಅದರ ಕಾಲ್ ವಿವರಗಳನ್ನು ತೆಗೆದು ನೋಡಿದರೆ ಜಯಕುಮಾರ್ ಪ್ರತಿನಿತ್ಯ ಒಂದು ನಂಬರಿಗೆ ಪದೇಪದೇ ಕರೆ ಮಾಡುತ್ತಿದ್ದ.

ಅದು ಆತನ ಪತ್ನಿಯ ನಂಬರ್. ಮಹದೇವಪುರದ ಗಂಗಮ್ಮ ದೇವಸ್ಥಾನದ ರಸ್ತೆಯಲ್ಲಿ ತನ್ನ ಪತ್ನಿಗೆ ಮನೆ ಮಾಡಿಟ್ಟಿದ್ದ ಜಯಕುಮಾರ್‌ನ ಪೂರ್ತಿ ಜಾತಕ ಸಿಕ್ಕಿದ್ದೇ ಆತ ಅಂಗಡಿ ಮಾಲೀಕರಿಗೆ ಕೊಟ್ಟಿದ್ದ ಮೊಬೈಲ್ ನಂಬರಿನಿಂದ. ಅಲ್ಲಿಗೆ ಇಡೀ ದಕಾಯಿತಿಯ ಪೂರ್ತಿ ಚಿತ್ರಣ ಪೊಲೀಸರಿಗೆ ಸಿಕ್ಕಿದೆ. ತಮಿಳುನಾಡಿನಿಂದ ಜಯಕುಮಾರ್‌ನನ್ನು ಎಳೆದು ತರುತ್ತಿದ್ದಂತೆ ನಿರ್ಮಲ್ ರಾಜ್ ಮತ್ತು ಇತರೇ ಸಹಚರರ ವಿವರಗಳು ಸಿಕ್ಕಿವೆ. ಪೊಲೀಸರ ಒಂದು ತಂಡ ದೆಹಲಿಗೆ ಹೋಗಿ ನಿರ್ಮಲ್‌ನನ್ನು ಬಂಧಿಸಿ ತಂದರೆ ಇನ್ನೊಂದು ತಂಡ ಶಿಮ್ಲಾಕ್ಕೆ ಹೋಗಿ ಮನೋಜ್ ಮತ್ತು ಲಾರೆಲ್‌ರನ್ನು ಹಿಡಿದು ಹಾಕಿದೆ. ಜೂನ್ 11 ರ ಹೊತ್ತಿಗೆ ಇಡೀ ಮುತ್ತುಟ್ಟು ಫೈನಾನ್ಸ್ ದಕಾಯಿತಿಯ ರಹಸ್ಯ ಬಯಲಾಗಿ ಹೋಗಿತ್ತು. ಜಯಕುಮಾರ್ ಕೊಟ್ಟಿದ್ದ ಮೊಬೈಲ್ ನಂಬರ್ ಇಲ್ಲಿ ಪೊಲೀಸರಿಗೆ ನೆರವಾಗಿದ್ದೇನೋ ನಿಜ. ಆಘಾತಕಾರಿ ಸಂಗತಿಯೆಂದರೆ ಈ ಪಾಟ ದಕಾಯಿತಿ ಮಾಡಿದ ನಿರ್ಮಲ್ ಓರ್ವ ಸಾಫ್ಟ್‌ವೇರ್ ತಜ್ಞ. ಹಿಂದ್ಯಾವತ್ತೂ ಕ್ರೈಮು ಎಸಗಿದವನಲ್ಲ. ಯಾವ ಸುಳಿವನ್ನೂ ಬಿಟ್ಟಿರಲಿಲ್ಲ. ವೃತ್ತಿಪರ ದಕಾಯಿತರೋ ಪಾತಕಿಗಳೋ ಆಗಿದ್ದರೆ ಹೇಗೋ ಪತ್ತೆ ಹಚ್ಚಬಹುದು. ಆದರೆ ಯಾವ ಅಪರಾಧಿ ಹಿನ್ನೆಲೆಯೂ ಇಲ್ಲದೆ ಸಣ್ಣದೊಂದು 'ಕ್ಲೂ' ಕೂಡ ಉಳಿಸದೇ ಭಾರಿ ದಕಾಯಿತಿ ಮಾಡುವ ಮಟ್ಟಕ್ಕೆ ನಿರುದ್ಯೋಗಿ ಟೆಕ್ಕಿಗಳೂ ನಿಂತರೆಂದರೆ ಬೆಂಗಳೂರಿನ ಪಾಡೇನು?

ಪೊಲೀಸರಿನ್ನು ನೆಮ್ಮದಿಯಿಂದ ಮಲಗುವಂತಿಲ್ಲ.

● ರಾ. ಸೋಮನಾಥ್

ಮಫತ್‌ಲಾಲ್ ಫ್ಯಾಮಿಲಿಯ ವಿಚಿತ್ರ ಕಥೆ!

ಮಫತ್‌ಲಾಲ್ ಹೆಸರು ಅನೇಕರಿಗೆ ಗೊತ್ತಿದೆ. ಇಂಡಿಯಾದ ಟೆಕ್ಸ್‌ಟೈಲ್ ಉದ್ಯಮದ ಬಹುದೊಡ್ಡ ಹೆಸರುಗಳಲ್ಲಿ ಮಫತ್‌ಲಾಲ್ ಕಂಪೆನಿಯೂ ಒಂದು. ವರ್ಷಕ್ಕೆ ನಾನೂರು ಕೋಟಿ ರೂಪಾಯಿಗಳ ಬಟ್ಟೆ ವ್ಯಾಪಾರ ನಡೆಸುವ ಈ ಮಫತ್‌ಲಾಲ್ ಫ್ಯಾಮಿಲಿಯ ಸೊಸೆ ಶೀತಲ್ ಎಂಬುವವಳನ್ನು ಮೊನ್ನೆ ಜೂನ್ 7ರಂದು ಮುಂಬೈ ಕಸ್ಟಮ್ಸ್ ಅಧಿಕಾರಿಗಳು ಸ್ಮಗಲಿಂಗ್ ಆರೋಪದಡಿ ಅರೆಸ್ಟು ಮಾಡಿ 2 ದಿನದ ಮಟ್ಟಿಗೆ ಜೈಲಿನಲ್ಲಿಟ್ಟಿದ್ದರು. ಆದೇನಾಶ್ಚರ್ಯ ಅಂದರೆ ಲಂಡನ್‌ನಿಂದ ಬರುತ್ತಿದ್ದ ಶೀತಲ್ ಹೀಗೆ ಅಕ್ರಮವಾಗಿ ಚಿನ್ನಾಭರಣ ಸಾಗಿಸುತ್ತಿದ್ದಾಳೆ ಅಂತಾ ಪೊಲೀಸರಿಗೆ 'ಕ್ಲೂ ಕೊಟ್ಟದ್ದೇ ಈ ಮಫತ್‌ಲಾಲ್ ಕುಟುಂಬದವರು!


ಇದೇನು ಈ ಫ್ಯಾಮಿಲಿ ಜಗಳ ಅಂತ ಹುಡುಕಿ ನೋಡಿದರೆ ಇದರ ಸುತ್ತ ಅನೇಕ ಅವಿವೇಕದ, ತಮಾಷೆಯ, ವಿಷಾದದ ಪಾತ್ರಧಾರಿಗಳು ಕಾಣಿಸಿಕೊಳ್ಳುತ್ತಾರೆ.

ಇವರ ಪೈಕಿ ಕುಟುಂಬದ ಮುಖ್ಯಸ್ಥ ದಿವಂಗತ ಯೋಗೇಂದ್ರನ ಪತ್ನಿ ಮಾಧುರಿ, ಏಕೈಕ ಪುತ್ರರತ್ನ ಅತುಲ್ಯ, ಅವನ ಎರಡನೇ ಹೆಂಡತಿ ಶೀತಲ್, ಇನ್ನೂ ಮೂವರು ಹೆಣ್ಣುಮಕ್ಕಳು ಹಾಗೂ ಕೊನೆಯದಾಗಿ ಅರ್ಪಣ ಎಂಬ ಮಗಳೂ ಇದ್ದಾಳೆ. ಅಂದಹಾಗೆ ಈ ಅರ್ಪಣ ಈಗ ಲಿಂಗ ಬದಲಾವಣೆ ಮಾಡಿಸಿಕೊಂಡು ಗಂಡಾಗಿ ಅಜಯ್ ಎಂದು ಹೆಸರು ಬದಲಾಯಿಸಿಕೊಂಡಿದ್ದಾನೆ.

ಮಫತ್‌ಲಾಲ್ ಉದ್ಯಮದ ರೂವಾರಿ ಯೋಗೇಂದ್ರ ಮಫತ್‌ಲಾಲ್ ಈಗಿಲ್ಲ. 2005ರಲ್ಲಿ ಈತ ಸತ್ತಾಗ ಅವನ ಇಡೀ ಆಸ್ತಿ, ವ್ಯವಹಾರಗಳಿಗೆ ಒಬ್ಬನೇ ಮಗ ಅತುಲ್ಯ ಮಫತ್‌ಲಾಲ್ ವಾರಸುದಾರನಾಗಿದ್ದ.

ಈಗ ಈ ಪಾತ್ರಧಾರಿಗಳ ನಡುವಿನ ಆಸ್ತಿ ಜಗಳ, ಹಣ, ಸಾಮಾಜಿಕ ಪ್ರತಿಷ್ಠೆ, ಭಾವನಾತ್ಮಕ ಸಂಘರ್ಷ, ಲೋಭ-ಲಾಭಗಳೆಲ್ಲ ಸೇರಿ ಸೊಸೆ ಶೀತಲ್ ಮಫತ್‌ಲಾಲ್‌ಗೆ ಜೈಲಿನ ದಾರಿ ತೋರಿಸಿವೆ.

ಈ ಶೀತಲ್ ಮುಂಬೈ ಗ್ಲಾಮರ್ ಜಗತ್ತಿನ ಬೆಡಗಿನ ಚಿಟ್ಟೆಯಂತಿದ್ದವಳು. ಗಂಡ ಅತುಲ್ಯ ಮೊದಲ ಹೆಂಡತಿಯಿಂದ ದೂರವಾದಾಗ ಮಫತ್‌ಲಾಲ್‌ಗಳ ವಿರೋಧದ ನಡುವೆಯೂ ಅತುಲ್ಯನ ಎರಡನೇ ಹೆಂಡತಿಯಾಗಿ ಬಂದಳು. ಇವತ್ತು ಇಂಡಿಯಾದಲ್ಲಿ ಸಿಗುವ


ತಾಯಿ ಮಾಧುರಿ ಮತ್ತು ಮಗಳಾಗಿದ್ದು ಈಗ ಮಗನಾಗಿರುವ ಅಜಯ್........

ಅತೀ ದುಬಾರಿ 'ವ್ಯಾಲೆಂಟಿನಾ' ಬೆಡ್‌ಶೀಟ್‌ಗಳನ್ನು ಭಾರತಕ್ಕೆ ಪರಿಚಯಿಸಿದ್ದು ಇದೇ ಶೀತಲ್. ದಿನಕ್ಕೊಂದು ಪಾರ್ಟಿ, ದುಬಾರಿ ಡ್ರೆಸ್, ಪರಫ್ಯೂಮ್, ಒಡವೆ... ಹೀಗೆ ವೈಭವೋಪೇತವಾಗಿ ಕಾಲ ಕಳೆಯುತ್ತಿದ್ದ ಶೀತಲ್ ಕಳೆದ ವಾರ ಬ್ರಿಟಿಷ್ ಏರ್‌ವೇಸ್ ಮೂಲಕ ಲಂಡನ್‌ನಿಂದ ಮುಂಬೈಗೆ ಬಂದವಳೇ ಗ್ರೀನ್‌ಚಾನಲ್ ಮೂಲಕ ತಪಾಸಣೆಯಿಲ್ಲದೆ ಸಾಗಿಬಂದಿದ್ದಳು. ಆದರೆ ಯಾರೋ ಕಸ್ಟಮ್ಸ್‌ನ ಅಧಿಕಾರಿಗಳಿಗೆ ಫೋನ್ ಮಾಡಿ ಚಾಡಿ ಹೇಳಿದರೂಂತ ಕಾಣುತ್ತೆ. ದಿಢೀರನೆ ಅಲ್ಲಿಗೆ ಬಂದ ಆಫೀಸರ್‌ಗಳು ಅವಳ ಬ್ಯಾಗ್ ಚೆಕ್ ಮಾಡಿದಾಗ 54 ಲಕ್ಷ ರೂಪಾಯಿ ಬೆಲೆಯ ಒಡವೆಗಳು ಪತ್ತೆಯಾದವು. ಈ ಕಿಲಾಡಿ ಹೆಂಗಸು ಅವತ್ತು ತನ್ನ ಬಳಿ ಕೇವಲ 20 ಸಾವಿರದ ಒಡವೆ ಇದೆ ಅಂತ ಹೇಳಿದ್ದಳು. ಈ ಒಡವೆಗಳಿಗೆ ತೆರಿಗೆ ಕಟ್ಟುವುದೇ ಆದಲ್ಲಿ 18 ಲಕ್ಷ ರೂ. ತೆರಬೇಕಾಗಿತ್ತು.

ಅದಿರಲಿ,

ಈ ಮಫತ್‌ಲಾಲ್‌ಗಳ ಜಗಳ ಏನೆಂದರೆ ಇಡೀ ಆಸ್ತಿಗೆ ಮಗ ಅತುಲ್ಯ ಒಬ್ಬನೇ ಇದುವರೆಗೂ ವಾರಸುದಾರನಾಗಿದ್ದ. ಆದರೀಗ ಕೊನೆಯ ಮಗಳು ಅರ್ಪಣ ಲಿಂಗಬದಲಾವಣೆ ಮಾಡಿಸಿಕೊಂಡು ಗಂಡಾಗಿ ಅಜಯ್ ಆಗಿರುವುದರಿಂದ ಈಗ ಅವಳಿ/ನಿಗೂ ಆಸ್ತಿಯಲ್ಲಿ ಭಾಗ ಸಿಗಬೇಕಲ್ಲವೇ ಎಂಬ ಜಗಳ ಹುಟ್ಟಿಕೊಂಡಿದೆ. ಆದರೆ 'ನಾನು ಆಸ್ತಿಗಾಗಿ ಗಂಡಾಗಿಲ್ಲ' ಅನ್ನುತ್ತಿದ್ದಾನೆ ಅಜಯ್. ಶತಕೋಟ್ಯಾಧೀಶರಾದ ಈ ಕುಟುಂಬದ ಮಗಳು ಅರ್ಪಣಾಗೆ ತಾನು ಮೊದಲಿಂದಲೂ ಹೆಣ್ಣಲ್ಲ, ಗಂಡು ಎಂಬ ಅನಿಸಿಕೆ ಕೊರೆಯುತ್ತಲೇ ಇತ್ತಂತೆ. ಹಾಗಾಗಿ ಪುರುಷನೊಂದಿಗಿನ ತನ್ನ ಮದುವೆಯನ್ನು ಮುರಿದು, ಸರ್ಜರಿ ಮೂಲಕ ಗಂಡಾಗಿ ಈಗ ತನ್ನ ಬ್ಯುಸಿನೆಸ್ ಪಾರ್ಟನರ್ ಜಯ ಕಂದನ್ ಎಂಬಾಕೆಯೊಂದಿಗೆ ಬದುಕುತ್ತಿದ್ದಾರೆ ಅರ್ಪಣಾ.

ಈ ನಡುವೆ ಅತುಲ್ಯ ಹಾಗೂ ಶೀತಲ್ ಕುಟುಂಬಕ್ಕೆ ಸೇರಿದ್ದ 10 ಕೋಟಿ ಬೆಲೆಯ ಚಿನ್ನಾಭರಣ ಲಪಟಾಯಿಸಲು ಹೊಂಚು ಹಾಕುತ್ತಿದ್ದಾರೆಂದು ಸ್ವತಃ ಅವನ ತಾಯಿ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದಳು. ಈ ಜಗಳದ ಹೊಸ ಎಪಿಸೋಡಾಗಿ ಶೀತಲ್ ಈಗ ಅರೆಸ್ಟಾಗಿ ಕೇಸು ಜಡಿಸಿಕೊಂಡಿದ್ದಾಳೆ.


ಶೀತಲ್ ಮಫತ್ ಲಾಲ್

ಅಂದಹಾಗೆ

ಕೋಟ್ಯಾಧೀಶೆ, ಇಂಡಿಯಾದ ಫ್ಯಾಷನ್ ಜಗತ್ತಿನ ಗ್ಲಾಮರ್ ಬೊಂಬೆ ಶೀತಲ್‌ಳ ಎರಡು ದಿನಗಳ ಜೈಲು ವಾಸದ ಕತೆ ಇನ್ನೂ ಇಂಟರೆಸ್ಟಿಂಗ್ ಆಗಿದೆ.

ಕೋರ್ಟು ಇವಳಿಗೆ ಜಾಮೀನು ಕೊಡದೆ ನ್ಯಾಯಾಂಗ ಬಂಧನ ವಿಧಿಸಿದಾಗ ಶೀತಲ್‌ಳನ್ನು ಮುಂಬೈನ ಬೈಕುಲ್ಲಾ ಮಹಿಳಾ ಜೈಲಿನಲ್ಲಿರಿಸಿದ್ದರು. ಅಲ್ಲಿ ಮೊದಲ ದಿನ ರಾತ್ರಿ ಶೀತಲ್ ಇನ್ನಿತರ 50 ಮಹಿಳಾ ಬಂಧಿಗಳೊಂದಿಗೆ ಇದ್ದಳು. ಬಂಗಲೆವಾಸ, ಏಸಿ, ಪ್ಲಾಸ್ಮಾ ಟಿವಿ, ಕೈಗೊಬ್ಬರು ಕಾಲಿಗೊಬ್ಬರಂತೆ ಆಳುಗಳಿಟ್ಟಿದ್ದ ಶೀತಲ್ ಅವತ್ತು ಗುಟುಕಾ ತಿನ್ನುವ ಸಹಬಂಧಿಗಳೊಂದಿಗೆ, ಸೊಳ್ಳೆ-ತಿಗಣೆಯಿಂದ ಕಚ್ಚಿಸಿಕೊಳ್ಳುತ್ತಾ, ಕಿತ್ತುಹೋದ ಹೊದಿಕೆ, ಹರಿದ ನಾರಿನ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದಳು. ಅವಳ ಲಾಯರ್ ಜೈಲಿಗೂ ಮನೆ ಊಟ ಕಳುಹಿಸಲು ಪರ್ಮಿಷನ್ ಕೇಳಲು ಮರೆತಿದ್ದರಿಂದ ಶೀತಲ್ ಜೈಲಿನ ಒಣಕಲು ಚಪಾತಿ, ಸಾರು ತಿನ್ನಬೇಕಾಯಿತು. ಕೋಟ್ಯಾಧೀಶೆಯಾದರೇನು? ಕಾಂಟಿನೆಂಟಲ್ ಫುಡ್ ತಿನ್ನುವವಳಾದರೇನು? ಹಸಿದಾಗ ತಿನ್ನಲು ಬೇರೇನೂ ಸಿಗದಿದ್ದಾಗ ಒಣಕಲು ಚಪಾತಿಯೂ ಪರಮಾನ್ನವೇ ತಾನೇ!

ಮಜಾ ಅಂದರೆ

ಜೈಲು ವಾಸದ ಎರಡನೇ ದಿನ ತನಗೆ ಆ ಬ್ಯಾರಕ್ ಬೇಡ ಅಂದಳು ಶೀತಲ್ ಪಾಪ.

50 ಮಹಿಳಾ ಬಂಧಿಗಳಿಗೆ ಇರುವ ಒಂದೇ ಟಾಯ್ಲೆಟ್ಟು, ಗಲೀಜು ಎಲ್ಲಾ ಅವಳಿಗೆ ಜಿಗುಪ್ಸೆ ಅನಿಸಿರಬೇಕು. ಹಾಗಾಗಿ ಎರಡನೇ ದಿನ ಅವಳನ್ನು ಸಪರೇಟಾಗಿ ಬೇರೆ ಬ್ಯಾರಕ್‌ಗೆ ಕಳಿಸಿದ್ದರು. ಅಲ್ಲಿ ಶೀತಲ್ ಜೊತೆಗೆ ಇನ್ನೊಬ್ಬಳು ಮಾತ್ರ ಇದ್ದಳು.

ಅವಳ್ಯಾರು ಗೊತ್ತೆ?

ಮೋನಿಕಾ ಸೂಸೈರಾಜ್!

ಮೈಸೂರಿನ ಈ ನಟಿ ಮುಂಬೈನಲ್ಲಿ ಗೋವರ್ ಎಂಬುವನನ್ನು ಕೊಲ್ಲಿಸಿ ದೇಹವನ್ನು ತುಂಡುತುಂಡಾಗಿ ಕತ್ತರಿಸಿ ಎಸೆದು ಸಿಕ್ಕಿಬಿದ್ದಿರುವ ಕ್ರಿಮಿನಲ್.

ಶೀತಲ್‌ಗೆ ಈಗ ಜಾಮೀನು ಸಿಕ್ಕಿದೆ.

ಎಲೆಕ್ಷನ್ ಮುಗಿದು ಎಲ್ಲಾ ತಣ್ಣಗಾಗಿದ್ದ ವೇಳೆಯಲ್ಲಿ ಶೀತಲ್ ಪ್ರಕರಣ ನಮ್ಮ ನ್ಯಾಷನಲ್ ಮೀಡಿಯಾಗಳಿಗೆ ಈಗ ಇದೇ ಹಬ್ಬದೂಟವಾಗಿ ಹೋಗಿದೆ.

ಸಿರಿವಂತ ಉದ್ಯಮಿ ಕುಟುಂಬಗಳಾದ ಅಂಬಾನಿಗಳು, ಮೋದಿ ಕುಟುಂಬಗಳ ಹಾದಿ-ಬೀದಿ ಜಗಳ ನೋಡಿದ್ದ ಜನ ಈಗ ಮಫತ್‌ಲಾಲ್‌ಗಳ ಜಗಳವನ್ನು ಹೊಸ ಟಿವಿ ಸೀರಿಯಲ್‌ನಂತೆ ನೋಡುತ್ತಿದ್ದಾರೆ. ■


ಮೈಷುಗರ್ ಪುನಶ್ಚೇತನ ಸಾಧ್ಯವೇ?

ಭಾಗ 3

ಮೈಷುಗರ್‌ಅನ್ನು ಮುಳುಗಿಸುತ್ತಿರುವುದು ಯಾರು?

ಮಂಡ್ಯದ ಮಣ್ಣಿನ ಮಕ್ಕಳ ದ್ರೋಹ


ಮೈಷುಗರ್ ಮತ್ತೆ ಮೇಲೇಳದಂತೆ ಮುಳುಗ ಲಾರಂಭಿಸಿದ್ದು 2002ರಿಂದ 2004ರ ನಡುವೆ. ಅದೇ ಸಂದರ್ಭದಲ್ಲಿ ಪಕ್ಕದ ಮದ್ದೂರು ತಾಲೂಕಿನಲ್ಲಿ ಎಸ್.ಸಿ.ಮಲ್ಲಯ್ಯ ಷುಗರ್ಸ್ ಮೇಲೆದ್ದಿತು. ಇವರಡೂ ಕಾಕತಾಳೀಯವಲ್ಲ. ಬ್ರಿಟಿಷ್ ಏಜೆಂಟ್ ಎಸ್.ಸಿ.ಮಲ್ಲಯ್ಯನ ಸುಪುತ್ರ ಹೈಟೆಕ್ ಕೃಷ್ಣ ಮುಖ್ಯಮಂತ್ರಿಯಾಗಿದ್ದ ಈ ಸಂದರ್ಭದಲ್ಲಿ ಮೈಷುಗರ್‌ನ ಉಳಿವಿಗೆ



ಯಾವ ನೆರವೂ ಸಿಗಲಿಲ್ಲ. ಬದಲಿಗೆ ಅದರ ವ್ಯಾಪ್ತಿಯ ಕಬ್ಬು ಪ್ರದೇಶವನ್ನು ಎಸ್.ಸಿ.ಎಂ. ಷುಗರ್ಸ್‌ಗೆ ವರ್ಗಾಯಿಸ ಲಾಯಿತು. ಎಂಜೆ ರಾಜು, ಎಂಬಿ ಶ್ರೀಕಾಂತ್‌ರಂತಹ ಪ್ರಯೋಜನಕ್ಕೆ ಬಾರದ ಚೇಲಾಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದೂ ಇದೇ ಎಸ್‌ಎಂಕೆ. ಒಟ್ಟಿನಲ್ಲಿ ಕಂಪೆನಿಯ ಬೆನ್ನು ಮೂಳೆ ಮುರಿದ ಕೀರ್ತಿ ಕೃಷ್ಣರಿಗೇ ಸಲ್ಲಬೇಕು.


ನಂತರದ ಧರಂಸಿಂಗ್ ಹಾಗೂ ಕುಮಾರಸ್ವಾಮಿ ಸರ್ಕಾರದಲ್ಲಿ ಪ್ರಭಾವಿ ಮಂತ್ರಿಯಾಗಿದ್ದ ಚೆಲುವರಾಯಸ್ವಾಮಿ 76 ಕೋಟಿ ನೆರವು ತಂದದ್ದು ತಾನೇ ಎಂದು ಕೊಚ್ಚಿಕೊಳ್ಳುತ್ತಾರಾದರೂ, ಆ ಹಣ ಏಕೆ ಕಾರ್ಖಾನೆಯನ್ನು ಮೇಲೆತ್ತಲಿಲ್ಲ ಎಂಬುದಕ್ಕೆ ಉತ್ತರ ಕೊಡಬೇಕಾಗುತ್ತದೆ. ಆ ಸಂದರ್ಭದಲ್ಲಿ ಇದರ ಡಬಲ್ ಹಣ ಮತ್ತು ತೆರಿಗೆ ವಿನಾಯಿತಿ ಹಾಗೂ ಕೆಲವು ಬಿಗಿ ಕ್ರಮಗಳ ಅತ್ಯಂತ ಅನಿವಾರ್ಯತೆ ಕಂಪೆನಿಗಿತ್ತು. ಅಷ್ಟು ಒಳನೋಟ ಮತ್ತು ಬದ್ಧತೆ ಚೆಲುವರಾಯಸ್ವಾಮಿಗೆ ಇರಲಿಲ್ಲ. ರೈತರಿಗೆ 1160 ರೂ. ರೇಟು ಕೊಡಿಸುತ್ತೇನೆಂದು ಹೇಳಿ ಅಕ್ಕ ಸಮ್ಮೇಳನಕ್ಕೆ ಅಮೆರಿಕಕ್ಕೆ ಹೋದ ಈತ ವಾಪಸ್ಸು ಬರುವಷ್ಟರಲ್ಲಿ 1100 ರೂ.ಗಳನ್ನು ಘೋಷಿಸಲಾಗಿತ್ತು.

ಇನ್ನು ಬೂಕನಕೆರೆ ಯಡಿಯೂರಪ್ಪನವರಿಂದ ಇನ್ನೇನು ನಿರೀಕ್ಷೆ ಮಾಡಲಾಗುತ್ತದೆ? ಬಜೆಟ್‌ನಲ್ಲಿ ಘೋಷಿಸಿದ್ದ 50 ಕೋಟಿಗಳನ್ನೇ ಇನ್ನೂ ಕೊಟ್ಟಿಲ್ಲವೆಂದ ಮೇಲೆ ಸಮಗ್ರ ಪ್ಯಾಕೇಜ್, ನೂರಾರು ಕೋಟಿ ಕೊಟ್ಟಾರೆಯೇ? ನಾಗರಾಜಪ್ಪನಂತಹ ನಿಷ್ಪ್ರಯೋಜಕನನ್ನು ತಂದು ಕೂರಿಸಿದ್ದು ಮಾತ್ರ ಇವರ ಸಾಧನೆ. ಒಟ್ಟಿನಲ್ಲಿ ಹೆತ್ತಮ್ಮನ ಋಣವನ್ನು ಯಾರೂ ತೀರಿಸಲಿಲ್ಲವೆಂಬುದು ಮಾತ್ರ ಸತ್ಯ.




ದುರಂತದ ಸಂಗತಿ ಮಂಡ್ಯ ಶಾಸಕ ಎಂ.ಶ್ರೀನಿವಾಸ್‌ರದ್ದು. ಮೈಷುಗರ್ ವ್ಯಾಪ್ತಿಗೆ ನೇರವಾಗಿ ಸಂಬಂಧಪಡುವ ಈ ಶಾಸಕ ಇದ್ದಾರೋ ಇಲ್ಲವೋ ಯಾರಿಗೂ ಗೊತ್ತಾಗುತ್ತಿಲ್ಲ. ಕಾರ್ಖಾನೆಯು ಸತ್ತ ಇಷ್ಟೆಲ್ಲಾ ನಡೆಯುತ್ತಿದ್ದರೂ ಈತ ಇದುವರೆಗೆ ಬಾಯೇ ಬಿಟ್ಟಿಲ್ಲ. ತನ್ನದು ರೈತ ಸಂಘದ ಹಿನ್ನೆಲೆ ಎಂದು ಹೇಳಿ ಕೊಳ್ಳುವ ಎಂ.ಶ್ರೀನಿವಾಸ್ ಇನ್ನಾದರೂ ಬಾಯಿಬಿಡದಿದ್ದರೆ, ಹಗರಣಗಳಲ್ಲಿ ಇವರೂ ಭಾಗಿ ಎಂದು ಜನ ಮಾತಾಡಿಕೊಳ್ಳುವ ದಿನಗಳು ದೂರ ಇಲ್ಲ.


ಮೈಷುಗರ್ ಕಾರ್ಖಾನೆಯನ್ನು ಪುನಶ್ಚೇತನ ಮಾಡಲು ಸ್ಥಳೀಯ ಜನಪ್ರತಿನಿಧಿಗಳಾಗಲೀ ಅಥವಾ ಸಂಬಂಧಪಟ್ಟ ಇತರರಾಗಲೀ ಗಂಭೀರವಾಗಿ ತಲೆಕೆಡಿಸಿಕೊಳ್ಳುತ್ತಿಲ್ಲವಾದ್ದ ರಿಂದ ಇದಕ್ಕೊಂದು ಸಮಗ್ರ ಪ್ಯಾಕೇಜ್‌ನ ಯೋಚನೆಯೂ ಅವರಿಗೆ ಬಂದಿಲ್ಲ. ಮೈಷುಗರ್‌ನ ನಷ್ಟಕ್ಕೆ ಏನು ಕಾರಣ ಎಂಬುದರ ಕುರಿತು ಸಮಗ್ರ ವಿಶ್ಲೇಷಣೆಯನ್ನು ಮಾಡುವ ಅಗತ್ಯವೂ ಅವರುಗಳಿಗೆ ಕಂಡುಬಂದಿಲ್ಲ. ಅಂತಹ ಒಂದು ಸಮಗ್ರ ವಿಶ್ಲೇಷಣೆಯು ಇಂದಿನ ಅಗತ್ಯವಾಗಿದೆ.



ಶಾಲಾ-ಕಾಲೇಜುಗಳು, ಕಲ್ಯಾಣ ಮಂಟಪ, ಈಜುಕೊಳ, ಆಸ್ಪತ್ರೆ ಇವೆಲ್ಲವನ್ನೂ ಹೊಂದಿದ್ದ ಸುಸಜ್ಜಿತ ಕಾರ್ಖಾನೆ ಇದು. ಮಂಡ್ಯ ಜಿಲ್ಲೆಯಾದ್ಯಂತ ನಡೆಯುತ್ತಿದ್ದ ಅನೇಕ ಕಲ್ಯಾಣ ಕಾರ್ಯಕ್ರಮಗಳಿಗೆ ಕಂಪೆನಿಯು ಹಣ ನೀಡುತ್ತಿತ್ತು. ಮಂಡ್ಯದ ಮುಖ್ಯ ರಸ್ತೆಯ ಎರಡೂ ಬದಿಗೆ ಕಬ್ಬಿಣದ ರೇಲಿಂಗ್ಸ್ ಹಾಕಲು ಹಣ ನೀಡಿದ್ದು ಮೈಷುಗರ್ ಕಂಪೆನಿಯೇ. ಈಗಲೂ ರಸ್ತೆಯ ಪಕ್ಕದಲ್ಲೇ ಇರುವ ಕಾಲೇಜುಗಳ ಗೇಟ್‌ಗಳ ಮೇಲೆ ಮೈಷುಗರ್ ಕಂಪೆನಿಯ ಹೆಸರೇ ಇದೆ. ಈ ರೀತಿ ಕೇಳಿಕೇಳಿದ್ದಕ್ಕೆಲ್ಲಾ ಹಣ ನೀಡುವಷ್ಟು ಭದ್ರವಾಗಿದ್ದ ಮೈಷುಗರ್ ಮೊದಲನೆಯ ಬಾರಿಗೆ ನಷ್ಟ ಕಂಡಿದ್ದು 1997-98ರಲ್ಲಿ, ಆಗ 1.7 ಕೋಟಿಗಳ ನಷ್ಟವನ್ನು ಅದರ ಆಡಿಟ್ ವರದಿ ತೋರಿಸುತ್ತದೆ. ಯಾವಾಗಲೂ 8 ರಿಂದ 9 ಲಕ್ಷ ಟನ್ ಕಬ್ಬನ್ನು ಅರೆಯಲಾಗುತ್ತಿದ್ದರೆ, ಆ ವರ್ಷ ಕೇವಲ ಮೂರೂವರೆ ಲಕ್ಷ ಟನ್ ಕಬ್ಬನ್ನು ಮಾತ್ರ ಅರೆಯಲಾಗಿತ್ತು. 2003ರ ನಂತರ ಇದು ಇನ್ನೂ ಇಳಿಯುತ್ತಾ ಹೋಯಿತು. 2003-04ರಲ್ಲಿ 2.9 ಲಕ್ಷ ಟನ್, 2004-05ರಲ್ಲಿ 70,692 ಟನ್, 2005-06ರಲ್ಲಿ 3.35ಲಕ್ಷ ಟನ್, 2006-07ರಲ್ಲಿ ಸ್ವಲ್ಪ ಏರಿಕೆಯಾಗಿ 5.54 ಲಕ್ಷ ಟನ್ ಆದರೂ ನಂತರದ 2007-08ರಲ್ಲಿ ಮತ್ತೆ 3.69 ಲಕ್ಷ ಟನ್‌ಗೆ ಇಳಿಯಿತು.




98ರಿಂದ ಮತ್ತೆ ಲಾಭದತ್ತ ಹೊರಳಿದರೂ, 2000ದಿಂದ ಪ್ರತೀ ವರ್ಷವೂ ನಷ್ಟ ಉಂಟಾಯಿತು. ಆದರೆ ಕೇವಲ ನಾಲ್ಕು ವರ್ಷಗಳ ನಷ್ಟ ಕಂಪೆನಿಯನ್ನು ಬಿಐಎಫ್ ಆರ್‌ಗೆ (Board of Industrial Finance and Restructuring) ತೆಗೆದುಕೊಂಡು ಹೋಗಿ ರೋಗಗ್ರಸ್ತ ಕಂಪೆನಿ ಎಂಬ ಸರ್ಟಿಫಿಕೇಟ್ ತರುವಂತೆ ಮಾಡಿತೇ ಎಂಬುದನ್ನು ನೋಡಬೇಕು. 90ರ ದಶಕದ ಕೊನೆಯ ಭಾಗದ ಹೊತ್ತಿಗಾಗಲೇ, ಕಂಪೆನಿಯ ಲಾಭ ಕಡಿಮೆ ಯಾಗುತ್ತಾ ಬಂದಿತ್ತು, ಆಗ ಒಂದು ವರ್ಷ ವಿಸಿ ನಾಲೆಯಲ್ಲಿ ನೀರು ನಿಲ್ಲಿಸಿದ್ದರಿಂದ ಉಂಟಾದ ಕಬ್ಬಿನ ಕೊರತೆ ಮತ್ತು ನಂತರದ ವರ್ಷಗಳಲ್ಲಿ ಬರದ ಕಾರಣದಿಂದ ಉಂಟಾದ ಕಬ್ಬಿನ ಕೊರತೆಯು ಹೆಚ್ಚೂಕಡಿಮೆ ಕಾರ್ಖಾನೆಯನ್ನು ಮುಳುಗಿಸಿತು ಎಂಬುದು ಕೇವಲ ಕಾಲು ಭಾಗ ಮಾತ್ರ ಸತ್ಯ. ಮೈಷುಗರ್‌ನ ಕುಸಿತ ಮತ್ತು ಖಾಸಗಿ ಕಂಪೆನಿಗಳ ಲಾಭ ಎರಡನ್ನೂ ಹೋಲಿಸಿ ನೋಡಿದರೆ ಮಾತ್ರ ಇದು ಅರಿವಾಗುತ್ತದೆ. ಇದೇ ಅವಧಿಯಲ್ಲಿ ಕಬ್ಬಿನಿಂದ ಬರುತ್ತಿದ್ದ ರಿಕವರಿ (ಎಷ್ಟು ಕೆಜಿ ಕಬ್ಬಿಗೆ ಎಷ್ಟು ಸಕ್ಕರೆ)ಯೂ ಕಡಿಮೆಯಾಯಿತು. 2003-04ರಲ್ಲಿ 8.75% ಇದ್ದದ್ದು, 2004-05ರಲ್ಲಿ 5.60% ಆಗಿತ್ತು. ಈಗಲೂ ರಿಕವರಿ ಬೇರೆ ಕಾರ್ಖಾನೆಗಳಿಗಿಂತ ಕಡಿಮೆ ಇದೆ. ಇದಕ್ಕೆ ಹಳೆಯ ಯಂತ್ರಗಳು ಒಂದು ಕಾರಣವಾದರೆ ಸರಿಯಾದ ಸಮಯಕ್ಕೆ ಕಾರ್ಖಾನೆ ಆರಂಭಿಸದೇ ಇರುವುದರಿಂದ, 12-13 ತಿಂಗಳ ಕಬ್ಬಿನ ಬದಲಿಗೆ 18ರಿಂದ 24 ತಿಂಗಳುಗಳ ಒಣದಿಂಡನ್ನು ಅರೆಯುವ ಪರಿಸ್ಥಿತಿಯನ್ನು ಕಾರ್ಖಾನೆಯೇ ತಂದುಕೊಂಡಿತು.




ಸರಿಯಾದ ಸಮಯಕ್ಕೆ, ಆರಂಭವಾಗುತ್ತಿದ್ದ ಖಾಸಗಿ ಕಂಪೆನಿಗಳಲ್ಲಿ ರಿಕವರಿ 10% ಅನ್ನು ದಾಟುತ್ತಿದೆ.

2003-04 ಹಾಗೂ 2004-05ರಲ್ಲಿ ಇಡೀ ದೇಶದಲ್ಲಿ ಸಕ್ಕರೆ ಉತ್ಪಾದನೆ ಕಡಿಮೆಯಿತ್ತು, ಈ ವರ್ಷಗಳಲ್ಲಿ ದೇಶದ ಸಕ್ಕರೆ ಉತ್ಪಾದನೆ ಕ್ರಮವಾಗಿ 13.99 ಮತ್ತು 12.69 ಮಿಲಿಯನ್ ಟನ್‌ಗಳಷ್ಟು ಮಾತ್ರ ಇತ್ತು. ಆದರೆ ಅದು ಬಹುಬೇಗನೆ ಹೆಚ್ಚಾಯಿತಲ್ಲದೆ 2007-08ರಲ್ಲಿ 30 ಮಿಲಿಯನ್ ಟನ್‌ಗಳಷ್ಟಕ್ಕೆ ಏರಿತು. ಆದರೆ ಮೈಷುಗರ್‌ನ ಉತ್ಪಾದನೆ ಮಾತ್ರ ಏರಲಿಲ್ಲ, ಬದಲಿಗೆ ಇನ್ನೂ ಇನ್ನೂ ಕುಸಿಯಿತು.



ಹೆಚ್ಚು ಕಡಿಮೆ ಇದೇ ಸಂದರ್ಭದಲ್ಲಿ ಅಂದರೆ 1995ರಿಂದ 2000ದ ನಡುವೆಯೇ ಕರ್ನಾಟಕದ ಸಾರ್ವಜನಿಕ ವಲಯದ ಹಲವಾರು ದೊಡ್ಡ ದೊಡ್ಡ ಕಾರ್ಖಾನೆಗಳು ನಷ್ಟಕ್ಕೀಡಾದವು ಮತ್ತು ಕೆಲವು ಕಾರ್ಖಾನೆಗಳು ಮುಚ್ಚಿ ಹೋದವು. ಈ ಅವಧಿಯಲ್ಲಿ ಖಾಸಗಿ ಕಂಪೆನಿಗಳಿಗೆ ನೂರರಿಂದ ಸಾವಿರಾರು ಕೋಟಿ ರೂಪಾಯಿಗಳವರೆಗೆ ಸಬ್ಸಿಡಿ, ತೆರಿಗೆ ವಿನಾಯಿತಿಗಳನ್ನು ಘೋಷಿಸುತ್ತಾ ಹೋದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಾರ್ವಜನಿಕ ವಲಯದ ಕಾರ್ಖಾನೆ ಗಳಿಗೆ ಅಂತಹ ಯಾವ ವಿನಾಯಿತಿಗಳನ್ನೂ ನೀಡಲಿಲ್ಲ. ಸರ್ಕಾರದ ಬೊಕ್ಕಸದಿಂದ ಬಾಚಿಕೊಂಡೇ ದೇಶದ ಅತ್ಯಂತ ಶ್ರೀಮಂತರಾದ ಅಂಬಾನಿ ಸೋದರರು ಮತ್ತು ಇನ್ನಿತರ ಭಾರತದ ದೊಡ್ಡ ಬಂಡವಾಳಶಾಹಿಗಳು 50 ಸಾವಿರ ಕೋಟಿ ರೂ.ಗಳಿಂದ ಲಕ್ಷ ಕೋಟಿಗಳವರೆಗೆ ಆಸ್ತಿ ಸಂಪಾದಿಸುವಂತಾಗಿದ್ದು ಇದೇ ಅವಧಿಯಲ್ಲಿ. ಇದು ಎಲ್ಲಕ್ಕಿಂತ ಮುಖ್ಯ ಅಂಶ. ಇಲ್ಲವಾದರೆ ಒಂದಿಡೀ ತಾಲೂಕನ್ನು ಸಾಕಬಹುದಾಗಿದ್ದ ಕಂಪೆನಿಯೊಂದಕ್ಕೆ ಸರ್ಕಾರ 150ರಿಂದ 200 ಕೋಟಿಗಳನ್ನು ಕೊಡಲು ಸಾಧ್ಯವಿರಲಿಲ್ಲವೇ? ನೈಸ್ ಸಂಸ್ಥೆಯೊಂದಕ್ಕೆ ನೀಡಿರುವ ತೆರಿಗೆ ವಿನಾಯಿತಿಗಳು, ಎಕರೆಗೆ 10 ರೂ.ನಂತೆ ಸಾವಿರಾರು ಎಕರೆ ಸರ್ಕಾರೀ ಭೂಮಿ ಎಲ್ಲವನ್ನೂ ಲೆಕ್ಕ ಹಾಕಿದರೆ, ಅದು 1000 ಕೋಟಿಗಳಷ್ಟಾಗುತ್ತದೆ. ಖಾಸಗಿ ಕಂಪೆನಿಗಳು ಲಾಭದ ಮೇಲೆ ಲಾಭ, ಸರ್ಕಾರಿ ಕಂಪೆನಿಗಳು ನಷ್ಟದ ಮೇಲೆ ನಷ್ಟ ಅನುಭವಿಸಲು ಇದೇ ಕಾರಣವಾಗಿದೆ.

ಸಕ್ಕರೆ ಉದ್ಯಮವನ್ನು ನೋಡಿದರೂ, ಇದೇ ಸಂದರ್ಭದಲ್ಲೇ ಕರ್ನಾಟಕದ ಬಹುತೇಕ ಸಹಕಾರೀ ಸಕ್ಕರೆ ಕಾರ್ಖಾನೆಗಳು ಸಹ ನಷ್ಟಕ್ಕೆ ಗುರಿಯಾದವು ಮತ್ತು ಮುಚ್ಚಿಹೋದವು. ಇದ್ದುದರಲ್ಲಿ ಉಳಿದುಕೊಳ್ಳಲು ಸಾಧ್ಯವಾಗಿದ್ದು ಮೈಷುಗರ್‌ಗೆ ಮಾತ್ರವೇ. ಅದಕ್ಕೆ ಮುಖ್ಯ ಕಾರಣ, ಸಕ್ಕರೆ ಉತ್ಪಾದನೆಯ ಜೊತೆಗೇ ನಡೆಯುತ್ತಿದ್ದ ಡಿಸ್ಟಿಲರಿ ಮತ್ತು ಸಾರಾಯಿ ಉತ್ಪಾದನೆಯ ಕಾಂಟ್ರಾಕ್ಟ್. ಇಡೀ ರಾಜ್ಯಕ್ಕೆ ಬೇಕಾದ ಸಾರಾಯಿಯನ್ನು ಉತ್ಪಾದಿಸುತ್ತಿದ್ದುದು ಮೈಷುಗರ್‌ನಲ್ಲೇ. ಕಾರ್ಖಾನೆಯನ್ನು ಉಳಿಸುತ್ತಿದ್ದ ಇದೇ ಬಾಬ್ತೇ ನಂತರ ಕಾರ್ಖಾನೆಗೆ ಬಲವಾದ ಪೆಟ್ಟು ಕೊಟ್ಟಿತು. ಮೊದಲನೆಯದಾಗಿ ಸಾರಾಯಿ ತೆರಿಗೆಯನ್ನು ಮೂಲದಲ್ಲೇ ಮುರಿದುಕೊಳ್ಳದೆ ಮೈಷುಗರ್ 1995-96ರಿಂದ 2000-01ರವರೆಗೆ ಮಾರಿದ್ದರಿಂದ, ಸುಮಾರು 40 ಕೋಟಿ ತೆರಿಗೆ ಕಂಪೆನಿಯ ಮೇಲೆ ಬಂದಿತು. ಇದಕ್ಕೆ ಅಷ್ಟೇ ಪ್ರಮಾಣದ ಬಡ್ಡಿಯೂ ಸೇರಿಕೊಂಡಿದೆ. ಸರ್ಕಾರಕ್ಕೆ ಇಂದು ಮೈಷುಗರ್‌ನಿಂದ ಸಲ್ಲಬೇಕಿರುವ ಒಟ್ಟು ತೆರಿಗೆ ಹಣ 110 ಕೋಟಿಯಷ್ಟಾದರೂ ಆಗುತ್ತದೆ. ಎರಡನೆಯ



ಮೈಷುಗರ್ ಹೀಗಾಗಲು ಕಾರ್ಮಿಕರೇ ಕಾರಣವಾ?

ಮೈಷುಗರ್ ಕಂಪೆನಿಯು ತನ್ನದೇ ಫಾರ್ಮ್‌ನಲ್ಲಿ ಕಬ್ಬು ಬೆಳೆಯುತ್ತಿದ್ದ ಸಂದರ್ಭದಲ್ಲಿ ನಾಲ್ಕು ಸಾವಿರದಷ್ಟು ಕಾರ್ಮಿಕರನ್ನು ಹೊಂದಿತ್ತು ಎಂದು ಹೇಳಲಾಗುತ್ತದೆ. ಬಹಳಷ್ಟು ಕೆಲಸವು ಮ್ಯಾನ್ಯುಯಲ್ ಆಗಿ ನಡೆಯುತ್ತಿದ್ದಾಗ ಕಾರ್ಖಾನೆಯಲ್ಲೂ ಹೆಚ್ಚು ಜನರ ಅಗತ್ಯವಿತ್ತು, ಆದರೆ ಈಗ ಇರುವ ಸುಮಾರು 860 ಕಾರ್ಮಿಕರಲ್ಲಿ ಹೆಚ್ಚೂಕಡಿಮೆ ಅರ್ಧದಷ್ಟು ಜನರು ಕೆಲಸವಿಲ್ಲದೆ ಇರುತ್ತಾರೆ. ಇದರಿಂದ 'ಈ ಕಾರ್ಮಿಕರಿಂದಲೇ ಕಾರ್ಖಾನೆ ಲಾಸ್ ಆಗಿರುವುದು' ಎಂಬ ಅಭಿಪ್ರಾಯವೂ ಕೆಲವರಲ್ಲಿದೆ. ಅಗತ್ಯಕ್ಕಿಂತ ಹೆಚ್ಚು ಸಂಖ್ಯೆಯ ಕಾರ್ಮಿಕರು ಇರುವುದು ನಿಜವಾದರೂ, ಇದಕ್ಕೆ ಯಾರು ಹೊಣೆ ಎಂಬುದನ್ನು ನೋಡಬೇಕು. ಪ್ರತಿಯೊಬ್ಬ ಅಧ್ಯಕ್ಷ ಬದಲಾದಾಗಲೂ, ತನಗೆ ಬೇಕಾದವರನ್ನು ಒಳತೂರಿಸುತ್ತಿದ್ದರು. ಕಾರ್ಖಾನೆಗೆ ಯಾವ ಕೊಡುಗೆಯನ್ನೂ ನೀಡದ ಸಂಸದ ಅಂಬರೀಷ್, ಅದು ನಷ್ಟಕ್ಕೀಡಾಗುತ್ತಿದ್ದಾಗ 55 ಜನರನ್ನು ಒಳಸೇರಿಸಿದರು. ಇವೆಲ್ಲದರ ಕಾರಣದಿಂದ ಭಾರತದ ಕೈಗಾರಿಕೆಗಳಲ್ಲಿ ಆಡಳಿತ ಸಿಬ್ಬಂದಿಯ ಖರ್ಚು ಶೇ.6 ಇದ್ದರೆ, ಮೈಷುಗರ್‌ನಲ್ಲಿ ಶೇ.19 ಇದೆ. ಇದರ ಹೊಣೆಯನ್ನು ಜವಾಬ್ದಾರಿ ಸ್ಥಾನದಲ್ಲಿದ್ದ ರಾಜಕಾರಣಿಗಳು ಹೊರಬೇಕೇ ಹೊರತು ಕಾರ್ಮಿಕರಲ್ಲ. ಈ ಕಾರ್ಮಿಕರು ಕೆಲಸ ಮಾಡದಿದ್ದರೆ ಸಾವಿರಾರು ಟನ್ ಸಕ್ಕರೆ ಅಲ್ಲಿ ಉತ್ಪಾದನೆಯಾಗುತ್ತಿರಲಿಲ್ಲ. ಕಾರ್ಮಿಕರನ್ನು ಬಯ್ಯುವ ರೈತರೂ ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ. ರೈತರಿಗೂ ಇದೇ ಮಾತನ್ನು ಹೇಳುತ್ತಾರೆ ಎಂಬುದನ್ನು ಅವರು ಗಮನಿಸಬೇಕು. ಕೆಲಸ ಮಾಡದೆ ಊರಮುಂದಿನ ಕಟ್ಟೆಯಲ್ಲಿ ಕುಳಿತು, ಸೋಮಾರಿಗಳಾಗಿರುವುದರಿಂದಲೇ ರೈತಕುಲ ಉದ್ಧಾರವಾಗಿಲ್ಲ ಎನ್ನುವ ಮಾತು ಎಷ್ಟು ತಪ್ಪೋ, ಕೇವಲ ಕಾರ್ಮಿಕರನ್ನು ದೂರುವುದೂ ಅಷ್ಟೇ ತಪ್ಪು.

ಇದರರ್ಥ ಇಲ್ಲಿನ ಸಿಬ್ಬಂದಿ ಮತ್ತು ಕಾರ್ಮಿಕರಲ್ಲಿ ಭ್ರಷ್ಟಾಚಾರವಿಲ್ಲ ಎಂದಲ್ಲ. ಸತ್ತವರ ಹೆಸರಿನಲ್ಲಿ, ಕೆಲಸ ಬಿಟ್ಟವರ ಹೆಸರಿನಲ್ಲಿ ಕೆಲಸ ಮಾಡುತ್ತಿರುವವರು ಸುಮಾರು 200ರಷ್ಟು ಕಾರ್ಮಿಕರು ಇಲ್ಲಿದ್ದಾರೆ. ಬರೆದರೆ ಅದೇ ಒಂದು ದೊಡ್ಡ ಹಗರಣವಾಗುತ್ತದೆ. ಸುಳ್ಳು ಹೆಸರಿನಲ್ಲಿ ಕೆಲಸ ಮಾಡಿದ ಕೆಲವರು ಆಗಲೇ ವಿಆರ್‌ಎಸ್ ಸಹ ತೆಗೆದುಕೊಂಡಿದ್ದಾರೆಂದರೆ ಯಾವ ಪ್ರಮಾಣದ ಕಣ್ಣಾಮುಚ್ಚಾಲೆ ಇಲ್ಲಿ ನಡೆಯುತ್ತಿದೆಯೆಂಬುದನ್ನು ಊಹಿಸಬಹುದು. ಇದೇ ಕಾರ್ಮಿಕರು ರಾಜಕಾರಣಿಗಳ ಆಟದ ದಾಳಗಳೂ ಆಗಿದ್ದಾರೆ. ಅಧ್ಯಕ್ಷ ನಾಗರಾಜಪ್ಪನ ಪರವಾಗಿ ಕಾರ್ಮಿಕರ ಒಂದು ಗುಂಪು ಎರಡೆರಡು ದಿನ ಪ್ರತಿಭಟನೆ ಮಾಡಿತು. ಯೂನಿಯನ್‌ನಲ್ಲಿ ತಕ್ಕಡಿ ಮತ್ತು ಗಾಡಿ ಗುಂಪುಗಳ ಜೊತೆಗೆ ಈಗ ಇನ್ನೂ ಎರಡು ಗುಂಪುಗಳಾಗಿವೆ. ಎಲ್ಲರೂ ಒಟ್ಟಿಗೆ ಸೇರಿ ತಮಗೆ ಅನ್ನ ನೀಡುತ್ತಿರುವ ಕಾರ್ಖಾನೆಯನ್ನು ಉಳಿಸಲು ಮಾಡಬೇಕಾದ ಸಂಘಟಿತ ಪ್ರಯತ್ನದ ಕುರಿತು ಯೋಚಿಸದಿದ್ದರೆ ಅವರಿಗೇ ಉಳಿಗಾಲವಿಲ್ಲ. ■

ಎಂಡಿ ಅಮರನಾರಾಯಣ ಮುಕ್ಕಿದ್ದೆಷ್ಟು?

2002-03 ಮೈಷುಗರ್ ಪಾಲಿಗೆ ಕರಾಳ ವರ್ಷ. ಈ ಸಂದರ್ಭದಲ್ಲಿ ಎಂಡಿಯಾಗಿ ವಕ್ಕರಿಸಿಕೊಂಡಿದ್ದವನು ಅಮರನಾರಾಯಣ. ಈ ಸಾಲಿನಲ್ಲಿ ಅಕ್ಷಾಂತರ ಟನ್ ಸಕ್ಕರೆ ಮಾರಾಟದ ಅಕ್ರಮ ನಡೆಯಿತು. ಯಾವ ಪಾರದರ್ಶಕ ನಿಯಮವನ್ನೂ ಪಾಲಿಸದೆ, ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಗೆ ಖಾಸಗಿ ಸಕ್ಕರೆ ಕಂಪನಿಗಳ ಏಜೆನ್ಸಿಗಳಿಗೆ (ಬನ್ನಾರಿಯಮ್ಮನ್ ಮತ್ತು ಶಾಮನೂರು ಶಿವಶಂಕರಪ್ಪನ ಏಜೆನ್ಸಿಗಳೇ) ಸಕ್ಕರೆ ಮಾರಲಾಯಿತು. ಮಾರಿದ ಒಂದು ತಿಂಗಳಿಗೇ 625ರಿಂದ 700ರೂ.ಗಳಷ್ಟು ಸಕ್ಕರೆಯ ಬೆಲೆ ಏರಿತು. ಖಾಸಗಿ ಕಂಪನಿಗಳು ಲಾಭ ಸೂರೆ ಹೊಡೆದವು. ಮೈಷುಗರ್ ತಲೆ ಮೇಲೆ 25 ಕೋಟಿಗಳಿಗೂ ಹೆಚ್ಚು ಹೊರೆ ಬಿದ್ದಿತು.

ಈ ಅಮರನಾರಾಯಣ ಸಕ್ಕರೆ ಖರೀದಿಯಲ್ಲಿ ಅವ್ಯವಹಾರ ಮಾಡಿರುವುದು ನಿಜ ಎಂದು ಅಂದಿನ ಅಧ್ಯಕ್ಷ ಎಂ.ಜಿ.ರಾಜು ವಾರ್ಷಿಕ ಮಹಾಸಭೆಯಲ್ಲೇ ಒಪ್ಪಿಕೊಂಡರೂ ಯಾವ ಕ್ರಮಗಳನ್ನೂ ಕೈಗೊಳ್ಳಲಿಲ್ಲ. ರೈತರು ಎಷ್ಟು ರೋಸಿ ಹೋಗಿದ್ದರೆಂದರೆ, ಅಮರನಾರಾಯಣ ಇಲ್ಲಿಂದ ವರ್ಗಾವಣೆ ಆದ ಮೇಲೂ ಅವರ ಸಿಟ್ಟು ಇಳಿದಿರಲಿಲ್ಲ. ತನ್ನ ಮಗಳ ಮದುವೆಯ ಆಹ್ವಾನ ಪತ್ರಿಕೆ ಹಂಚಲು ಬಂದಿದ್ದ ಆತನನ್ನು ಫ್ಯಾಕ್ಟರಿಯ ರೂಮಿನಲ್ಲೇ ಕೂಡಿ ಹಾಕಿದ್ದರು. ಅಮರನಾರಾಯಣನ ಅವ್ಯವಹಾರದ ನಂತರ ಕಾರ್ಖಾನೆ ಚೇತರಿಸಿಕೊಳ್ಳಲೇ ಇಲ್ಲ.

▶▶▶

ದಾಗಿ ಸಾರಾಯಿ ನಿಷೇಧದಿಂದಾಗಿ ಇಂದು ಈ ಮೂಲದ ಆದಾಯವೂ ಇಲ್ಲವಾಗಿದೆ. ಈ ನಾಡಿನ ರೈತರ-ಕಾರ್ಮಿಕರ ಫ್ಯಾಕ್ಟರಿಯಿಂದ ಬರಬೇಕಾದ ಜುಜುಬಿ 110 ಕೋಟಿ ತೆರಿಗೆಯನ್ನು ಮನ್ನಾ ಮಾಡಲಾಗದ ಸರ್ಕಾರಗಳು ಮೈಷುಗರ್ ಪುನಶ್ಚೇತನದ ಬಗ್ಗೆ 'ಸ್ವಪ್ನ ಭರವಸೆ'ಯನ್ನು ಮಾತ್ರ ನೀಡುತ್ತವೆ.

2001ರಲ್ಲಿ ನಷ್ಟದ ವಾಸನೆ ಹೊಡೆಯುತ್ತಿದ್ದ ಪರಿಸ್ಥಿತಿಯಲ್ಲೇ ಕೋಜನರೇಷನ್‌ನಂತಹ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದು ಮೈಷುಗರ್‌ಗೆ ಇನ್ನೂ ದೊಡ್ಡ ಹೊಡೆತ ನೀಡಿತು. ಕಂಪೆನಿಗೆ ಜೀವದಾನ ಮಾಡಬೇಕಿದ್ದ ಕೋಜನರೇಷನ್ ಯೂನಿಟ್ ಅದರ ಕತ್ತು ಹಿಸುಕಲು ಶುರು ಮಾಡಿತು. ಆದರೆ ಈ ಹೊತ್ತಿಗಾಗಲೇ ಕಾರ್ಖಾನೆಯ ಕಬ್ಬು ಬೆಳೆಯ ವ್ಯಾಪ್ತಿಯನ್ನು ಎಸ್.ಎಂ.ಕೃಷ್ಣರ ಕಾರ್ಖಾನೆ ಕಿರಿದುಗೊಳಿಸಿತ್ತು, ಮೈಷುಗರ್‌ಗೆ ಬರುತ್ತಿದ್ದ ಕಬ್ಬಿನ ಪ್ರಮಾಣ ಕಡಿಮೆಯಾಗಿತ್ತು, ಒಂದು ಮಿಲ್ ಕೈಕೊಟ್ಟಿತ್ತು, ಕಾರ್ಖಾನೆ ಲಾಸ್‌ನಲ್ಲಿತ್ತು, ಸರ್ಕಾರ ಕೈಬಿಟ್ಟಿತ್ತು ಎಂಬ ಅಂಶಗಳನ್ನು ಗಮನಿಸಲಿಲ್ಲ. ಮೊದಲ ಮೂರು ಕಾರಣಗಳಿಂದ ಕೋಜನರೇಷನ್‌ನ ಒಂದೇ ಯಂತ್ರಕ್ಕೆ ಬೇಕಾದಷ್ಟು ಕಬ್ಬಿನ ಸಿಪ್ಪೆ ಲಭ್ಯವಾಗದೆ ಅದು ನಡೆಯಲು ಸಾಧ್ಯವಿರಲಿಲ್ಲ. ಕೊನೆಯ ಎರಡು ಕಾರಣಗಳಿಂದ ಅದನ್ನು ಸುಧಾರಿಸಿಕೊಳ್ಳಲು ಬೇಕಾದ ಹಣ ಹೂಡುವ ಸಾಧ್ಯತೆಯೂ ಇರಲಿಲ್ಲ. ಹೀಗಾಗಿ ಇನ್ನೂ 20 ಕೋಟಿ ಹಾಕಿ, ಹೇಗೋ ಕೋಜನರೇಷನ್‌ಅನ್ನು ಚಾಲೂ ಮಾಡುವ ಕೆಲಸವೇ ಆಗಲಿಲ್ಲ. ಹುಡ್ಕೋದಿಂದ ಮತ್ತು ರಾಜ್ಯ ಸರ್ಕಾರದಿಂದ ಸಾಲ ಮಾಡಿ ತಂದು ಹೂಡಲಾದ 100 ಕೋಟಿ ರೂಪಾಯಿ ಡೆಡ್ ಇನ್‌ವೆಸ್ಟ್‌ಮೆಂಟ್ ಆಯಿತು ಮತ್ತು ಈಗಾಗಲೇ ಆಗಿದ್ದ ನಷ್ಟ ಹೆಚ್ಚುತ್ತಾ ಹೋಯಿತು.

ಇದೇ ನಷ್ಟದ ಅವಧಿಯಲ್ಲೇ ಎಂಡಿ ಅಮರನಾರಾಯಣ ಮಾಡಿದ ಸಕ್ಕರೆ ಖರೀದಿ ಅವ್ಯವಹಾರವು ಕಂಪೆನಿಯನ್ನು ಮತ್ತಷ್ಟು ಲಾಸ್‌ಗೆ ದೂಡಿತು (ನೋಡಿ ಬಾಕ್ಸ್). ಕಾರ್ಖಾನೆಯಲ್ಲಿ ಅಗತ್ಯಕ್ಕಿಂತ ಹೆಚ್ಚುಕಡಿಮೆ ಎರಡು ಪಟ್ಟು ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅಥವಾ ಮಾಡಲು ಕೆಲಸವೇ ಇರಲಿಲ್ಲ. ಕಾರ್ಖಾನೆಗೆ ಬರುತ್ತಿದ್ದ ಕಬ್ಬೇ ಕಡಿಮೆಯಾಗಿತ್ತು. ಕಬ್ಬು ಸೀಸನ್‌ನ ಪೂರ್ಣ ಅವಧಿಗೆ ಕೆಲಸ ನಡೆಯುತ್ತಿರಲಿಲ್ಲ. ಕಾರ್ಖಾನೆಯಲ್ಲಿ ಅರೆಯುವುದನ್ನು ಪ್ರಾರಂಭಿಸುವುದೇ ತಡಮಾಡಲಾಗುತ್ತಿತ್ತು. ಹೀಗಾಗಿ ಕಾರ್ಮಿಕರನ್ನು ಸಾಕುವುದು ದುಬಾರಿಯಾಗತೊಡಗಿತು. ಇದೇ ಸಂದರ್ಭದಲ್ಲಿ ಕಾರ್ಮಿಕರ ಸಂಖ್ಯೆ ಇಳಿಸಲು ಘೋಷಿಸಲಾದ ಸ್ವಯಂ ನಿವೃತ್ತಿ (ವಿಆರ್‌ಎಸ್) ಯಶಸ್ವಿಯಾಗಲಿಲ್ಲ.

ಇವೆಲ್ಲವೂ ಸೇರಿ ಕಾರ್ಖಾನೆ ಬಿಕ್ಕಟ್ಟಿಗೆ ಬಿದ್ದಿತು. ಹೆಚ್ಚುತ್ತಿದ್ದ ಬಡ್ಡಿ ಮತ್ತು ತೆರಿಗೆಯನ್ನು ತಪ್ಪಿಸಿಕೊಳ್ಳಲು, 2004ರಲ್ಲಿ ಇದನ್ನು ರೋಗಗ್ರಸ್ತ ಕಾರ್ಖಾನೆಯೆಂದು ಘೋಷಿಸಲು ಕೋರಲಾಯಿತು. (ಬಿಐಎಫ್‌ಆರ್ ಕೇಸ್ ಸಂಖ್ಯೆ: 601/2004). 12-9-2005ರಂದು ಮೈಷುಗರ್‌ಅನ್ನು ರೋಗಗ್ರಸ್ತ ಕಂಪೆನಿ ಎಂದು ಘೋಷಿಸಲಾಯಿತು.

ಅದುವರೆಗೂ ಮಂಡ್ಯ ಜಿಲ್ಲೆ ಮತ್ತು ಈ ರಾಜ್ಯಕ್ಕಾಗಿ ಇಷ್ಟೊಂದು ಕೊಡುಗೆಯನ್ನು ನೀಡಿದ್ದ ಕಂಪೆನಿಯನ್ನು ಉಳಿಸುವ ಜವಾಬ್ದಾರಿ ಯಾರದ್ದಾಗಿತ್ತು? ರಾಜ್ಯ ಸರ್ಕಾರ ಇದರ ಹೊಣೆ ಹೊತ್ತುಕೊಂಡು ಮೈಷುಗರ್‌ಅನ್ನು ಉಳಿಸುವ ಕೆಲಸ ಮಾಡಬೇಕಿತ್ತು, ಕಾಂಗ್ರೆಸ್‌ನಿಂದ ಈ ಜಿಲ್ಲೆಯಿಂದಲೇ ಮುಖ್ಯಮಂತ್ರಿಯಾದ ಎಸ್.ಎಂ.ಕೃಷ್ಣ ಇದ್ದರು. ನಂತರದ ಸಂಪುಟದಲ್ಲಿ ಪ್ರಭಾವಿ ಸಚಿವರಾಗಿದ್ದ ಜೆಡಿಎಸ್‌ನ ಚೆಲುವರಾಯ ಸ್ವಾಮಿ ಮತ್ತು ಅವರ ನಾಯಕ ಮಣ್ಣಿನ ಮೊಮ್ಮಗ ಕುಮಾರಸ್ವಾಮಿ ಇದ್ದರು. ಯಾರೂ ಇದನ್ನು ಸೂಕ್ತವಾಗಿ ಬಗೆಹರಿಸುವ ಪ್ರಯತ್ನ ಮಾಡಲಿಲ್ಲ. ಸರ್ಕಾರಕ್ಕೇ ಬರಬೇಕಾಗಿದ್ದ ತೆರಿಗೆ ಮನ್ನಾ ಮಾಡಿ, ಕಬ್ಬು ಬೆಳೆಗಾರರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಮಗ್ರ ಪುನಶ್ಚೇತನ ಯೋಜನೆಯೊಂದಿಗೆ ಉದಾರವಾಗಿ 150 ಕೋಟಿ ಕೊಟ್ಟಿದ್ದರೆ, ಮೈಷುಗರ್ ಹಿಂದಿನಕ್ಕಿಂತ ಚೆನ್ನಾಗಿ ನಡೆಯುವುದರಲ್ಲಿ ಯಾವುದೇ ಸಂದೇಹವಿರಲಿಲ್ಲ. ಈಗಾಗಲೇ ಶುರು ಮಾಡಿರುವ ಕೋಜನರೇಷನ್ ಜೊತೆಗೆ ಎಥೆನಾಲ್ ಉತ್ಪಾದನೆಗೆ ಬೇಕಾದ ತಯಾರಿ ಮಾಡಿಕೊಂಡಿದ್ದರೆ ಕೆಲಸವಿಲ್ಲದೆ ಕೂತಿರುವ ಇತರ ಕಾರ್ಮಿಕರಿಗೂ ಕೆಲಸ ಕೊಡಬಹುದಿತ್ತು. ಕಾರ್ಖಾನೆಯನ್ನು ಈ ರೀತಿ ನಡೆಸುತ್ತೇವೆ, ನೀವು ತಪ್ಪದೆ ಇಷ್ಟು ಕಬ್ಬು ತಂದುಕೊಡಿ, ಸಾಲದ್ದಕ್ಕೆ ನಿಮ್ಮಿಂದ ಟನ್ನಿಗೆ ಇಷ್ಟು ರೂಪಾಯಿ ಕಾರ್ಖಾನೆಯ ಪುನಶ್ಚೇತನಕ್ಕೆ ಹಣ ನೀಡಿ ಎಂದಿದ್ದರೆ ಮೈಷುಗರ್ ವ್ಯಾಪ್ತಿಯ ರೈತರು ತಪ್ಪದೆ ಜೊತೆಗೆ ನಿಲ್ಲುತ್ತಿದ್ದರು. ಅದರ ಬದಲಿಗೆ 75 ಕೋಟಿ ಕೊಟ್ಟು ಕೈತೊಳೆದುಕೊಂಡರು. ಇದೇ ಜಿಲ್ಲೆಯ ಇನ್ನೊಬ್ಬ ಮುಖ್ಯಮಂತ್ರಿ ಯಡಿಯೂರಪ್ಪನೆಂಬ ಸುಳ್ಳಪ್ಪ ಅದನ್ನೂ ಮಾಡಲಿಲ್ಲ. 50 ಕೋಟಿ ಕೊಡುತ್ತೇನೆಂದು ಬಜೆಟ್‌ನಲ್ಲೇ ಘೋಷಿಸಿ ತಿಂಗಳುಗಳೇ ಕಳೆದರೂ ಇನ್ನೂ 50 ಪೈಸೆ ಸಹ ಬಂದಿಲ್ಲ. ತನ್ನ ಮಗನನ್ನು ಶಿವಮೊಗ್ಗದಲ್ಲಿ ಗೆಲ್ಲಿಸಲು 100 ಕೋಟಿ ದುಡ್ಡು ಸುರಿದ ಯಡ್ಡಿಗೆ ಇನ್ನೂ ಮೈಷುಗರ್ ನೆನಪಿಗೆ ಬರಲಿಲ್ಲ. ತಾನು ಮಂಡ್ಯದಲ್ಲಿ ಓದಿದ ಶಾಲೆಯ ಗೇಟನ್ನೂ ಸಹ ಇದೇ ಮೈಷುಗರ್ ನೀಡಿತ್ತು ಎಂಬುದು ಅಧಿಕಾರದ ಮದದಲ್ಲಿ ಮೆರೆಯುತ್ತಿರುವ ಯಡ್ಡಿಗೆ ಹೇಗೆ ತಾನೇ ತಿಳಿಯಬೇಕು? ಇವರ್‍ಯಾರೂ ನಿಜವಾದ ಮಣ್ಣಿನ ಮಕ್ಕಳಲ್ಲ. ಎಲ್ಲರಿಗೂ ತಮ್ಮ ತಮ್ಮ ಅಧಿಕಾರದ್ದು ಮತ್ತು ನೂರು, ಸಾವಿರ ಕೋಟಿಗಳಲ್ಲಿ ಹಣ ದೋಚುವುದು ಮಾತ್ರ ಮುಖ್ಯವಾಗಿದೆ.

ಸಾರಾಂಶದಲ್ಲಿ ಆಡಳಿತ ಮಂಡಳಿಯ ವ್ಯಕ್ತಿಗತ ಭ್ರಷ್ಟಾಚಾರ ಮತ್ತು ಅದಕ್ಷ ಆಡಳಿತ, ತಾಂತ್ರಿಕ ಮುನ್ನೋಟವಿಲ್ಲದ ಕ್ರಮಗಳು ಒಂದು ರೀತಿಯ ಕಾರಣವಾಗಿದ್ದರೆ ಅದಕ್ಕಿಂತ ಪ್ರಮುಖ ಕಾರಣ ಸರ್ಕಾರದ ನೀತಿಯದ್ದು. ಜಾಗತೀಕರಣದ ನೀತಿಯ ಭಾಗವಾಗಿ ಡಬ್ಲ್ಯುಟಿಓ ಒಪ್ಪಂದಕ್ಕೆ ಸಹಿ ಹಾಕಿರುವ ಸರ್ಕಾರಗಳು ಮತ್ತು ಅದನ್ನು ಒಪ್ಪಿಕೊಂಡಿರುವ ಎಲ್ಲಾ ಪಕ್ಷಗಳು ಸರ್ಕಾರೀ ಸ್ವಾಮ್ಯದ ಕಂಪೆನಿಗಳನ್ನು ಉಳಿಸಲು ಹೇಗೆ ಕ್ರಮ ಕೈಗೊಂಡಾರು? ಈ ಒಪ್ಪಂದದ ಭಾಗವಾಗಿ ಖಾಸಗಿ ಬಂಡವಾಳಶಾಹಿ ಮತ್ತು ವಿದೇಶೀ ಕಂಪೆನಿಗಳಿಗೆ ನೂರಲ್ಲಾ ಸಾವಿರ, ಲಕ್ಷ ಕೋಟಿಗಳ ಸಬ್ಸಿಡಿಯನ್ನು ನೀಡಬಹುದೇ ಹೊರತು ಸಾರ್ವಜನಿಕ ಸ್ವಾಮ್ಯದ ಕಂಪೆನಿಗಳಿಗಲ್ಲ. ಹಾಗಾಗಿ ಹೊಸ ದುಡ್ಡು ಕೊಡುವುದು ಹೋಗಲಿ, ಸರ್ಕಾರಕ್ಕೆ ಬರಬೇಕಿದ್ದ ತೆರಿಗೆಯನ್ನು ಮನ್ನಾ ಮಾಡಲೂ ಇವರುಗಳು ಮುಂದಾಗಲಿಲ್ಲ. ನಮ್ಮನ್ನಾಳುವ ಸರ್ಕಾರಗಳಿಗೆ ರೈತ-ಕಾರ್ಮಿಕರ ಪರವಾದ ಬದ್ಧತೆಯಿಲ್ಲದೇ ಇರುವುದು ಮೈಷುಗರ್ ಮುಳುಗುವ ಹಡಗಾಗಲು ಕಾರಣವಾಗಿದೆ. ಇಲ್ಲದೇ ಇದ್ದರೆ, ಇಷ್ಟೊಂದು ಮಹತ್ವ ಹೊಂದಿದ್ದ, ಸರಿಯಾದ ಪೋಷಣೆ ಸಿಕ್ಕಿದ್ದಿದ್ದರೆ ಇಡೀ ಮಂಡ್ಯವನ್ನು ಸಾಕುವ ಸಾಮರ್ಥ್ಯ ಹೊಂದಿದ್ದ ಕಂಪೆನಿಯೊಂದು ಮುಳುಗುವ ಹಡಗಾಗಲು ಸಾಧ್ಯವೇ ಇರಲಿಲ್ಲ.

● ಲಕ್ಷ್ಮಣ್ ಚೇರನಹಳ್ಳಿ

ಮೈಷುಗರ್-ಪಿಎಸ್‌ಎಸ್‌ಕೆ ವಿಲೀನ ಸಾಧುವೇ?

ಮೈಷುಗರ್ ಸಾರ್ವಜನಿಕ ವಲಯದ ಕಾರ್ಖಾನೆಯಾದರೆ, ಪಾಂಡವಪುರದ ಸಕ್ಕರೆ ಕಾರ್ಖಾನೆ ಸಹಕಾರಿ ವಲಯದಲ್ಲಿರುವ ಕಾರ್ಖಾನೆ. ಇದೂ ರೈತರ ಷೇರು ಹಣದಿಂದ, ವೈ.ಬಿ.ನೀಲೇಗೌಡರಂತಹವರ ದೂರದೃಷ್ಟಿಯಿಂದ 50 ವರ್ಷಗಳಿಗೂ ಹಿಂದೆಯೇ ಪ್ರಾರಂಭವಾದದ್ದು. ಮೈಷುಗರ್‌ನಂತೆಯೇ ಬಂದ ಲಾಭವನ್ನು ಜನೋಪಯೋಗಿ ಕೆಲಸಗಳಿಗೆ ವಿನಿಯೋಗಿಸಲಾಗುತ್ತಿತ್ತು, ರೈತರ ಮಕ್ಕಳ ಮೆಡಿಕಲ್ ಸೀಟುಗಳಿಗೂ ದುಡ್ಡು ಕೊಟ್ಟಿದೆ. ಆದರೆ 90ನೇ ಪಿಎಸ್‌ಎಸ್‌ಕೆ ಒಂದು ಹೆಜ್ಜೆ ಮುಂದೆ ಹೋಗಿ, ಇಸವಿಯಿಂದಲೇ ಸಾಲಕ್ಕೆ ಬಿದ್ದ ಪಿಎಸ್‌ಎಸ್‌ಕೆಯನ್ನು 1996ರಲ್ಲಿ ಕೊಠಾರಿ ಶುಗರ್ಸ್ ಎಂಬ ಖಾಸಗಿ ಕಂಪೆನಿಗೆ 7 ವರ್ಷಗಳ ಲೀಸ್‌ಗೆ ವಹಿಸಲಾಯಿತು. ಎಂಎಲ್‌ಎ ಪುಟ್ಟರಾಜುವಿನ ಖಾಸಾ ಗೆಣೆಕಾರರಾಗಿರುವ ಈ ಕಂಪೆನಿಯವರು ಕಳೆದ ವರ್ಷ ರೈತರ [illegible] ಹಣ ಕೊಡುವುದಿರಲಿ, ಕಾರ್ಖಾನೆಯ ಯಂತ್ರೋಪಕರಣಗಳನ್ನೇ ಕದ್ದು ಸಾಗಿಸಿಬಿಟ್ಟರು. ಇಂತಹ ದಗಲ್ಬಾಜಿ ಕಂಪೆನಿ ಎಂದು ಗೊತ್ತಿದ್ದರೂ, ಪುಟ್ಟರಾಜು [illegible] ಇದೇ ಕಂಪೆನಿಗೆ 30 ವರ್ಷಕ್ಕೆ ಲೀಸ್ ಮುಂದುವರೆಸಿ ಎಂದು ಶಿಫಾರಸ್ಸು ಮಾಡಿದರು. ಇದೇ ವ್ಯಾಪ್ತಿಯ ಇನ್ನೊಬ್ಬ ಶಾಸಕ ರಮೇಶಬಾಬು [illegible] ಉಳಿಯುವ ಕೆಲಸ ಮಾಡದೆ, ನೋಡುತ್ತಾ ನಿಂತುಬಿಟ್ಟರು.

ಇದೀಗ ಯಡಿಯೂರಪ್ಪನ ಸರ್ಕಾರ ಪಾಂಡವಪುರ ಕಾರ್ಖಾನೆಗೆ [illegible] ಪ್ರತ್ಯೇಕ ಪ್ಯಾಕೇಜ್ ಮಾಡಿ ಅದನ್ನು ಉಳಿಸುವ ಬದಲಿಗೆ ಈಗಾಗಲೇ ರೋಗಿಷ್ಟವಾಗಿರುವ ಮೈಷುಗರ್ ಜೊತೆ ಇದನ್ನು ವಿಲೀನ ಮಾಡಲು [illegible] ಹೊರಟಿದೆ. ಬಿಜೆಪಿಯ ನಾಗರಾಜಪ್ಪ ಸ್ವಾಮಿ [illegible] ಮಾಡಲು ಇನ್ನೊಂದು ಕಂಪೆನಿಯನ್ನೂ ಒದಗಿಸುವುದು ಬಿಟ್ಟರೆ ಇದರಿಂದ ಇನ್ನಾವ ಉಪಯೋಗವೂ ಇಲ್ಲ. ಬಹುಶಃ ಮೈಷುಗರ್ ವ್ಯಾಪ್ತಿಯ ಕಬ್ಬು ಮಾತ್ರ ಅದನ್ನು ರನ್ ಮಾಡಲು ಸಾಧ್ಯವಾಗದಿದ್ದರಿಂದ ಈ ಒಳತಂತ್ರವನ್ನು ಉಪಯೋಗಿಸಲಾಗಿದ್ದರೂ, ಇದರಿಂದ ಯಾವ ದೀರ್ಘಕಾಲಿಕ ಲಾಭವೂ ಇಲ್ಲ. ಖಾಸಗಿಯವರಿಗೆ ಮಾರಿಬಿಡುವಾಗ ಎರಡೂ ಕಾರ್ಖಾನೆಗಳನ್ನು ಒಟ್ಟಿಗೆ ಮಾರಿದರೆ ಹೆಚ್ಚು ಲಾಭ ಸಿಗಬಹುದೆಂಬ ಹುನ್ನಾರವೂ ಇದರ ಹಿಂದೆ ಇರಬಹುದು. ■

ಅದೀಗ ಸಾಂಸ್ಕೃತಿಕ ನಗರಿಯಲ್ಲ, ಮಾಧ್ಯಮದವರ ಕೇರಿ

ವಿಜಯ್ ಎಂಬ ಸೋಲು ತಿಮಿರಿನ ನಟ ಶಿವಮೊಗ್ಗದ ಕಡೆ 'ತಾಕತ್' ಸಿನಿಮಾ ಹೇಗೆ ನಡೆಯುತ್ತಿದೆ ಎಂದು ನೋಡಲು ಹೋಗಿ ಮಾಧ್ಯಮದವರಿಂದ ಹಿಗ್ಗಾಮುಗ್ಗ ಇಕ್ಕಿಸಿಕೊಂಡು ಬಂದನಂತಲ್ಲಾ. ಶಿವಮೊಗ್ಗದ ಕಡೆ ಹೋದ ವಿಜಯ್ ಬೇಸರ ಕಳೆಯಲೆಂದು ನಟಿ ಶುಭಾ ಪೂಂಜಾಳನ್ನೂ ಕರೆದುಕೊಂಡು ಹೋದನಂತಲ್ಲಾ. ಪುರೋಹಿತರೇ ಹೆಚ್ಚಿರುವ ಕೇರಿಯೊಂದಕ್ಕೆ ಹೋಗಿ, ಪ್ರಶಸ್ತ ಜಾಗಕ್ಕೆ ಹುಡುಕಾಡುತ್ತಿದ್ದಾಗ ಬಂದ ವಟುವೊಂದು "ಸಾರ್, ನೀವು ಬಂದಿರುವುದು ಯಜ್ಞ, ಯಾಗ, ಹವನ, ಹೋಮ ನಡೆಯುವ ತಾಣಕ್ಕೆ. ಇಂತಹ ಜಾಗಕ್ಕೆ ಬಂದು ಹಾಗೇ ಹೋಗುವಂತಿಲ್ಲ, ಏನಾದರೂ ಮಾಡಿಸಿಕೊಂಡೇ ಹೋಗಿ" ಎಂದಿತಂತಲ್ಲಾ. "ಅದು ಆಮೇಲೆ, ಈಗ ಮೊದಲು ನನ್ನ ಕೆಲವು ಕರ್ತವ್ಯಗಳನ್ನು ಪೂರೈಸಬೇಕಿದೆ" ಎಂದು ವಿಜಯ್ ಅವಸರಗೊಂಡಂತೆ ಜಾಗ ಹುಡುಕುತ್ತಿದ್ದಾಗ, ಅಲ್ಲಿಗೂ ಬಂದ ಮಾಧ್ಯಮದವನಿಗೆ ಗುರಾಯಿಸಿದನಂತಲ್ಲಾ. ಹೆಗಲ ಮೇಲೆ ಕ್ಯಾಮರಾ ಹೊತ್ತು ಬೆಳಗಿನಿಂದ ಸಂಜೆವರೆಗೆ ಹೊಟ್ಟೆಪಾಡಿಗಾಗಿ ಅಲೆಯುವ ಟಿ.ವಿ. ಮಾಧ್ಯಮದವರನ್ನು ಕಂಡು ರೇಗಿದ ವಿಜಯ್ "ನಾನು ಮೂತ್ರ ವಿಸರ್ಜಿಸುವ ಜಾಗಕ್ಕೂ ಬರುತ್ತೀಯಲ್ಲ, ನಿನಗೇನು ಹೇಸಿಕೆ ಅನ್ನುವುದೇ ಇಲ್ಲವೆ" ಎಂದು ಎರಡು ಬಿಟ್ಟಾಗ, ಮಾಧ್ಯಮದವನು ಕಾಗೆಯಂತೆ ಕೂಗಿ ತನ್ನ ಬಳಗವನ್ನೆಲ್ಲಾ ಸೇರಿಸಿಬಿಟ್ಟನಂತಲ್ಲಾ. ಕೂಡಲೇ ಕ್ಷಣಾರ್ಧದಲ್ಲಿ ಬಂದ ಬಳಗ ವಿಜಯ್‌ನನ್ನು ಹಿಡಿದು ಠಾಣೆಗೆ ಎಳೆದೊಯ್ದದ್ದೂ ಅಲ್ಲದೆ, ಕನ್ನಡ ಸಂಘಟನೆಯನ್ನೆಲ್ಲಾ ಕರೆಸಿ ಕೂಗಿಸಿ ಕಡೆಗೆ ಅಪಾಲಜಿಯನ್ನು ಕೇಳಿಸಿ ಓಡಿಸಿದರಂತಲ್ಲಾ, ಥೂತ್ತೇರಿ!

* * * *

ಥೂತ್ತೇರಿ

▸ ಯಾಹೂ

ವಿಜಯ್ ಪೊಲೀಸ್ ಠಾಣೆಯಲ್ಲಿ ಹ್ಯಾಪುಮೋರೆಯೊಂದಿಗೆ ಕುಳಿತಿದ್ದಾಗ, ಪೊಲೀಸ್ ಪೇದೆಯೊಂದು ಹತ್ತಿರ ಬಂದು "ನೋಡಯ್ಯ, ಶಿವಮೊಗ್ಗದ ಮಾಧ್ಯಮದವರು ತುಂಬ ಸೂಕ್ಷ್ಮವಾಗಿದ್ದಾರೆ. ಮೊನ್ನೆ ಮೊನ್ನೆ ಪೊಲೀಸ್ ಪೇದೆಯಿಂದ ಕರ್ತವ್ಯಕ್ಕೆ ಚ್ಯುತಿಯಾಗಿದೆ ಅಂತ ರಸ್ತೆಯಲ್ಲೇ ಧರಣಿ ಕುಳಿತು ಕೂಡಲೇ ಸಸ್ಪೆಂಡ್ ಮಾಡಿಸಿದ್ದಾರೆ. ಪೊಲೀಸರನ್ನೆ ಸಸ್ಪೆಂಡ್ ಮಾಡಿಸುವ ಜನ ನಿನ್ನನ್ನೂ ಸಸ್ಪೆಂಡ್ ಮಾಡಿಸಿಬಿಡುತ್ತಾರೆ. ಆದ್ದರಿಂದ ಬೇಗ ಜಾಗ ಖಾಲಿ ಮಾಡು. ಅಲ್ಲದೆ ನಿಮ್ಮವರಿಗೆಲ್ಲಾ ಹೇಳು, ಶಿವಮೊಗ್ಗ ಮೊದಲಿನಂತೆ ಸಾಂಸ್ಕೃತಿಕ ನಗರವಲ್ಲಾ, ಮಾಧ್ಯಮದವರ ಕೇರಿ ಅಂತ" ಎಂದು ಬುದ್ಧಿ ಮಾತು ಹೇಳಿದನಂತಲ್ಲಾ. ಇಂತಹ ಯಾವ ಬುದ್ಧಿ ಮಾತನ್ನು ತಲೆಗೆ ಹಾಕಿಕೊಳ್ಳದ ವಿಜಯ್, ಕಾರಿಗೆ ಹತ್ತಿದ ಕೂಡಲೇ ತನ್ನ ದಪ್ಪ ತುಟಿಗಳಲ್ಲಿ ಪೂಂಜಾಳಿಗೆ ರಪರಪನೆ ಮುತ್ತಿಕ್ಕಿದನಂತಲ್ಲಾ, ಥೂತ್ತೇರಿ!!

* * * *


ಈ ಮಂಡ್ಯದ ಹೈದರು ಏನು ಮಾಡಿದರೂ ಅದರಲ್ಲೊಂದು ವಿಶೇಷ ಇದ್ದೇ ಇರುತ್ತದಂತಲ್ಲಾ. ಹಿಂದೊಮ್ಮೆ ಬಿನ್ ಲಾಡನ್ ತಿಥಿ ಮಾಡಿಕೊಂಡು ಗಡದ್ದಾಗಿ ಉಂಡು ಗಾಂಧಿ ಪಾರ್ಕಿನಲ್ಲಿ ಸುಖವಾಗಿ ನಿದ್ದೆ ಮಾಡಿದ್ದರು. ಈಗ ನೋಡಿದರೆ ನಾರಾಯಣಗೌಡನ ಹುಟ್ಟು ಹಬ್ಬ ಮಾಡಿ, ಓದು ಬಾರದವರಿಗೆಲ್ಲಾ ಪುಸ್ತಕ ಹಂಚಿ ದಾಖಲೆಯನ್ನೆ ನಿರ್ಮಿಸಿದ್ದಾರಲ್ಲಾ. "ಇಷ್ಟೊಂದು ಉತ್ಸಾಹದಲ್ಲಿ ಹುಟ್ಟುಹಬ್ಬ ಆಚರಿಸುತ್ತಿದ್ದೀರಲ್ಲಾ, ಆ ನಾರಾಯಣಗೌಡ ಯಾರು? ಯಾವ ಪುಸ್ತಕ ಬರೆದಿದ್ದಾನೆ? ಯಾವ ಸಾಧನೆ ಮಾಡಿದ್ದಾನೆ? ಯಾವ ಹೋರಾಟ ಮಾಡಿದ್ದಾನೆ?" ಎಂದು ಹುಟ್ಟು ಹಬ್ಬಗಳ ಕಾರ್ಯಕರ್ತರನ್ನ ಕೇಳಿದರೆ, "ಮೊದಲು ಈ ಪುಸ್ತಕ ತಗೊಂಡೊದ್ರಿ" ಎಂದು ಗದರಿದವಂತಲ್ಲಾ. ಕರ್ನಾಟಕದಾದ್ಯಂತ ತನ್ನ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಅಭಿಮಾನಿಗಳಿಂದ ಆಚರಿಸಿಕೊಳ್ಳುತ್ತಿರುವ ನಾರಾಯಣ ಗೌಡ "ನಾವು ಎಂದೂ ಅಧಿಕಾರಕ್ಕಾಗಿ ಆಸೆ ಪಟ್ಟವರಲ್ಲ, ನಮ್ಮ ಪರವಾಗಿ ಬೇರೆಯವರೇ ಅಧಿಕಾರ ನಡೆಸುತ್ತಾರೆ. ನಮ್ಮದೇನಿದ್ದರೂ ವಸೂಲಾತಿ ಮತ್ತು ಹುಟ್ಟುಹಬ್ಬ, ಬಿಡುವು ಸಿಕ್ಕರೆ ಒಂದಿಷ್ಟು ಕನ್ನಡದ ಕೆಲಸ. ಮತ್ತು ನಮ್ಮವೇ ಭಾವಚಿತ್ರಗಳ ಫ್ಲೆಕ್ಸ್ ಕಟ್ಟುವುದು" ಎಂದನಂತಲ್ಲಾ, ಥೂತ್ತೇರಿ!!!

* * * *

ಕರ್ನಾಟಕ ಈವರೆಗೆ ಕಂಡರಿಯದಂತಹ ಮಂತ್ರಿಯೊಬ್ಬನ ಬಲವಂತದ ರಾಜೀನಾಮೆಯಿಂದ ಇಡೀ ಕರ್ನಾಟಕದ ಮುಜರಾಯಿ ಜನ ಶೋಕಸಾಗರದಲ್ಲಿ ಮುಳುಗಿದ್ದಾರಂತಲ್ಲಾ. ಕೃಷ್ಣಯ್ಯ ಶೆಟ್ಟಿ ಎಂಬ ಮಂತ್ರಿ ಖಾತೆಯನ್ನು ವಹಿಸಿಕೊಂಡ ಕೂಡಲೇ ಎಡ್ಡೂರಪ್ಪನ ಹೆಸರಲ್ಲಿ ಪೂಜೆ ಸಲ್ಲಿಸಲು ಪೂಜಾರಿಗಳಿಗೆ ಆಜ್ಞೆ ಹೊರಡಿಸಿದ ಕ್ರಾಂತಿಕಾರಿ ಕೆಲಸದ ನಂತರ, ದೇವಸ್ಥಾನದಲ್ಲಿ ಸಿಗುವ ಪ್ರಸಾದ ಕೈಂಕರ್ಯ ಇತ್ಯಾದಿ ಧಾರ್ಮಿಕ ಕ್ರಿಯೆಗಳಿಗೆ ಸಬ್ಸಿಡಿ ಹೇಗೆ ಕೊಡುವುದೆಂದು ಚಿಂತಿಸುತ್ತಿದ್ದರಂತಲ್ಲಾ. ಇದರ ಜೊತೆಗೆ ತೀರ್ಥಯಾತ್ರಿಗಳಿಗೆ ಬಸ್ಸು ರೈಲಿನಲ್ಲಿ ರಿಯಾಯಿತಿ, ರಿಕ್ಷಾಗಳಲ್ಲಿ ವಿನಾಯಿತಿ ಮತ್ತು ವಸತಿಗೃಹಗಳಲ್ಲಿ ತೆರಿಗೆ ವಿನಾಯಿತಿ ಇತ್ಯಾದಿ ಯಾತ್ರಾರ್ಥಿಗಳಿಗೆ ಅನುಕೂಲವಾಗುವ ಕ್ರಾಂತಿಯನ್ನೆ ಮಾಡಲು ಹೊರಟಿರುವಾಗಲೇ ಆತನಿಂದ ರಾಜೀನಾಮೆ ಪಡೆದುಬಿಡುವುದೆ. ಪ್ರಚಂಡ ದೈವ ಭಕ್ತನಾದ ಶೆಟ್ಟಿ ರಾಜೀನಾಮೆ ಕೊಡುವ ಮುನ್ನ ತಿರುಪತಿ ತಿಮ್ಮಪ್ಪನನ್ನು ಭೇಟಿಯಾಗಿ "ಏಳು ಕೊಂಡಲವಾಡ ನನಗಿನ್ನಾವುದಾದರೊಂದು ಕುರ್ಚಿಯನ್ನು ಕರುಣಿಸು.



ಯಾವುದೂ ಇಲ್ಲದಿದ್ದರೆ ಈಗ ದಿಢೀರೆಂದು ಖಾಲಿಯಾದ ಒಳಚರಂಡಿ ಕುರ್ಚಿಯನ್ನಾದರೂ ಕರುಣಿಸು" ಎಂಬ ಬೇಡಿಕೆ ಇಟ್ಟು ಬಂದನಂತಲ್ಲಾ. ಇತ್ತ ಇಂತಹ ಅಮಾಯಕ ಮತ್ತು ಮೂರ್ಖನನ್ನು ಮನೆಗೆ ಕಳುಹಿಸಿ ತಾವು ಮಂತ್ರಿಯಾಗುವ ಅಗತ್ಯವಿತ್ತೆ ಸೋಮಣ್ಣ ಎಂದು ಕೇಳಿದರೆ "ಈ [illegible] ಇಷ್ಟು ನನ್ನ ಜೀವನದಲ್ಲಿ, ಮಂತ್ರಿಯಾಗಲಾರೆ" ಎಂದು ಸೋಮಣ್ಣ ಖಡಾಖಂಡಿತವಾಗಿ ಹೇಳಿದರಂತಲ್ಲಾ. -ಥೂತ್ತೇರಿ!! ■



ಚೆಡ್ಡಿಗಳ ರಂಪಾಟ

ಇಲ್ಲಿ ತೇಪೆ ಅಲ್ಲಿ ತೋಪು!

ಬಿಜೆಪಿ ಈಗ ಒಡೆದ ಮನೆ.

ಇದೀಗ ತಾನೆ ಕರ್ನಾಟಕದ ಚೆಡ್ಡಿಗಳ ಒಳಜಗಳಕ್ಕೆ ತೇಪೆ ಹಾಕಿ ಸುಧಾರಿಸಿಕೊಳ್ಳುತ್ತಿರುವಾಗಲೇ ಅತ್ತ ದೆಹಲಿಯ ಕೇಂದ್ರ ಬಜೆಪಿಯೊಳಗೆ ಹಾದ್ಹಿರಂಪ ಬೀದಿರಂಪ ಶುರುವಾಗಿದೆ.

ಈ ಜಗಳ ಬಜೆಪಿಯ ಸಮಾಧಿ ಸಿದ್ಧಮಾಡುತ್ತಿರುವಂತಿದೆ.

ಭಾರತವನ್ನು ಆಳಲು ತನಗೆ ದೈವಾಜ್ಞೆ ದೊರಕಿದೆ ಎಂದು 2004 ರ ಚುನಾವಣೆಯ ಮುನ್ನ ಹೇಳಿದ್ದ ಭಾರತೀಯ ಜನತಾ ಪಕ್ಷಕ್ಕೆ ಪಾಪ ಎರಡನೆ ಬಾರಿಯೂ ಜನಾಜ್ಞೆಯಂತೂ ಸಿಗಲಿಲ್ಲ. ಈ ಮುಖಭಂಗ ಸಂಭವಿಸಿ ಒಂದು ತಿಂಗಳಾಗಿದ್ದರೂ ಅದರಿಂದ ಚೇತರಿಸಿಕೊಳ್ಳಲಾಗದೆ ಕೈಕೈ ಹೊಸೆಯುತ್ತಿರುವ ಬಜೆಪಿಗೆ ಈಗ ದೈವಾಜ್ಞೆಯ ಮಾತು ಪಕ್ಕಕ್ಕಿರಲಿ, ಭೂತ ಕಾಟವಂತೂ ಪ್ರಾರಂಭವಾಗಿದೆ.

ಎಲ್.ಕೆ. ಅಧ್ವಾನಿ ಎಂಬ ಕುದುರೆಯನ್ನು ಮುಂದಿಟ್ಟುಕೊಂಡು 'ಸಮರ್ಥ ನಾಯಕ, ನಿರ್ಣಾಯಕ ಸರ್ಕಾರ' ಎಂಬ ಘೋಷಣೆಯೊಂದಿಗೆ ಚುನಾವಣೆಗಳಿಗೆ ಧುಮುಕಿದ್ದ ಬಜೆಪಿ ಮಣ್ಣುಮುಕ್ಕಿತ್ತು. ಈಗ ಸೋಲಿಗೆ ಯಾರು ಕಾರಣ, ಏನು ಕಾರಣ ಎಂದು ಆತ್ಮಾವಲೋಕನ ಮಾಡಿಕೊಳ್ಳುವ ಬದಲು ಆ ಪಕ್ಷದ ಹಿರಿಯ ನಾಯಕರ ನಡುವೆಯೇ ದೋಷಾರೋಪಗಳು ಪ್ರಾರಂಭವಾಗಿವೆ. ವಿಚಿತ್ರವೆಂದರೆ ತಮ್ಮದು ವಿಭಿನ್ನ ಪಕ್ಷ, ಅಧಿಕಾರಕ್ಕಿಂತ ಸಿದ್ಧಾಂತವೇ ತಮಗೆ ಮುಖ್ಯ, ಶಿಸ್ತು ಎಲ್ಲಕ್ಕಿಂತ ಪವಿತ್ರ ಎಂದೇ ಬೀಗುತ್ತಿದ್ದ ಬಜೆಪಿಯಲ್ಲಿ ಈ ನಾಯಕತ್ವಕ್ಕಾಗಿ, ಗೂಟದ ಕಾರಿಗಾಗಿ ಎಂತಹ ಕೆಸರೆರಚಾಟ ನಡೆಯುತ್ತಿದೆ ಎಂದರೆ ಶಿಸ್ತು ಎಂಬುದನ್ನು ಇಡೀ ಪಕ್ಷವೇ ಮರೆತಿರುವಂತಿದೆ.




ಇದೆಲ್ಲ ಪ್ರಾರಂಭವಾಗಿದ್ದು ಚುನಾವಣೆಯಲ್ಲಿನ ಸೋಲಿಗೆ ಹೊಣೆ ಹೊತ್ತು ಅಧ್ವಾನಿ ಸಂಸತ್ತಿನಲ್ಲಿ ವಿರೋಧ ಪಕ್ಷದ ಸ್ಥಾನವನ್ನು ತ್ಯಜಿಸದೇ ಮುಂದುವರೆಸಿದ್ದರಿಂದ. ಸಚಿವಗಿರಿಗೆ ಸಮಾನವಾಗಿರುವ, ಗೂಟದ ಕಾರು, ವಸತಿ ಇತ್ಯಾದಿಗಳನ್ನು ತರುವ ಆ ಸ್ಥಾನದ ಮೇಲೆ ಕೆಲ ಹಿರಿಯ ಚೆಡ್ಡಿಗಳ ಕಣ್ಣಿತ್ತು, ಅಧ್ವಾನಿ ಅವರೆಲ್ಲರಿಗಿಂತ ಹಿರಿಯರಾಗಿದ್ದರಿಂದ ವಿಧಿಇಲ್ಲದೆ ಸುಮ್ಮನಿದ್ದರು. ಆದರೆ ಯಾವಾಗ ಲೋಕಸಭೆಯ ವಿರೋಧ ಪಕ್ಷದ ಉಪನಾಯಕಿಯಾಗಿ ಸುಷ್ಮ ಸ್ವರಾಜ್‌ಳನ್ನೂ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕನಾಗಿ ಅರುಣ್ ಜೈಟ್ಲಿಯನ್ನು ಅಧ್ವಾನಿ ನೇಮಿಸಿದರೋ ಆಗ ಭಿನ್ನಮತದ ಕಿಡಿ ಕಾಡ್ಗಿಚ್ಚಿನಂತೆ ಹರಡಲಾರಂಭಿಸಿತು.

80 ಪ್ಲಸ್ ಹರೆಯದ ಅಧ್ವಾನಿಯ ನಂತರ ಬಜೆಪಿಯಲ್ಲಿ 70 ಪ್ಲಸ್ ಹರೆಯದ ಹಲವು ನಾಯಕರಿದ್ದಾರೆ. ಅವರೆಲ್ಲ ಮುಂದಿನ ಸರದಿ ತಮ್ಮದು ಎಂಬ ಆಶಾಭಾವನೆಯಲ್ಲಿ ಇದ್ದರು. ಆದರೆ ಯಾವಾಗ ಇವರೆಲ್ಲರನ್ನು ನಿರ್ಲಕ್ಷಿಸಿ 50 ಪ್ಲಸ್ ಹರೆಯದ ಸುಷ್ಮ ಮತ್ತು ಜೈಟ್ಲಿಯನ್ನು ಅಧ್ವಾನಿ ನೇಮಿಸಿದರೋ ಆಗ ಮುದಿ ಚೆಡ್ಡಿಗಳ ಅಧಿಕಾರದ ದಾಹದ ಪಿತ್ತ ನೆತ್ತಿಗೇರಿತು. ಈಗ ತಾವು ಸುಮ್ಮನಿದ್ದರೆ ತಮಗೆ ಎಂದೂ ಸಣ್ಣಪುಟ್ಟ ಅಧಿಕಾರವೂ ಸಿಗುವುದಿಲ್ಲ ಎಂದು ಗೊತ್ತಾಗಿದ್ದೇ ತಡ ಅವರು ಸ್ಫೋಟಗೊಂಡರು.




ಅದರಲ್ಲೂ 71 ವರ್ಷ ವಯಸ್ಸಿನ ಜಸವಂತ್ ಸಿಂಗ್ ಮೊದಲ ಬಾಣ ಬಿಟ್ಟರು. ಅದರ ಹಿಂದೆ ಆತನ ಸ್ವಾರ್ಥವೂ ಇತ್ತು. ಈ ಹಿಂದೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದು ಈ ಬಾರಿ ಲೋಕಸಭೆಗೆ ಆಯ್ಕೆಯಾಗಿರುವ ತನಗೆ ಉಪನಾಯಕನ ಸ್ಥಾನ ಸಿಗದಿದ್ದರೆ ತನಗೆ ಈಗ ಸರ್ಕಾರ ನೀಡಿರುವ ಆಫೀಸು, ಸಿಬ್ಬಂದಿ, ಗೂಟದ ಕಾರು, ದೆಹಲಿಯಲ್ಲಿನ ಬಂಗಲೆ, ಇತ್ಯಾದಿ ಸವಲತ್ತುಗಳೆಲ್ಲ ಕೈಬಿಟ್ಟು ಹೋಗುತ್ತವೆ ಎಂದು ಹೆದರಿದ ಜಸವಂತ್ ಸಿಂಗ್ ಅಧ್ವಾನಿ ವಿರುದ್ಧ ಕೆಂಡಕಾರಿದ. "ಪಕ್ಷದ ಸೋಲಿನ ರೂವಾರಿಯಾದ ಅರುಣ್ ಜೈಟ್ಲಿಯನ್ನು ರಾಜ್ಯಸಭೆಯಲ್ಲಿ ಪಕ್ಷದ ನಾಯಕನಾಗಿ ನೇಮಿಸಿದ್ದೀರಲ್ಲ, ಈ ಪಕ್ಷದಲ್ಲಿ 'ಪರಿಣಾಮ' ಮತ್ತು 'ಪುರಸ್ಕಾರ'ಗಳಿಗೆ ಸಂಬಂಧವೇ ಇಲ್ಲವೇ?" ಎಂದು ಹೇಳುವ ಮೂಲಕ ಸಾರ್ವಜನಿಕವಾಗಿ ಚೆಡ್ಡಿಯನ್ನು ಒಗೆಯಲಾರಂಭಿಸಿದ. ಆತನೊಂದಿಗೆ 65 ರ ಹರೆಯದ ಅರುಣ್ ಶೌರಿ ಎಂಬ ಇನ್ನೊಬ್ಬ ನಾಯಕನೂ ದನಿಗೂಡಿಸಿದ.



ವಾಜಪೇಯಿ ಸರ್ಕಾರದಲ್ಲಿ ಸಚಿವನಾಗಿದ್ದ, ಮೊನ್ನಿನ ಚುನಾವಣೆಯಲ್ಲಿ ಸ್ವಿಸ್ ಬ್ಯಾಂಕುಗಳಲ್ಲಿ ಕಾಂಗ್ರೆಸ್ ನಾಯಕರು ಬಚ್ಚಿಟ್ಟಿರುವ ಹಣವನ್ನು ವಾಪಸ್ಸು ತರುತ್ತೇವೆಂದು ಹೇಳುವ ಮೂಲಕ ಬಜೆಪಿ ಅಧಿಕಾರಕ್ಕೆ ಬರುತ್ತದೆ ಎಂದು ಭಾವಿಸಿದ್ದ ಶೌರಿಗೂ ಈಗ ನಾಯಕತ್ವದ ಬಯಕೆ. ಆದರೆ ಈತನಿಗೆ RSS ಬೆಂಬಲವಾಗಲಿ, ಒಂದು ಕ್ಷೇತ್ರದ ನೆರವಾಗಲಿ ಇಲ್ಲದಿರುವುದರಿಂದ ಈತನ ಕೊರಗು ಒಂದು ರೀತಿಯಲ್ಲಿ ಅರಣ್ಯರೋದನ.

ಆದರೆ ಇವರಿಬ್ಬರಿಗಿಂತಲೂ ದೊಡ್ಡ ಅರ್ಭಟ ಮಾಡಿದ್ದು ಯಶವಂತ ಸಿನ್ಹ ಎಂಬ 72 ಹರೆಯದ ಮತ್ತೊಂದು ಹಳೆ ಹುಲಿ. ತನ್ನನ್ನು ನಿರ್ಲಕ್ಷಿಸಿ ಜೈಟ್ಲಿಗೆ ಅಧಿಕಾರದ ಚುಕ್ಕಾಣಿ ನೀಡಿದ್ದರಿಂದ ಈ ಸಿನ್ಹ ಪಕ್ಷದಲ್ಲಿನ ತನ್ನ ಎಲ್ಲಾ ಹುದ್ದೆಗಳಿಗೆ ರಾಜೀನಾಮೆ ಬಿಸಾಡಿದ. ಆದರೆ ಬಜೆಪಿಯನ್ನು 1992 ರಲ್ಲಿ ಸೇರಿದ ಈ ಮಾಜಿ ಸಮಾಜವಾದಿಯನ್ನು ಕಂಡರೆ ಅಸಲಿ ಚೆಡ್ಡಿಗಳಿಗೆ ಅಷ್ಟಕ್ಕಷ್ಟೆ. ಆದ್ದರಿಂದ ಆತನ ಬಂಡಾಯವೂ ಬರೀ ಖಾಲಿ ಡಬ್ಬದಲ್ಲಿನ ಬಡಬಡ ಸದ್ದಾಗಿದೆ.

ಈ ಮುದಿ ತ್ರಿಮೂರ್ತಿಗಳ ಬಂಡಾಯ ಬಜೆಪಿಯನ್ನು ಸುಧಾರಿಸುವ, ಹಿಂದೂತ್ವವಾದವನ್ನು ಕೈಬಿಡುವ, ಜನಪರ ರಾಜಕೀಯವನ್ನು ಕುರಿತದ್ದಾಗಿಲ್ಲ. ಬದಲಾಗಿ ಸುಷ್ಮ ಮತ್ತು ಜೈಟ್ಲಿಗೆ ಬಡ್ತಿ ನೀಡಿದ್ದರಿಂದ ಪಕ್ಷದಲ್ಲಿ ಒಂದು ತಲೆಮಾರನ್ನು ಪ್ರತಿನಿಧಿಸುವ ತಾವು ಸಂಪೂರ್ಣವಾಗಿ ಸೈಡ್‌ಲೈನ್ ಆಗುತ್ತೇವೆ ಎಂಬ ಸ್ವಹಿತಾಸಕ್ತಿಯ ಬಂಡಾಯ ಮಾತ್ರ ಆಗಿದೆ.



ಇವರೆಲ್ಲರ ಮಧ್ಯೆ ಬಜೆಪಿಯ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ ಕೂಡ ತನ್ನದೇ ಕಿತಾಪತಿಗಳನ್ನು ತೆರೆಮರೆಯಲ್ಲಿ ಮುಂದುವರೆಸಿದ್ದಾನೆ. 58 ವರ್ಷದ ಈ ಮಾಜಿ ಕುಸ್ತಿಪಟುಗೆ ಬಜೆಪಿಯಲ್ಲೇ ಬೆಂಬಲವಿಲ್ಲ. ಪಾಕಿಸ್ತಾನದ ನಾಯಕ ಜಿನ್ನಾನನ್ನು ಅಧ್ವಾನಿ ಹಾಡಿಹೊಗಳಿದಾಗ ಆತನನ್ನು ಬಜೆಪಿ ಅಧ್ಯಕ್ಷ ಸ್ಥಾನದಿಂದ ಕಿತ್ತೊಗೆದ RSS ನಾಯಕರು ಆ ಸ್ಥಾನಕ್ಕೆ ಈ ಲಾರಿ ನಾಯಕನನ್ನು ತಂದು ಕೂರಿಸಿದ್ದರು.

ಈತ ರಾಷ್ಟ್ರಾಧ್ಯಕ್ಷ ಆಗಿರುವಾಗಲೇ ಬಜೆಪಿ ಚುನಾವಣೆಯಲ್ಲಿ ಸೋತಿದೆಯಲ್ಲದೆ, 2004 ರಲ್ಲಿ ಪಡೆದದ್ದಕ್ಕಿಂತ 22 ಕಡಿಮೆ ಸೀಟುಗಳನ್ನು ಗೆದ್ದಿದೆ. ಆದರೂ ಈತನಿಗೆ ಇನ್ನೂ ಅಧ್ಯಕ್ಷನಾಗಿ ಮುಂದುವರೆಯುವ ಆಸೆ. ಹೇಗಿದ್ದರೂ ತಾನು ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕನಾಗುವುದಿಲ್ಲ ಎಂದು ಗೊತ್ತಿರುವ ರಾಜನಾಥ್ ಸಿಂಗ್ ಈಗ ತಾನು ಅಧ್ವಾನಿಯವರನ್ನು ಬೆಂಬಲಿಸಿದರೆ, ಇನ್ನು ಕೆಲವೇ ತಿಂಗಳಲ್ಲಿ ತಾನು ಮತ್ತೆ ಅಧ್ಯಕ್ಷನಾಗಲು ಅಧ್ವಾನಿ ನೆರವು ನೀಡುತ್ತಾರೆ ಎಂಬ ಲೆಕ್ಕಾಚಾರ ಈ ನಸುಗುನ್ನಿಯದ್ದು. ಆದರೆ ಬಜೆಪಿಯ ಸಂವಿಧಾನದ ಪ್ರಕಾರ ಒಮ್ಮೆ ಅಧ್ಯಕ್ಷರಾದವರು ಕೂಡಲೇ ಮತ್ತೆ ಆ ಹುದ್ದೆಯನ್ನು ಅಲಂಕರಿಸಲಾಗುವುದಿಲ್ಲ. ಹಾಗಾಗಿ ಬಜೆಪಿಯ ಸಂವಿಧಾನವನ್ನೇ ಬದಲಾಯಿಸಿ ಮತ್ತೆ ಅಧ್ಯಕ್ಷನಾಗುವ ಹಂಬಲದಲ್ಲಿದ್ದಾನೆ ಸಿಂಗ್.

ಇದೆಲ್ಲದರ ಮಧ್ಯೆ ಅರುಣ್ ಜೈಟ್ಲಿ ಕೂಡ ಸುಮ್ಮನೆ ಕೂತಿಲ್ಲ. ಮೊನ್ನಿನ ಚುನಾವಣೆಯ ರಣತಂತ್ರವನ್ನು ರೂಪಿಸುವಲ್ಲಿ ಜೈಟ್ಲಿಯದ್ದೂ ಪ್ರಮುಖ ಪಾತ್ರವಿತ್ತು. ಆದರೂ ಪಕ್ಷದ ಸೋಲಿನ ಜವಾಬ್ದಾರಿಯನ್ನು ಈತ ಹೊರಲು ಸಿದ್ಧನಿಲ್ಲ. ಆತ ಸಿದ್ಧನಿದ್ದಿದ್ದರೆ ಪಕ್ಷದ ಸ್ಥಾನಕ್ಕೆ ರಾಜೀನಾಮೆ ನೀಡುವ ಬದಲಾಗಿ ರಾಜ್ಯಸಭಾದ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದ.

ಹಾಗೆಯೇ ಸುಷ್ಮ ಸ್ವರಾಜ್ ಕೂಡ. ಬಳ್ಳಾರಿಯ ಈ ನಕಲಿ ಮಗಳು ಬಜೆಪಿಯಲ್ಲಿ ತನ್ನ ವಿರುದನಿ ಮತ್ತು ಬಜಾರಿತನದಿಂದಲೇ ಪ್ರಾಮುಖ್ಯತೆ ಪಡೆದಿರುವವಳು. ತನ್ನ ನೇಮಕಾತಿಯಿಂದಲೇ ಪಕ್ಷದಲ್ಲಿ ಇಷ್ಟೆಲ್ಲಾ ಗದ್ದಲವಾಗುತ್ತಿದ್ದರೂ ಈಕೆ ಮಳ್ಳಿಯಂತೆ ಸುಮ್ಮನೆ ಕೂತಿದ್ದಾಳೆ.

ಬಜೆಪಿಯಲ್ಲಿ ಇಂತಹ ಕಿತ್ತಾಟ ಕಂಡು RSS ದಂಗಾಗಿದೆ. ಅಧ್ವಾನಿಯ ನೇಮಕ ಮಾತ್ರವಲ್ಲ ಜೈಟ್ಲಿ ಮತ್ತು ಸುಷ್ಮಾಳ ನೇಮಕಾತಿಗಳನ್ನು ತನ್ನ ಅನುಮತಿ ಪಡೆದೇ ಮಾಡಲಾಗುತ್ತದೆ ಎಂದೇ RSS ನಂಬಿತ್ತು. ಆದರೆ ಚೆಡ್ಡಿ ನಾಯಕರಿಗೆ ಒಂದು ಮಾತೂ ತಿಳಿಸದ ಬಿಜೆಪಿ ನೇಮಕಾತಿಗಳನ್ನು ಘೋಷಿಸಿ ಎಡವಟ್ಟು ಮಾಡಿಕೊಂಡಿತ್ತಲ್ಲದೆ, ಅದರ ಬೆನ್ನಿಗೇ ಬಂಡಾಯವನ್ನು ಎದುರಿಸುವಂತಾಯಿತು. ಈ ಜಗಳದಲ್ಲಿ ಕೆಲವರು RSSನ ಕಟ್ಟರ್ ಹಿಂದೂತ್ವ ವಾದದಿಂದಾಗಿಯೇ ಬಜೆಪಿ ಸೋತಿತು ಎಂದು ಹೇಳಿದ್ದು ಚೆಡ್ಡಿಗಳಲ್ಲಿ ತುಣಚಿ ಹೊಕ್ಕಂತಾಯಿತು.

ಕೂಡಲೇ RSS ನಾಯಕ ಮೋಹನ್ ಭಾಗವತ್ ಬಜೆಪಿ ನಾಯಕರನ್ನು ಕರೆಸಿದ. RSS ಸಂಗ ಬೇಡವೆಂದರೆ ಅದನ್ನು ಸಾರ್ವಜನಿಕವಾಗಿ ಘೋಷಿಸುವ ತಾಕತ್ತನ್ನಾದರೂ ತೋರಿಸಿ. ನೀವು RSS ಅನ್ನು ತೊರೆದರೆ ನಮಗೇನು ಸಮಸ್ಯೆಯಿಲ್ಲ. ಇಪ್ಪತ್ನಾಲ್ಕು ಗಂಟೆಗಳಲ್ಲಿ ನಾವು ಹೊಸ ಪಕ್ಷವನ್ನೇ ಹುಟ್ಟುಹಾಕುತ್ತೇವೆ" ಎಂದು ಅಧ್ವಾನಿ ಮತ್ತು ಗ್ಯಾಂಗ್ ಮುಖಕ್ಕೆ ಭಾಗವತ್ ಉಗಿದರಂತೆ. RSS ಮತ್ತದರ ಸಂಘ ಪರಿವಾರ ಇಲ್ಲದಿದ್ದರೆ ಬಜೆಪಿಯ ಶಕ್ತಿ ಉಡುಗಿದಂತೆಯೇ ಎಂದು ಅರಿತಿರುವ ರಾಜಕಾರಣಿಗಳು ತೌಬ ತೌಬ ಎಂದು ಕ್ಷಮೆ ಯಾಚಿಸಿದರಂತೆ.

ಸರ್ಕಾರವನ್ನು ನಡೆಸುವ ಅಧಿಕಾರವನ್ನು ಬಜೆಪಿಗಳಿಗೆ ಜನ ನೀಡಿಲ್ಲ. ಆದರೂ ವಿರೋಧ ಪಕ್ಷದ ನಾಯಕನಂತಹ ಸ್ಥಾನಮಾನಕ್ಕೆ ಈ ಚೆಡ್ಡಿಗಳು ಇಂತಹ ರಂಪಾಟ ಮಾಡಿಕೊಳ್ಳುತ್ತಿದ್ದಾರೆ.

ಅದಕ್ಕಿಂತಲೂ ಮುಖ್ಯವಾಗಿ 2009 ರ ಚುನಾವಣೆ ಮತ್ತು 15 ನೇ ಲೋಕಸಭೆ ಬಜೆಪಿಗಳಿಗೆ ಈಗ ಬೇಕಿಲ್ಲ. ಅವರೆಲ್ಲರ ಕಣ್ಣು ಈಗ 2012 ರ ಚುನಾವಣೆಗಳ ಮೇಲೆ. ಆಗ ಬಜೆಪಿ ಹೊಸ ಮುಖವನ್ನು ತನ್ನ ಪ್ರಧಾನಿ ಅಭ್ಯರ್ಥಿ ಎಂದು ಆಯ್ಕೆ ಮಾಡಬೇಕಿದೆ. ಅದು ತಾನೇ ಆಗಿರಬೇಕೆಂಬುದು 70 ರ ಹರೆಯದ ಸಿನ್ಹಾ, ಸಿಂಗ್ ಮತ್ತು ಶೌರಿ ಎಂಬ ಮುದಿಯರ ಹಾಗೂ 57 ರ ಹರೆಯದ ಸುಷ್ಮಾ ಮತ್ತು ಜೈಟ್ಲಿ ಎಂಬ ಅಪ್ರಬುದ್ಧರ ಹುನ್ನಾರವೇ ಈ ಕಿತ್ತಾಟಗಳಿಗೆ ಮೂಲ....

ಚುನಾವಣೆಯ ನಂತರ ಭುಗಿಲೆದ್ದಿರುವ ಬಜೆಪಿಗಳ ಈ ಒಳಜಗಳ ದೇಶಾದ್ಯಂತ ಜನರಿಗೆ ಪುಗಸಟ್ಟೆ ಮನರಂಜನೆ ಒದಗಿಸುತ್ತಿದೆ. ಮಾತಿಗೆ ಮುಂಚೆ ದೇಶಪ್ರೇಮ, ಭಾರತಾಂಬೆ, ಹಿಂದೂ ಸಂಸ್ಕೃತಿ ಎಂದು ಚೀರಿಕೊಳ್ಳುತ್ತಿದ್ದ ಈ ಪುಢಾರಿಗಳಿಗೆ ಸದ್ಯಕ್ಕಂತೂ ತಮಗೆ ಅಧಿಕಾರ ಸಿಗುವುದಿಲ್ಲ ಎಂಬುದು ಗೊತ್ತಾಗುತ್ತಿದ್ದಂತೆ. ತಮ್ಮ ತಮ್ಮಲ್ಲೇ ಜಗಳ ಮಾಡಿಕೊಳ್ಳುತ್ತಿದ್ದಾರೆ. ಈ ಜಗಳದಲ್ಲಿ ಭಾರತ ದೇಶದ, ಇಲ್ಲಿನ ಜನರ ಹಿತಾಸಕ್ತಿಯ ಒಂದಂಶವೂ ಕಾಣುತ್ತಿಲ್ಲ.

ಕರ್ನಾಟಕದ ಮಟ್ಟಿಗೆ ತೇಪೆ ಹಾಕಿದರೂ ಅಲ್ಲಿ ಬಜೆಪಿ ತೋಪಾಗುತ್ತಿರುವುದಂತೂ ಗ್ಯಾರಂಟಿ.

■ ಚಿತ್ರಾಂಗದ


ರಾಜ್ಯಗಳಲ್ಲೂ ಇದೇ ಕತೆ

ಬಿಜೆಪಿ ಪರಿಸ್ಥಿತಿ ಎಷ್ಟೊಂದು ದಾರುಣವಾಗಿದೆ ಎಂದರೆ ಕೇವಲ ರಾಷ್ಟ್ರಮಟ್ಟದ ನಾಯಕರುಗಳಲ್ಲಿ ಮಾತ್ರವಲ್ಲ, ಬಿಜೆಪಿ ತುಸು ಶಕ್ತಿ ಹೊಂದಿರುವ ಎಲ್ಲಾ ರಾಜ್ಯಗಳಲ್ಲೂ ಕಿತ್ತಾಟ, ಒಳಜಗಳ, ಬಂಡಾಯಗಳು ಭುಗಿಲೆದ್ದಿವೆ.


ಉತ್ತರಾಂಚಲ್‌ನಲ್ಲಿ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಯಾಗಿರುವ ಬಿ.ಸಿ.ಖಂಡೂರಿ ವಿರುದ್ಧ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿಯ ಹಿರಿಯ ರಾಜಕಾರಣಿ ಭಗತ್ ಸಿಂಗ್ ಕೋಶಿಯಾರಿಯವರು ಬಂಡಾಯದ ಬಾವುಟ ಹಾರಿಸಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರೂ ಕಳೆದ ಲೋಕಸಭಾ ಚುನಾವಣೆಯಲ್ಲಿ ಒಂದೇ ಒಂದು ಸೀಟು ಗಳಿಸಲು ವಿಫಲವಾಗಿದ್ದಕ್ಕೆ ಮುಖ್ಯಮಂತ್ರಿ ಖಂಡೂರಿಯೇ ನೇರ ಹೊಣೆಗಾರ ಎನ್ನುತ್ತಾ ಅವರನ್ನು ಅಧಿಕಾರದಿಂದ ಇಳಿಸುವುದಕ್ಕೆ ಗಲಾಟೆ ಎಬ್ಬಿಸಿದ್ದಾರೆ. ರಾಷ್ಟ್ರ ನಾಯಕರು ಈ ಜಗಳ ಬಿಡಿಸುವುದಕ್ಕೆ ಸಾಕಷ್ಟು ಪ್ರಯತ್ನಪಟ್ಟರಾದರೂ ಅದು ಸಫಲವಾಗಿಲ್ಲ. ಅಷ್ಟು ಹೊತ್ತಿಗೆ ರಾಷ್ಟ್ರ ನಾಯಕರಲ್ಲೇ ಕಿತ್ತಾಟ ಪ್ರಾರಂಭವಾಗುವುದರೊಂದಿಗೆ ಉತ್ತರಾಂಚಲದಲ್ಲೂ ಬಿಕ್ಕಟ್ಟು ತಾರಕಕ್ಕೇರಿದೆ. ಸದ್ಯ ಹದಿನೇಳಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ತಮ್ಮ ಬೆಂಬಲಿಗ ಎಮ್ಮೆಲ್ಲೆಗಳೊಂದಿಗೆ ನವದೆಹಲಿಯಲ್ಲಿ ಠಿಕಾಣಿ ಹೂಡಿರುವ ಕೋಶಿಯಾರಿ ಖಂಡೂರಿಯ ತಲೆದಂಡ ಬೀಳುವತನಕ ಸುಮ್ಮನಿರುವಂತೆ ಕಾಣುತ್ತಿಲ್ಲ.



ಇನ್ನು ಬಿಜೆಪಿಯ ಭದ್ರನೆಲೆಯಾಗಿರುವ ಗುಜರಾತ್‌ನಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. 2004ರ ಲೋಕಸಭಾ ಚುನಾವಣೆಯಲ್ಲಿ 21 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಈ ಬಾರಿ ಕೇವಲ 14 ಸ್ಥಾನಗಳನ್ನಷ್ಟೇ ಗೆದ್ದಿದೆ. ಅದನ್ನೇ ಮುಂದಿಟ್ಟುಕೊಂಡು ಅತ್ಯಂತ ಕಳಪೆ ಪ್ರದರ್ಶನ ತೋರಿದ ಮೋದಿಯ ವಿರುದ್ಧವೂ ಬಂಡಾಯದ ಕಹಳೆ ಮೊಳಗುತ್ತಿದೆ. ಪಕ್ಷದ ಒಟ್ಟು 127 ಎಮ್ಮೆಲ್ಲೆಗಳಲ್ಲಿ ಸುಮಾರು ಅರ್ಧದಷ್ಟು ಜನ ಎಮ್ಮೆಲ್ಲೆ ಸೋಲಂಕಿ ನೇತೃತ್ವದಲ್ಲಿ ಮೋದಿಯ ವಿರುದ್ಧ ಬಹಿರಂಗ ಸಮರಕ್ಕಿಳಿದಿದ್ದಾರೆ. ಮೋದಿಯನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವವರೆಗೂ ತಮ್ಮ ಬಂಡಾಯವನ್ನು ಮುಂದುವರೆಸುವುದಾಗಿ ಪಣತೊಟ್ಟಿದ್ದಾರೆ. ಈ ವಿಚಾರದಲ್ಲಿ ರಾಷ್ಟ್ರ ನಾಯಕತ್ವವೂ ಇಬ್ಭಾಗವಾಗಿದ್ದು ಒಂದು ಬಣ ಸೋಲಂಕಿಯ ಪರವಹಿಸಿದರೆ ಮತ್ತೊಂದು ಬಣ ಮೋದಿ ಹಿಂದೆ ನಿಂತಿದೆ. ಮೋದಿಯ ಬಾಲ ಕತ್ತರಿಸುವ ಭಾಗವಾಗಿ ಈಗಾಗಲೇ ಆತನ ಬೆಂಬಲಿಗನಾಗಿರುವ ರಾಜೇಂದ್ರ ರಾಣಾರನ್ನು ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದಿಂದ ಕಿತ್ತೆಸೆದು ಅವರ ಸ್ಥಾನದಲ್ಲಿ ಮೋದಿ ವಿರೋಧಿ ಬಣದವರೊಬ್ಬರನ್ನು ಕೂರಿಸಲು ನಿರ್ಧರಿಸಲಾಗಿದೆ. ವಾಸ್ತವದಲ್ಲಿ ಇದು 'ಬಿಜೆಪಿಯೊಳಗೆ ಮೋದಿ ಸರ್ವಾಧಿಕಾರಿಯಲ್ಲ' ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಿದೆ.


ಸುರೇಶ್

ಇನ್ನು ಒಳಜಗಳದಲ್ಲಿ ರಾಜಸ್ತಾನ್ ಬಿಜೆಪಿಯೇನೂ ಕಡಿಮೆಯಿಲ್ಲ. ಉಳಿದೆಲ್ಲ ರಾಜ್ಯಗಳಿಗಿಂತ ಮೊದಲೇ ರಾಜಸ್ತಾನ್ ಬಿಜೆಪಿಯಲ್ಲಿ ಬಂಡಾಯ ಭುಗಿಲೆದ್ದಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ವಸುಂಧರಾ ರಾಜೇ ನೇತೃತ್ವದ ರಾಜ್ಯ ಬಿಜೆಪಿ ಘಟಕ ಹೀನಾಯವಾಗಿ ಸೋಲುಣ್ಣುತ್ತಿದ್ದಂತೆಯೇ ರಾಜೇ ವಿರುದ್ಧ ಬಂಡಾಯ ಭುಗಿಲೆದ್ದಿತ್ತು. ಆಮೇಲೆ ಲೋಕಸಭಾ ಚುನಾವಣೆಯ ಸಮಯದಲ್ಲಿ ಇನ್ನೊಬ್ಬ ಹಿರಿಯ ಬಿಜೆಪಿ ನಾಯಕ ಹಾಗೂ ಮಾಜಿ ಉಪ ರಾಷ್ಟ್ರಪತಿ ಭೈರೋನ್ ಸಿಂಗ್ ಶೇಖಾವತ್ "ಬಿಜೆಪಿಯಲ್ಲಿ ನಾನೇ ಎಲ್ಲರಿಗಿಂತ ಸೀನಿಯರ್. ಬಿಜೆಪಿ ಅಧಿಕಾರಕ್ಕೆ ಬಂದರೆ ನಾನೇಕೆ ಪ್ರಧಾನಿಯಾಗಬಾರದು?" ಎಂದು ಬಹಿರಂಗವಾಗಿ ಸವಾಲು ಹಾಕುವ ಮೂಲಕ ಪ್ರಧಾನಿ ಪಟ್ಟದ ಕನಸಿನಲ್ಲಿದ್ದ ಅಡ್ವಾನಿಯ ಮರ್ಮಾಂಗಕ್ಕೆ ಗುದ್ದಿದ್ದರು. ಹೀಗೆ ರಾಜಸ್ತಾನದಲ್ಲಿ ಭುಗಿಲೆದ್ದ ಬಂಡಾಯವಿನ್ನೂ ಶಮನವಾಗಿಲ್ಲ.



ಒರಿಸ್ಸಾದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋಲುಂಡ ಕಾರಣ ಅಲ್ಲೂ ಬಂಡಾಯದ ಬಿಸಿ ಏರಿದೆ. ಒಟ್ಟು 147 ವಿಧಾನಸಭಾ ಸ್ಥಾನಗಳಲ್ಲಿ 145 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಇಳಿಸಿದ್ದು ಅವರಲ್ಲಿ ಗೆದ್ದವರು ಕೇವಲ 13 ಜನ. ಇನ್ನೂ ಅವಮಾನಕಾರಿ ಸಂಗತಿಯೆಂದರೆ 88 ಕ್ಯಾಂಡಿಡೇಟ್‌ಗಳು ಠೇವಣಿಯನ್ನೂ ಕಳೆದುಕೊಂಡರೆ ಲೋಕಸಭೆಗೆ ನಿಂತಿದ್ದ ಎಲ್ಲಾ ಕ್ಯಾಂಡಿಡೇಟ್‌ಗಳು ಹೀನಾಯ ವಾಗಿ ಸೋಲುಂಡರು. ಫಲಿತಾಂಶಗಳು ಹೊರಬೀಳುತ್ತಿದ್ದಂತೆ ರಾಷ್ಟ್ರ ನಾಯಕರು ರಾಜ್ಯ ನಾಯಕರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರೆ ರಾಜ್ಯ ನಾಯಕರು ಬಿಜೆಡಿಯೊಂದಿಗೆ ಮೈತ್ರಿ ಮುರಿದುಕೊಂಡದ್ದು, ಚುನಾವಣೆಯ ಸಿದ್ಧತೆಗೆ ಸಾಕಷ್ಟು ಸಮಯ ನೀಡದಿದ್ದುದು ರಾಷ್ಟ್ರನಾಯಕರ ತಪ್ಪು ಎಂದು ತಿರುಗೇಟು ನೀಡಿದರು. ಅಂದು ಶುರುವಾದ ರಾಜ್ಯ-ರಾಷ್ಟ್ರ ನಾಯಕರ ನಡುವಿನ ಕಿತ್ತಾಟ ಇನ್ನೂ ನಿಂತಿಲ್ಲ. ಅಷ್ಟೇ ಅಲ್ಲ ರಾಜ್ಯದೊಳಗೇ ಬಿಜೆಪಿಯ ಮಾಜಿ ಮಂತ್ರಿ ಜಯನಾರಾಯಣ್ ಮಿಶ್ರ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ಸುರೇಶ್ ಪೂಜಾರಿ ನಡುವೆಯೂ ಗುದ್ದಾಟ ಪ್ರಾರಂಭವಾಗಿದ್ದು ರಾಜ್ಯ ನಾಯಕತ್ವವನ್ನು ಬದಲಿಸಬೇಕೆಂಬ ಕೂಗು ದಟ್ಟವಾಗಿ ಕೇಳಿಬರುತ್ತಿದೆ. ಇನ್ನೊಂದೆಡೆಗೆ ಮಾಜಿ ಎಮ್ಮೆಲ್ಲೆ ಭರತ್ ಪಾಯಿಕ್ ಆದಿಯಾಗಿ ಹಲವಾರು ಬಿಜೆಪಿ ನಾಯಕರು ರಾಜ್ಯ ನಾಯಕತ್ವದ ವಿರುದ್ಧ ಬಂಡಾಯವೆದ್ದು ಬೇರೆ ಬೇರೆ ಪಕ್ಷಗಳಿಗೆ ತಂಡೋಪತಂಡವಾಗಿ ವಲಸೆ ಹೋಗಿ ಪಕ್ಷವನ್ನು ಮತ್ತಷ್ಟು ದುರ್ಬಲಗೊಳಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಕಲ್ಯಾಣ್ ಸಿಂಗ್ ಬಿಜೆಪಿಗೆ ಹಿಗ್ಗಾಮುಗ್ಗಾ ಬೈದು ಅಲ್ಲಿಂದ ಕಾಲ್ಕಿತ್ತು ಮುಲಾಯಂ ಸಿಂಗ್ ನೇತೃತ್ವದ ಸಮಾಜವಾದಿ ಪಕ್ಷವನ್ನು ಸೇರಿಕೊಂಡಿದ್ದು ಎಲ್ಲರಿಗೂ ಗೊತ್ತಿದೆ. ಇನ್ನು ಕರ್ನಾಟಕದಲ್ಲಿ ಯಡಿಯೂರಪ್ಪನ ವಿರುದ್ಧ ಒಂದು ಕಡೆಯಿಂದ ಕೆ.ಎಸ್. ಈಶ್ವರಪ್ಪ, ಮತ್ತೊಂದು ಕಡೆಯಿಂದ ರೆಡ್ಡಿ ಬ್ರದರ್ಸ್, ಮಗದೊಂದು ಕಡೆಯಿಂದ ಅನಂತಕುಮಾರ್ ಅಮರಿಕೊಂಡು ದೊಡ್ಡ ದಾಂಧಲೆಯನ್ನೇ ಎಬ್ಬಿಸಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ.

ಸಾರಾಂಶದಲ್ಲಿ ಬಿಜೆಪಿ ಮತ್ತೆ ಚೇತರಿಸಿಕೊಳ್ಳಲು ಕನಿಷ್ಠ ಒಂದು ದಶಕವಾದರೂ ಬೇಕಾಗುತ್ತದೆ ಅನ್ನಿಸುತ್ತದೆ. ■



ದಿವಾಕರ್ ಬಾಬು ಧರಣಿ ಕಾಂಗ್ರೆಸ್ ನಾಟಕ

ರೆಡ್ಡಿಗಳ ಗಡಿ ಒತ್ತುವರಿ ಬಗ್ಗೆ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಲು ಬಳ್ಳಾರಿ ಕಾಂಗ್ರೆಸ್ ನಾಯಕ ದಿವಾಕರ ಬಾಬು ಈಗ ಬೆಂಗಳೂರಿನಲ್ಲಿ, ಅದೂ ಗಾಂಧಿ ಪ್ರತಿಮೆ ಎದುರು ಧರಣಿ ಕೂತಿದ್ದಾರೆ. ಈ ಧರಣೆಗಾಗಿ ದಿವಾಕರ ಬಾಬು ಬಳ್ಳಾರಿಯಿಂದ ಮೋಟಾರ್ ಬೈಕ್ ರ್‍ಯಾಲಿ ಮಾಡಿಕೊಂಡು ಬಂದಿದ್ದಾರೆ.

ಆದರೆ ಇದರಲ್ಲೂ ಕಾಂಗ್ರೆಸ್‌ನ ನಾಟಕ ಎದ್ದು ಕಾಣುತ್ತಿದೆ. ಒಬ್ಬ ಸಿದ್ದರಾಮಯ್ಯ ಹೊರತುಪಡಿಸಿ ಉಳಿದ ಯಾವ ಕಾಂಗ್ರೆಸ್ಸಿಗನೂ ಇತ್ತ ಸುಳಿಯಲಿಲ್ಲ. ಹೆಸರಿಗೆ ವಿರೋಧ ಪಕ್ಷವಾಗಿದ್ದರೂ ರಾಜ್ಯ ಕಾಂಗ್ರೆಸ್ ಗಡಿ ಒತ್ತುವರಿ ಹಗರಣವನ್ನು ಒಂದು ರಾಜ್ಯವ್ಯಾಪಿ ಹೋರಾಟವಾಗಿ ರೂಪಿಸಬಹುದಿತ್ತಾದರೂ ಆ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ಅದು ಯಾಕೆಂದರೆ ನೆರೆಯ ಆಂಧ್ರದ ಕಾಂಗ್ರೆಸ್ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯೇ ಸ್ವತಃ ಬಳ್ಳಾರಿ ರೆಡ್ಡಿಗಳ ಬ್ಯುಸಿನೆಸ್ ಪಾರ್ಟನರ್ ಆಗಿರುವುದರಿಂದ.

ವಾಸ್ತವ ಹೀಗಿರುವಾಗ ದಿವಾಕರ ಬಾಬುನ ಧರಣಿ ಬಗ್ಗೆ ಯಾರು ಕೇರ್ ಮಾಡುತ್ತಾರೆ ಹೇಳಿ? ಅಸಲಿಗೆ ಈ ದಿವಾಕರ ಬಾಬುಗೆ ಅಷ್ಟು ನೈತಿಕತೆಯಾದರೂ ಇದೆಯಾ?


ರೆಡ್ಡಿಗೆ CBI ಗುಮ್ಮ ತೋರಿಸಿದ ಯಡ್ಡಿ



ಕೈಬಿಟ್ಟ ಕಾಂಗ್ರೆಸ್ ಗೊಂದಲದಲ್ಲಿ ರೆಡ್ಡಿ ಬ್ರದರ್ಸ್

ಮುಖ್ಯಮಂತ್ರಿ ಯಡಿಯೂರಪ್ಪನ ವಿರುದ್ಧ ಸಿಟ್ಟಿಗೆದ್ದಿದ್ದ ರೆಡ್ಡಿ ಸಹೋದರರು ತಣ್ಣಗಾಗಿದ್ದಾರೆಯೇ? ತಣ್ಣಗಾಗಿದ್ದರೆ ಕಾರಣವೇನು? ಇದೀಗ ಬಿಜೆಪಿ ವಲಯದಲ್ಲಿ ಬಿಸಿಬಿಸಿ ಚರ್ಚೆಗೆ ಕಾರಣವಾಗಿರುವ ಪ್ರಶ್ನೆಗಳಿವು.

ಬಿಜೆಪಿ ಉನ್ನತ ಮೂಲಗಳ ಪ್ರಕಾರ ರೆಡ್ಡಿ ಬ್ರದರ್ಸ್‌ಗೆ ಯಡ್ಡಿ ವಿರುದ್ಧದ ಸಿಟ್ಟೇನೂ ಕಡಿಮೆಯಾಗಿಲ್ಲ. ಆದರೆ ಕಾಂಗ್ರೆಸ್ ಕೈಕೊಡವಿದ್ದರಿಂದ ಅವರು ಗೊಂದಲದಲ್ಲಿ ಸಿಕ್ಕಿಹಾಕಿಕೊಂಡರು. ಅದಕ್ಕೂ ಮುನ್ನ ಆಂಧ್ರದ ಮುಖ್ಯಮಂತ್ರಿ ರಾಜಶೇಖರ್ ರೆಡ್ಡಿಯೊಂದಿಗೆ ತಾವು ಸಂಬಂಧ ಹೊಂದಿರುವುದರಿಂದ ಕಾಂಗ್ರೆಸ್ ತಮ್ಮ ನೆರವಿಗೆ ಬರಲಿದೆ ಎಂದು ರೆಡ್ಡಿಗಳು ಭಾವಿಸಿದ್ದರು. ಅಷ್ಟೇ ಅಲ್ಲ ತಮ್ಮ ಇಪ್ಪತ್ತು ಇಪ್ಪತ್ತೈದು ಶಾಸಕರೊಂದಿಗೆ ಬಿಜೆಪಿಯಿಂದ ಹೊರಬಂದು ಕಾಂಗ್ರೆಸ್‌ನೊಂದಿಗೆ ಸರ್ಕಾರ ರಚಿಸಬಹುದೆಂದೂ ಅವರು ಲೆಕ್ಕಹಾಕಿದ್ದರು.



ಆದರೆ ಗಣಿಧಣಿಗಳ ಮುಂದಿರುವ ಸದ್ಯದ ದೊಡ್ಡ ಸವಾಲೆಂದರೆ ಕರ್ನಾಟಕ-ಆಂಧ್ರಪ್ರದೇಶ ಅಂತರರಾಜ್ಯ ಗಣಿಯ ಜಂಟಿ ಸಮೀಕ್ಷೆ. ಈ ಸಮೀಕ್ಷೆ ನಡೆದಲ್ಲಿ ರೆಡ್ಡಿಗಳ ಅಕ್ರಮವೆಲ್ಲಾ ಬಹಿರಂಗವಾಗಿ, ಸಾವಿರಾರು ಕೋಟಿ ಆಸ್ತಿ ಕಳೆದುಕೊಳ್ಳಬೇಕಾಗುತ್ತದೆ. ಹೈಕೋರ್ಟ್ ಕೂಡ ಈ ಸಮೀಕ್ಷೆಗೆ ಆದೇಶ ನೀಡಿರುವುದರಿಂದ ಯಾವುದೇ ಸರ್ಕಾರ ಸುಲಭವಾಗಿ ಇದನ್ನು ತಪ್ಪಿಸುವಂತಿಲ್ಲ. ಇದು ಗೊತ್ತಾಗಿದ್ದೇ ತಡ ಗಣಿಧಣಿಗಳು ಕುಂಡೆಸುಟ್ಟ ಬೆಕ್ಕಿನಂತಾಗಿ ಆಂಧ್ರದ ಮುಖ್ಯ ಮಂತ್ರಿ ರಾಜಶೇಖರ ರೆಡ್ಡಿ ಮನೆಮುಂದೆ ಹೋಗಿ ನಿಂತರು.

ಹೇಗಿದ್ದರೂ ತಮ್ಮ ಮಗ ಜಗನ್ ಜೊತೆ ರೆಡ್ಡಿಗಳ ವ್ಯವಹಾರ ಇರುವುದರಿಂದ ಈ ವಿಷಯವನ್ನು ರಾಜಶೇಖರ ರೆಡ್ಡಿ ಕಾಂಗ್ರೆಸ್ ಹೈಕಮಾಂಡ್‌ವರೆಗೂ ತೆಗೆದುಕೊಂಡು ಹೋಗಿದ್ದರು. ಆದರೆ ಕರ್ನಾಟಕದಲ್ಲಿ ರೆಡ್ಡಿಗಳಾಡುತ್ತಿರುವ ರಾಜಕೀಯ ಆಟದ ಬಗ್ಗೆ ತಿಳಿದಿರುವ ಸೋನಿಯಾ ಗಾಂಧಿ ರಾಜಶೇಖರ ರೆಡ್ಡಿ ಪ್ರಸ್ತಾಪಗಳಿಗೆ 'ನೋ' ಎಂದೇ ಬಿಟ್ಟರು. ಅಲ್ಲದೆ ಬಳ್ಳಾರಿ ರೆಡ್ಡಿಗಳ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲು ಸೂಚಿಸಿದರು.

ಇದಕ್ಕಾಗಿ ಕಾಯುತ್ತಾ ಕುಳಿತಿದ್ದ ಪರಿಸರ ಸಚಿವ ಜೈರಾಮ್ ರಮೇಶ್, ಕಾನೂನು ಉಲ್ಲಂಘಿಸಿದ್ದ ಆಂಧ್ರ ಪ್ರದೇಶದಲ್ಲಿನ ಐದು ಗಣಿಗಳ ಗುತ್ತಿಗೆಯನ್ನು ರದ್ದುಪಡಿಸುವಂತೆ ಆದೇಶಿಸಿದರು. ಈ ಐದು ಗಣಿಗಳಲ್ಲಿ ಎರಡು ಗಣಿಗಳು ಬಳ್ಳಾರಿ ರೆಡ್ಡಿಗಳಿಗೆ ಸೇರಿದವುಗಳಾಗಿವೆ. ಅಲ್ಲದೆ, ಜಂಟಿ ಸಮೀಕ್ಷೆಗೆ ಕ್ರಮ ತೆಗೆದುಕೊಳ್ಳುವಂತೆ ಕೂಡ ಭಾರತೀಯ ಸರ್ವೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲಿಗೆ ಕಾಂಗ್ರೆಸ್ ಜೊತೆಗಿನ ಅವರ ಹೊಸ ಗೆಳೆತನದ ಸಾಧ್ಯತೆ ಮುರಿದು ಬಿದ್ದಂತಾಯಿತು.

ಇದರಿಂದ ಬೆಚ್ಚಿಬಿದ್ದ ರೆಡ್ಡಿಗಳು ಈಗ ತಮಗಿರುವ ಅಧಿಕಾರವನ್ನೂ ಕಳೆದುಕೊಂಡರೆ ಮುಂದೇನು ಎಂದು ಮತ್ತೆ ಯಡ್ಡಿ ಜೊತೆಗೆ ಸಂಧಾನಕ್ಕೆ ಮುಂದಾದರು. ಯಡ್ಡಿ ಸಹ ಅವರನ್ನು ಸಮಾಧಾನ ಪಡಿಸಲು ಮುಂದಾದರು. ದಾವಣಗೆರೆ ಮತ್ತು ಹುಬ್ಬಳ್ಳಿಯಲ್ಲಿ ನಡೆದ ವಿಕಾಸ ಸಂಕಲ್ಪ ಉತ್ಸವಗಳಲ್ಲಿ ಭಾಗವಹಿಸಿದ ರೆಡ್ಡಿಗಳು ಈ ಸಂದರ್ಭದಲ್ಲಿ ತಮ್ಮ ಸಿಟ್ಟಿಗೆ ಕಾರಣವಾಗಿರುವ ವಿಷಯಗಳನ್ನು ಮತ್ತೆ ಯಡ್ಡಿಗೆ ಸ್ಪಷ್ಟಪಡಿಸಿದರಾದರೂ ತಮ್ಮ ಬೇಡಿಕೆಗಳ ಈಡೇರಿಕೆಗೂ ಹಠ ಮಾಡಲಿಲ್ಲ.

ಏನೇ ಇರಲಿ, ಸದ್ಯ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾಕು ಎಂಬ ಸ್ಥಿತಿಯಲ್ಲಿರುವ ಯಡ್ಡಿ ರೆಡ್ಡಿಗಳ ಬೇಡಿಕೆಗಳ ಪೈಕಿ ಗಣಿ ವಿಚಾರದ ಕೆಲವಕ್ಕೆ ಗಮನ ನೀಡಿದ್ದಾರೆ. ಹೀಗಾಗಿಯೇ ಸಂಡೂರು ತಾಲೂಕಿನಲ್ಲಿರುವ ಎನ್ಮಾರ್ ಮೈನಿಂಗ್ ಕಂಪನಿಯ ಲೈಸನ್ಸ್ ನವೀಕರಣಕ್ಕೆ ಮುಂದಾಗಿದ್ದಾರೆ. ಈ ಮೈನಿಂಗ್ ಕಂಪನಿಯನ್ನು ರೆಡ್ಡಿ ಬ್ರದರ್ಸ್ ಉಪಗುತ್ತಿಗೆ ಪಡೆದಿದ್ದಾರೆ.

ಇದೇ ರೀತಿಯ ಒಟ್ಟು 12 ಮೈನಿಂಗ್ ಕಂಪನಿಗಳ ಲೈಸನ್ಸನ್ನು ನವೀಕರಿಸಬೇಕೆಂಬುದು ರೆಡ್ಡಿಗಳ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿತ್ತು. 'ನಮ್ಮ ಸರ್ಕಾರ ಹೊಸ ಗಣಿ ಲೂಟಿಗೆ ಅವಕಾಶ ನೀಡುವುದಿಲ್ಲ, ಹೊಸ ಗಣಿಗಳಿಗೆ ಲೈಸನ್ಸ್ ನೀಡುವುದೂ ಇಲ್ಲ, ನೀಡಿರುವ ಲೈಸನ್ಸ್ ನವೀಕರಿಸುವುದಿಲ್ಲ' ಎಂದು ಭಾಷಣ ಬಿಗಿಯುತ್ತಿದ್ದ ಯಡ್ಡಿ ಇದೀಗ, ಈ ಗಣಿಗಳ ಫೈಲ್‌ಗಳನ್ನು ಕೂಡಲೇ ಕಳುಹಿಸಿ ಎಂದು ಗಣಿ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಆಂಧ್ರದಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿಯೊಂದಿಗೆ ಸ್ನೇಹ ಇಟ್ಟುಕೊಂಡು, ಇಲ್ಲಿ ಬಿಜೆಪಿ ಸರ್ಕಾರದಲ್ಲಿ ಅಧಿಕಾರ ಅನುಭವಿಸುತ್ತಿರುವ ರೆಡ್ಡಿಗಳು ತಮ್ಮ ಬೇಳೆ ದುಡ್ಡಿದ್ದರೆ ಸಾಕು ತಮ್ಮ ಮುಂದೆ ಯಾವ ಪಕ್ಷವಾದರೂ ಅಂಗಲಾಚುತ್ತದೆ ಎಂದು ನಂಬಿದ್ದರು. ಆದರೆ ಯಾವಾಗ ಕಾಂಗ್ರೆಸ್ ಇವರನ್ನು ದೂರಸರಿಸಿತೋ, ಯಾವಾಗ ಯಡ್ಡಿ ಕೂಡ ತಮ್ಮ ಪರಮವೈರಿ ಜೆಡಿಎಸ್‌ನೊಂದಿಗೆ ಕೈ ಜೋಡಿಸುವ ಸಾಧ್ಯತೆ ಕಂಡು ಬಂದಿತೋ, ರೆಡ್ಡಿಗಳ ಅರ್ಭಟವೆಲ್ಲ ನಿಂತಿತು. ●

ಮೊದಲೇ ಹೇಳಬೇಕಾದ ವಿಷಯ ಏನೆಂದರೆ ಇವಳು ರೇಣುಕಾಚಾರ್ಯನ ಗೆಳೆತಿ ನರ್ಸ್ ಜಯಲಕ್ಷ್ಮಿ ಅಲ್ಲ. ನಂದಿನಿ ಲೇಔಟ್‌ನ ಇಪ್ಪತ್ತೂರು ವರ್ಷದ ಜಯಲಕ್ಷ್ಮಿ ಎಂಬ ಯುವತಿ ಈಕೆ. ಕಳೆದ ಐದಾರು ತಿಂಗಳಿಂದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಗೆ ಬಿಟ್ಟೂಬಿಡದೆ ಮೊಬೈಲ್ ಫೋನಿನಲ್ಲಿ ಕಾಟ ಕೊಡುತ್ತಿದ್ದ ಈ ಜಯಲಕ್ಷ್ಮಿ ಈಗತಾನೆ ಸಿಟಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾಳೆ.

ಅದು ಹೇಗೋ ಕುಮಾರಸ್ವಾಮಿಯ ಮೊಬೈಲ್ ನಂಬರ್ ಪತ್ತೆಹಚ್ಚಿದ್ದ ಈ ಜಯಲಕ್ಷ್ಮಿ ಯಾವ ಪರಿ ಕಾಟ ಕೊಡುತ್ತಿದ್ದಳೆಂದರೆ ಕುಮಾರಸ್ವಾಮಿಗೆ ತಲೆಯೇ ಕೆಟ್ಟಂತಾಗಿತ್ತಂತೆ. ರಾತ್ರೋರಾತ್ರಿ ಫೋನು ಮಾಡಿ ಯದ್ವಾತದ್ವ ಹೊಗಳುವುದು, ಇನ್ನೊಂದು ರಾತ್ರಿ ಬಾಯಿಗೆಬಂದಂತೆ ಬೈಯ್ಯುವುದು, ಮತ್ತೊಂದು ದಿನ ಯಡಿಯೂರಪ್ಪಗೆ ಯಾಕೆ ಅಧಿಕಾರ ಹಸ್ತಾಂತರ ಮಾಡಲಿಲ್ಲ ಅಂತ ದೂಷಿಸುವುದು... ಹೀಗೆಲ್ಲಾ ಅವಳ ಕಾಟ ಇರುತ್ತಿತ್ತು. ಆದರೆ ತಾನ್ಯಾರು, ಹೆಸರೇನು, ಎಲ್ಲಿಂದ ಮಾತಾಡುತ್ತಿದ್ದೇನೆಂದು ಅವಳು ಹೇಳುತ್ತಿರಲಿಲ್ಲ. ಕುಮಾರಸ್ವಾಮಿ ಮೊದಮೊದಲಿಗೆ ಇವಳನ್ನು ನಿರ್ಲಕ್ಷಿಸಿದರಾದರೂ ಬರುಬರುತ್ತಾ ಅವಳ ಫೋನ್ ಕಿರುಕುಳ ಜಾಸ್ತಿಯಾದಂತೆ ಅವರಿಗೂ ಸಿಟ್ಟು ಬಂತು. ಇವಳ್ಯಾರೆಂದು ಪತ್ತೆಹಚ್ಚುವಂತೆ ಪೊಲೀಸರಿಗೆ ಹೇಳಿದರು. ಅದು ಸಾಲದೆಂದು ಖಾಸಗಿ ಪತ್ತೇದಾರರನ್ನೂ ನಿಯೋಜಿಸಿದರು. ಆದರೆ ಈ ಜಯಲಕ್ಷ್ಮಿ ಎಂಥ ಕಿಲಾಡಿಯೆಂದರೆ ಆರು ತಿಂಗಳು ಒಂದೇ ಸಮನೆ ಮೊಬೈಲ್ ಬಳಸಿದ್ದರೂ ಒಮ್ಮೆಯೂ ತನ್ನ ಗುರುತು, ಸ್ಥಳದ ವಿವರ ಪತ್ತೆಯಾಗದಂತೆ ನೋಡಿಕೊಂಡಿದ್ದಳು. ಸದಾಶಿವನಗರ ಪೊಲೀಸರು ಈಗ್ಗೆ ಮೂರು ದಿನದ ಹಿಂದೆ ಅವಳನ್ನು ಹಿಡಿದಾಗ ಅವಳ ಹತ್ತಿರ ಒಂದಲ್ಲ ಎರಡಲ್ಲ ಒಟ್ಟು ಆರು ಸಿಮ್ ಕಾರ್ಡುಗಳಿದ್ದವು. ಎಲ್ಲಾ ಬೇರೆಬೇರೆ ಹೆಸರಿನ, ಅಡ್ರೆಸ್ಸಿನ ಸಿಮ್‌ಗಳವು.



ಕುಮಾರಣ್ಣಂಗೆ ಜಯಲಕ್ಷ್ಮಿ ಕಾಟ!

ಅಯ್ಯೋ ಅಂದದ್ದಕ್ಕೆ ಆರು ತಿಂಗಳು ಪಾಪ

ಈ ಜಯಲಕ್ಷ್ಮಿನ ಹಿಡಿದ ಮೇಲೆ ಯಾಕೆ ಮಾಜಿ ಸಿಎಂಗೆ ಫೋನ್ ಕಾಟ ಕೊಡುತ್ತಿದ್ದೆ ಅಂದಾಗ ಅವಳೊಂದು ಪುರಾಣವನ್ನೇ ಹೇಳಿದ್ದಾಳೆ.

ಏನಾಗಿತ್ತೆಂದರೆ ಕುಮಾರಸ್ವಾಮಿ ಸಿಎಂ ಆಗಿದ್ದಾಗ ಒಂದು ಸಾರಿ ಜನತಾ ದರ್ಶನಕ್ಕೆ ಈ ಜಯಲಕ್ಷ್ಮಿ ಬಂದು ತನ್ನ ಕಷ್ಟ ಹೇಳಿಕೊಂಡಿದ್ದಾಳೆ. ತಕ್ಷಣ ಅವಳಿಗೆ ನೂರು ಸಾವಿರ ರೂಪಾಯಿ ಕೊಟ್ಟ ಕುಮಾರಸ್ವಾಮಿ ಹೂವಿನ ವ್ಯಾಪಾರ ಮಾಡಿ ಜೀವನ ನಡೆಸುವಂತೆ ಹೇಳಿಕಳುಹಿಸಿದ್ದಾರೆ. ಅವತ್ತು ಹಾಗೆ ಹೋದ ಜಯಲಕ್ಷ್ಮಿ ಹೂ ಮಾರಾಟ ಮಾಡಿದಳೋ ಇಲ್ಲವೋ ಗೊತ್ತಿಲ್ಲ. ಆದರೆ ಅಚ್ಚುಕಟ್ಟಾಗಿ ಒಂದು ಮೊಬೈಲ್ ಖರೀದಿಸಿ ಯಾವುದೋ ಹೆಸರಲ್ಲಿ ಸಿಮ್ ತಗೊಂಡು ಕುಮಾರಣ್ಣನಿಗೆ ಫೋನ್ ಮಾಡಲು ಶುರು ಮಾಡಿದ್ದಾಳೆ. ಬರುಬರುತ್ತಾ ಇವಳ ಕಿರುಕುಳ ಜಾಸ್ತಿಯಾದಂತೆ ಕುಮಾರಸ್ವಾಮಿ ಪೊಲೀಸರಿಗೆ ಹೇಳಿದ ಮೇಲೆ ಅವಳಿಗಾಗಿ ಹುಡುಕಾಟ ಶುರುವಾಗಿದೆ.

ಸದಾಶಿವನಗರ ಪೊಲೀಸರ ಪೈಕಿ ಒಬ್ಬಾತ ಒಂದು ಉಪಾಯ ಮಾಡಿ ಅವಳ ಮೊಬೈಲ್‌ಗೆ ಆಗಾಗ್ಗೆ ಫೋನ್ ಮಾಡುತ್ತಾ ಮಾತಾಡುತ್ತಾ ಕೊನೆಗೊಂದು ದಿನ "ನಿನ್ನ ಮದುವೆ ಆಗ್ತೀನಿ, ಭೇಟಿಯಾಗೋಣ" ಅಂದ. ಈ ಸುಂದರಿ ನಾಚಿಕೊಂಡಂತೆ ನಟಿಸಿ ಒಂದೇ ಸಾರಿ ಮದುವೆ ವಿಚಾರ ಮಾತಾಡ್ತಿದ್ದೀರಲ್ಲ, ಅದು ಬೇಡ ಮೊದಲು ಭೇಟಿಯಾಗೋಣ. ಆಮೇಲೆ ಬಾಕಿ ವಿಚಾರ ಅಂದಿದ್ದಾಳೆ. ಹಾಗೆ ಮಾತಾಡೋವಾಗೆಲ್ಲಾ ಪೊಲೀಸರಿಗೆ ಹಿನ್ನೆಲೆಯಲ್ಲಿ ಜನರ ಗುಂಪೊಂದು ಭಜನೆ ಮಾಡುತ್ತಿರುವುದು ಕೇಳುತ್ತಿತ್ತು. ಅಷ್ಟರಲ್ಲಿ ಜಯಲಕ್ಷ್ಮಿ ಮೊಬೈಲ್ ಸಿಗ್ನಲ್ ಪತ್ತೆಹಚ್ಚಿದಾಗ ಅವಳು ಸದಾಶಿವನಗರ, ಮಲ್ಲೇಶ್ವರ, ನಂದಿನಿ ಲೇಔಟ್ ಏರಿಯಾಗಳಲ್ಲಿ ಓಡಾಡುತ್ತಿದ್ದಾಳೆಂಬುದೂ ಪತ್ತೆಯಾಗಿತ್ತು.

ಸರಿ ಅಂದುಕೊಂಡ ಪೊಲೀಸರು ಕಳೆದ ವಾರ ಈ ಪರಿಯಾದಲ್ಲಿ ಎಲ್ಲೆಲ್ಲಿ ರೆಗ್ಯೂಲರ್ ಆಗಿ ಭಜನೆ ನಡೆಯುತ್ತದೆ ಅಂತ ಚೆಕ್ ಮಾಡಿದಾಗ ಕೊನೆಗೆ ಮಲ್ಲೇಶ್ವರಂ 8 ನೇ ಕ್ರಾಸಿನ ವಾಸವಿಮಂದಿರದಲ್ಲಿ ಈ ಕಿಲಾಡಿ ಹುಡುಗಿ ಇದ್ದಳು.

ಅವತ್ತಿನ ಭಜನೆ ಮುಗಿದ ಮೇಲೆ ಅವಳನ್ನು ಮಫ್ತಿ ಪೊಲೀಸರು ಹಿಂಬಾಲಿಸಿ ಹೋದಾಗ ನಂದಿನಿ ಲೇಔಟಿನ ಮನೆಯೂ ಸಿಕ್ಕಿತು. ಮನೆಯೊಳಗೆ ಆರು ಸಿಮ್ ಕಾರ್ಡುಗಳೂ ಇದ್ದವು.

ಜಯಲಕ್ಷ್ಮಿ ಈಗ ಪೊಲೀಸರ ಅತಿಥಿ. ಅವಳಮ್ಮ ಕುಮಾರಸ್ವಾಮಿ ಸಹಾಯಕರ ಹತ್ತಿರ ಹೋಗಿ "ಮಗಳು ಏನೋ ಗೊತ್ತಾಗದೆ ತಪ್ಪು ಮಾಡಿದ್ದಾಳೆ, ಬಿಟ್ಟುಬಿಡಿ" ಅಂದಳಂತೆ. ಆದರೆ ಅವರು ಒಪ್ಪಿಲ್ಲ.

ಪೊಲೀಸರು ಜಯಲಕ್ಷ್ಮೀನ ಕೂರಿಸಿಕೊಂಡು "ಯಾಕಮ್ಮ ಹಿಂಗ್ ಮಾಡ್ತಿದ್ದೆ" ಅಂತ ಕೇಳಿದ್ದಕ್ಕೆ ಈ ಬಾಲೆ "ಸುಂಸುಮ್ನೆ" ಅಂದಳಂತೆ. ಹೋಗಲಿ ಬಿಡಿ ಸದ್ಯಕ್ಕಂತೂ ಕುಮಾರಸ್ವಾಮಿಗೆ ಸದಾಶಿವನಗರ ಪರಿಯಾದ ಒಂದು ಹೆಣ್ಣಿನ ಕಿರುಕುಳವಾದರೂ ತಪ್ಪಿತಲ್ಲ!

ಬಾಗಲಕೋಟೆ: ದಲಿತ ಸಂಸ್ಥೆ ಸ್ವಾಹಕ್ಕೆ ಕಪಟ ಸ್ವಾಮಿ ಸ್ಕೆಚ್ಚು!


...ಬಸವರಾಜ ಪಟ್ಟಾದಾಚಾರ್ಯ

ಮುಖ್ಯಮಂತ್ರಿ ಯಡ್ಡಿ ಜನಸಾಮಾನ್ಯರ ದುಡ್ಡನ್ನು ಕೋಟಿ ಕೋಟಿ ಲೆಕ್ಕದಲ್ಲಿ ಮಠಮಾನ್ಯಗಳಿಗೆ ಕೊಟ್ಟು ಸಿಕ್ಕಸಿಕ್ಕವರ ಪಾದಗಳಿಗೆಲ್ಲ ಎರಗಿಬಂದುದರಿಂದ ಹಾದಿ ಬೀದಿಯ ಸ್ವಾಮಿಗಳಿಂದ ಹಿಡಿದು ದೊಡ್ಡ ದೊಡ್ಡ ಮಠಾಧಿಪತಿಗಳವರೆಗೆ ಎಲ್ಲರಿಗೂ ಒಂದು ತರಹದ ಬಲ ಬಂದಂತಾಗಿದೆ. ಮಠಗಳ ಹೆಸರಲ್ಲಿ, ಗೋಶಾಲೆಗಳ ಹೆಸರಲ್ಲಿ, ಜನಕಲ್ಯಾಣದ ಹೆಸರಲ್ಲಿ ಸಾರ್ವಜನಿಕ ಜಾಗಗಳನ್ನು, ಜಮೀನುಗಳನ್ನು ಆಕ್ರಮಿಸಿಕೊಳ್ಳುವ, ನುಂಗಿಹಾಕುವ, ಅಷ್ಟೇ ಅಲ್ಲ ಬೇಕಾದವರ ಖಾಸಗಿ ಆಸ್ತಿಗೂ ಕನ್ನ ಹಾಕಿ, ಕಿರುಕುಳ ಕೊಟ್ಟು, ಸರ್ಕಾರದ ಬೆಂಬಲದಿಂದ ಅವರನ್ನು ಹೆದರಿಸಿ ಬೆದರಿಸಿ ವಶಪಡಿಸಿಕೊಳ್ಳುವ ಕೆಲಸ ಹಲವಾರು ಕಡೆ ನಡೆದೇ ಇದೆ. ಅಂಥ ಸ್ವಾಮಿಗಳ ಲಿಸ್ಟಿಗೆ ಈಗ ಗುಳೇದಗುಡ್ಡದ ನಿವೃತ್ತ ಸ್ವಾಮಿಯೂ ಸೇರಿಕೊಂಡಿದ್ದಾನೆ.

ಶ್ರೀಮದ್ ಹಿಮವತ್‌ಕೇದಾರ್ ವೈರಾಗ್ಯ ಸಿಂಹಾಸನಾಧೀಶ ಏಕೋರಾಮ ಕರಕಮಲ ಸಂಜಾತ ಶ್ರೀ 1008 ಜಗದ್ಗುರು ಬಸವರಾಜ ಪಟ್ಟಾದಾಚಾರ್ಯ ಎಂದು ಒಂದೇ ಉಸಿರಿಗೆ ಹೇಳಲೂ ಸಾಧ್ಯವಾಗದ ಇಷ್ಟುದ್ದ ಹೆಸರಿಟ್ಟುಕೊಂಡಿರುವ ಈ ಜಗದ್ಗುರು ಬಾಗಲಕೋಟೆ ಹತ್ತಿರದ ಗುಳೇದಗುಡ್ಡ ಶ್ರೀ ಜಗದ್ಗುರು ಗುರುಸಿದ್ದೇಶ್ವರ ಮಠಕ್ಕೆ ನಿವೃತ್ತ ಪೀಠಾಧಿಪತಿ. ಈತ ಬಾಗಲಕೋಟೆಯ ಅಪ್ಪಟ ಜಾತಿವಾದಿ ಶಾಸಕ ಚರಂತಿಮಠನ ಕುಮ್ಮಕ್ಕಿನಿಂದ ಇಡೀ ದಲಿತರ ಶಿಕ್ಷಣ ಸಂಸ್ಥೆಯನ್ನೇ ಕಬಳಿಸಲು ಹೊರಟಿದ್ದಾನೆ.


ಚರಂತಿಮಠ

ಮೋಹ, ಮತ್ಸರ, ಸ್ವಾರ್ಥ, ಭೋಗವನ್ನು ತ್ಯಜಿಸಿ ನಿಸ್ವಾರ್ಥದಿಂದ ಜನಕಲ್ಯಾಣಕ್ಕಾಗಿ ಆಧ್ಯಾತ್ಮದ ಬೋಧನೆ ಮಾಡಿಕೊಂಡಿರಬೇಕಾದ ಈ ಸ್ವಾಮಿ 2006ರ ಡಿಸೆಂಬರ್‌ನಲ್ಲಿ ಶರಣ ಸಂಗಮ ಸಮಾವೇಶವೆಂಬ ಅದ್ದೂರಿ ಕಾರ್ಯಕ್ರಮ ಮಾಡಿ ಥೇಟ್ ರಾಜಕಾರಣಿಯಂತೆ ಸಭೆಯಲ್ಲೇ ನಿವೃತ್ತಿಯ ಘೋಷಣೆ ಮಾಡಿದರೂ ಕಂಡವರ ಆಸ್ತಿಗೆ ಕನ್ನ ಹಾಕುವುದನ್ನು ಮಾತ್ರ ಇನ್ನೂ ಬಿಟ್ಟಿಲ್ಲ. ಗುಳೇದಗುಡ್ಡದ ಮಠಕ್ಕೆ ವಕ್ಕರಿಸಿಕೊಂಡಿರುವ ಈ ಕಳ್ಳ ಸ್ವಾಮಿ ಇಲ್ಲಿ ಆಧ್ಯಾತ್ಮ ಚಿಂತನೆಗಳಿಗಿಂತ ಹೆಚ್ಚಾಗಿ ಮಾಡಿದ್ದು ದುಡ್ಡು ಮಾಡುವ ದಂಧೆಯನ್ನು.

1971ರಲ್ಲಿ ಈ ಮಠದಡಿಯಲ್ಲಿ "ಶ್ರೀ ಜಗದ್ಗುರು ಗುರುಸಿದ್ದೇಶ್ವರ ವಿದ್ಯಾವರ್ಧಕ ಮತ್ತು ಸಾಂಸ್ಕೃತಿಕ ಸಂಸ್ಥೆ ಗುಳೇದಗುಡ್ಡ" ಹೆಸರಿನಲ್ಲಿ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿ ದುಡ್ಡು ಮಾಡಲು ನಿಂತುಬಿಟ್ಟ. ಈತ ಸಿಕ್ಕ ರಾಜಕೀಯ ನಾಯಕರ ತಲೆ ಸವರಿ ಸರಕಾರಿ ಸವಲತ್ತುಗಳನ್ನು ಪಡೆದುಕೊಂಡ. ಜೊತೆಗೆ ಸಾಮಾನ್ಯ ಜನರನ್ನು ಮರುಳು ಮಾಡಿ ಮಠದ ಪ್ರಚಾರ ಮಾಡಿಸತೊಡಗಿದ. ನಂತರ 1982ರಲ್ಲಿ ಇಲ್ಲಿನ ಪ್ರಜ್ಞಾವಂತ ದಲಿತ ಮುಖಂಡರೆಲ್ಲ ಸೇರಿ ಶಿಕ್ಷಣ ಸಂಸ್ಥೆಯೊಂದನ್ನು ಆರಂಭಿಸಬೇಕೆಂಬ ಯೋಚನೆಯಲ್ಲಿದ್ದಾಗ ಅದರಲ್ಲಿನ ಕೆಲವರನ್ನು ಕರೆಸಿ ತಮ್ಮ ಮಠದ ಹೆಸರಿನಲ್ಲೇ ಶಿಕ್ಷಣ ಸಂಸ್ಥೆ ಮಾಡುವಂತೆ ಒತ್ತಾಯಿಸಿ ತನ್ನ ಹಳೇ ಶಿಕ್ಷಣ ಸಂಸ್ಥೆಯ ಹೆಸರಿನಲ್ಲೇ ಮತ್ತೊಂದು ಪರಿಶಿಷ್ಟ ಜಾತಿ/ಪಂಗಡದ ಆಡಳಿತ ಮಂಡಳಿ ಇರುವ ಸಂಸ್ಥೆ ನೋಂದಾವಣೆಯಾಗುವಂತೆ ಮಾಡಿದ್ದ. ಊರಿನ ದೊಡ್ಡ ಸ್ವಾಮಿಗಳು ಹೇಳುತ್ತಾರೆಂಬ ಕಾರಣಕ್ಕಾಗಿ ಈತನ ಮಾತನ್ನು ನಂಬಿದ ದಲಿತ ಮುಖಂಡರು ಅದೇ ಶ್ರೀ ಜಗದ್ಗುರು ವಿದ್ಯಾವರ್ಧಕ ಹಾಗೂ ಸಾಂಸ್ಕೃತಿಕ ಸಂಸ್ಥೆ ಹೆಸರಿನಲ್ಲಿ ಸಂಸ್ಥೆಯನ್ನು ನೊಂದಾಯಿಸಿ ಹೈಸ್ಕೂಲು ಶಾಲೆಗಳನ್ನು ಆರಂಭಿಸಿದರು. ಅದು ಎಸ್ಸಿ/ಎಸ್ಟಿ ಸಂಸ್ಥೆಯಾದ್ದರಿಂದ ಆಗಿನ ಕಾಯ್ದೆ ಪ್ರಕಾರ ಪ್ರಾರಂಭದಿಂದಲೇ ಅನುದಾನಕ್ಕೆ ಒಳಪಟ್ಟಿತು. ಜೊತೆಗೆ ಬಾಗಲಕೋಟೆ ಸೇರಿದಂತೆ ಬೇರೆ ಬೇರೆ ಕಡೆ ಶಾಲೆ, ಹೈಸ್ಕೂಲುಗಳನ್ನು ಆರಂಭಿಸಿ ಬೆಳೆಯತೊಡಗಿತು. ಯಾವಾಗ ಸರ್ಕಾರದಿಂದ ಅನುದಾನ ಜೊತೆಗೆ ಸಹಾಯಧನವೂ ಈ ಸಂಸ್ಥೆಗೆ ಹರಿದು ಬರಲಾರಂಭಿಸಿತೋ ಈ ಕಳ್ಳ ಸ್ವಾಮಿ ಇಡೀ ಸಂಸ್ಥೆಯನ್ನು ನುಂಗಿಹಾಕುವ ತಂತ್ರವನ್ನು ಹೆಣೆಯತೊಡಗಿದ. ಆಡಳಿತ ಮಂಡಳಿಯಲ್ಲಿನ ಕೆಲ ಮುಗ್ಧ ದಲಿತರನ್ನು ಮುಂದಿಟ್ಟುಕೊಂಡು ಈ ಸಂಸ್ಥೆ ಕೂಡ ತನ್ನದೇ ಎಂದು ವಾದಿಸತೊಡಗಿದ. ಅದರಂತೆ ಈ ಎಸ್ಸಿ/ಎಸ್ಟಿ ಸಂಸ್ಥೆಯಲ್ಲಿ ತನ್ನ ಪರ ಇರುವ ಪದಾಧಿಕಾರಿಗಳ ಸಭೆ ನಡೆಸಿ ತನ್ನನ್ನೇ ಶಾಶ್ವತ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದಂತೆ ಠರಾವು ಪಾಸು ಮಾಡಿಸಿ ಜಿಲ್ಲಾ ನೋಂದಣಾಧಿಕಾರಿಗಳಿಗೆ ಕಳುಹಿಸಿ ತನ್ನ ಪ್ರಭಾವ ಬಳಸಿ ಅದನ್ನು ಮಾನ್ಯ ಮಾಡಿಸಿದ್ದಾನೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಾವುದೇ ಆಡಳಿತ ಮಂಡಳಿ ಇರುವ ಸಂಸ್ಥೆಯಲ್ಲಿ ಶಾಶ್ವತ ಅಧ್ಯಕ್ಷನಾಗಲಿ ಅಥವಾ ಮತ್ಯಾವುದೋ ಶಾಶ್ವತ ಸ್ಥಾನಗಳನ್ನಾಗಲಿ ಸೃಷ್ಟಿಸಲು ಅವಕಾಶವೇ ಇಲ್ಲ. ಆಡಳಿತ ಮಂಡಳಿಯ ಅವಧಿ ಮುಗಿದನಂತರ ಚುನಾವಣೆ ನಡೆದು ಅಥವಾ ಸಭೆ ನಡೆದು ಆಡಳಿತ ಮಂಡಳಿ ಸದಸ್ಯರು ಆಯ್ಕೆಯಾಗಿ ಅವರು ಪದಾಧಿಕಾರಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಆದರೆ ಈ ಯಾವ ಕನಿಷ್ಠ ಜ್ಞಾನವೂ ಇಲ್ಲದೆ ಈ ನಿರ್ಲಜ್ಜ ಸ್ವಾಮಿ ಶಾಶ್ವತ ಅಧ್ಯಕ್ಷನೆಂದು ಆಯ್ಕೆಯಾಗಿದ್ದಾನೆ. ಇದಕ್ಕಿಂತ ದುರಂತ ಎಂದರೆ ಎಸ್ಸಿ/ಎಸ್ಟಿ ಸಂಸ್ಥೆಗಳಲ್ಲಿ ಕೇವಲ ಆ ಜನಾಂಗಕ್ಕೆ ಸೇರಿದವರು ಮಾತ್ರ ಸದಸ್ಯ ಮತ್ತು ಪದಾಧಿಕಾರಿಗಳಾಗಬಹುದು. ಆದರೆ ಈತ ದಲಿತ ವರ್ಗಕ್ಕೆ ಸೇರಿದವನೇ ಅಲ್ಲ. ಆದರೂ ದಲಿತರ ಸಂಸ್ಥೆಗೆ ಶಾಶ್ವತ ಅಧ್ಯಕ್ಷನೆಂಬ ವಿಚಿತ್ರ ಸ್ಥಾನವನ್ನು ಹಿಡಿದು ಕುಳಿತಿದ್ದಾನೆ. ಜಿಲ್ಲಾ ನೋಂದಣಾಧಿಕಾರಿಗಳಾದರೂ ಇದನ್ನು ಹೇಗೆ ಮಾನ್ಯ ಮಾಡಿದರು ಎಂಬುದು ಆ ಗುರು ಸಿದ್ದೇಶ್ವರನೇ ಬಲ್ಲ. ಆದರೆ ಈಗ 1982ರಿಂದ ಅನುದಾನ ಪಡೆದು ಈ ಸಂಸ್ಥೆಯಲ್ಲಿ ಕೆಲಸ ಮಾಡಿದ ಸಿಬ್ಬಂದಿಗೆ ಸರ್ಕಾರ ನೋಟೀಸು ನೀಡಿ ಈ ಸ್ವಾಮಿಯನ್ನು ಶಾಶ್ವತಾಧ್ಯಕ್ಷನನನ್ನಾಗಿ ಆಯ್ಕೆ ಮಾಡಿದ್ದರಿಂದ ಸಂಸ್ಥೆ ಎಸ್ಸಿ/ಎಸ್ಟಿ ಸಂಸ್ಥೆಯ ವ್ಯಾಪ್ತಿಗೊಳಪಡದೇ ಸಾಮಾನ್ಯ ವರ್ಗಕ್ಕೆ ಪರಿವರ್ತನೆಗೊಂಡಿರುವುದರಿಂದ ಇಲ್ಲಿವರೆಗೂ ಪಡೆದ ಅನುದಾನವನ್ನು ಮರಳಿಸಬೇಕೆಂದು ಹೇಳಿದೆ.

ತಾನೇ 1971ರಲ್ಲಿ ರಿ.ಸಂ. 33/71-72ರ ನೋಂದಣಿ ಸಂಖ್ಯೆ ಅಡಿಯಲ್ಲಿ ಆರಂಭಿಸಿರುವ ಸಂಸ್ಥೆಯಲ್ಲಿಂದು ಎಲ್.ಕೆ.ಜಿ. ಸ್ಕೂಲು, ಬಿ.ಎಸ್.ಡಬ್ಲ್ಯೂ ನರ್ಸಿಂಗ್ ಕಾಲೇಜು, ಡಿ.ಎಡ್ ಕಾಲೇಜು, ಬಿ.ಎಡ್ ಕಾಲೇಜು, ಪಿ.ಯು. ಕಾಲೇಜು ಮುಂತಾದ ಇನ್ನೂ ಅನೇಕ ಶೈಕ್ಷಣಿಕ ಸಂಸ್ಥೆಗಳು ಸ್ಥಾಪನೆಗೊಂಡಿವೆ. ಅವುಗಳಿಂದ ಡೊನೇಷನ್ ರೂಪದಲ್ಲಿ ಬೇಕಾದಷ್ಟು ಆದಾಯ ಕೂಡ ಬರುತ್ತಿದೆ. ಇಷ್ಟರಿಂದಲೇ ತೃಪ್ತನಾಗದ ಈ ಕಪಟ ಸ್ವಾಮಿ ವೃದ್ಧಾಶ್ರಮ, ಬುದ್ಧಿ ಮಾಂದ್ಯ ಮಕ್ಕಳ ಶಾಲೆಗಳನ್ನು ದಾಖಲೆಗಳಲ್ಲಿ ಮಾತ್ರ ಆರಂಭಿಸಿ ಸರಕಾರದ ದುಡ್ಡು ಬಾಚುತ್ತಿದ್ದಾನೆ. ಅಷ್ಟೇ ಏಕೆ, ಆತ ನಡೆಸುತ್ತಿರುವ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿ ಊಟ ಸರಬರಾಜು ಮಾಡುವ ಗುತ್ತಿಗೆ ಹಿಡಿದು ಮಕ್ಕಳಿಗೆ ಕಳಪೆ ಆಹಾರ ತಿನ್ನಿಸುವ ಮೂಲಕ ಅವರ ಅನ್ನಕ್ಕೂ ಬಾಯಿ ಹಾಕಿದ್ದಾನೆ. ಈತನ ಈ ವಂಚಕತನದಿಂದ ಈ ಸಂಸ್ಥೆಯಲ್ಲಿ ದುಡಿಯುತ್ತಿರುವ ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕುವುದಷ್ಟೇ ಅಲ್ಲ, ಕೆಳ ಸಮುದಾಯಕ್ಕೆ ಆಸ್ತಿಯಾಗಬಹುದಾಗಿರುವ ಸಂಸ್ಥೆಯೊಂದು ಈ ಕಪಟ ಸನ್ಯಾಸಿಯ ಕೈಸೇರಲಿದೆ. ಈ ಸಂಸ್ಥೆಯನ್ನು ಉಳಿಸಿಕೊಂಡು ಬೆಳೆಸಬೇಕಾದ ಜವಾಬ್ದಾರಿ ದಲಿತಪರ ಎಂದು ಹೇಳಿಕೊಳ್ಳುವ ಸಂಘಟನೆಗಳ ಮೇಲಿದೆ. ಒಳಜಗಳ ಮರೆತು ಒಂದಾಗಿ ಈ ಕಳ್ಳ ಸ್ವಾಮಿಯ ಬಣ್ಣ ಬಯಲು ಮಾಡಿದರೆ ಮಾತ್ರ ಅದು ಸಾಧ್ಯ.

ಮಹಾಲಿಂಗಪ್ಪ ಆಲಬಾಳ

ಮಠದ ಕಂಬಕ್ಕೆ ಕಟ್ಟಿ ಬಡಿದಿದ್ದ

ಮೇಲ್ನೋಟಕ್ಕೆ ಮಾತ್ರ ಸಂತನಂತೆ ಕಾಣುವ ಈ ಖಾವಿಧಾರಿ ಎಂತಹ ದಲಿತ ದ್ವೇಷಿ ಎಂದರೆ ಈತನ ಮಠದ ಪಕ್ಕದ ಬಾವಿಯಲ್ಲಿ ಇಳಿದಿದ್ದಾರೆ ಎಂಬ ಒಂದೇ ಕಾರಣಕ್ಕೆ ಬಾವಿಯ ಮೆಟ್ಟಿಲುಗಳನ್ನು ಕೀಳುತ್ತಿದ್ದಾನೆ ಎಂಬ ಆರೋಪ ಹೊರಿಸಿ ಚಂದ್ರಪ್ಪ ವಡ್ಡರ ಎಂಬ ದಲಿತನನ್ನು ಎಳೆದು ತರಿಸಿ ಮಠದ ಕಂಬಕ್ಕೆ ಕಟ್ಟಿ ಬಡಿದು ಹಾಕಿದ್ದಲ್ಲದೆ ಜಾತಿ ಹೆಸರಿನಲ್ಲಿ ಅವಮಾನ ಮಾಡಿದ್ದ. ಚಂದ್ರಪ್ಪ ಹೋಗಿ ಗುಳೇದಗುಡ್ಡ ಪೊಲೀಸ್ ಠಾಣೆಯಲ್ಲಿ ಕಂಪ್ಲೇಂಟ್ ಕೊಟ್ಟಿದ್ದ. ಆಗಿನ ಪಿಎಸ್ಸೈ ಎ.ಎಂ. ಕೆರೂರ ಆ ಕೇಸಿನಡಿ ಈತನನ್ನು ಬಂಧಿಸಲು ಬರುತ್ತಿರುವ ವಾಸನೆ ಅರಿತ ಈ ಕಿರಾತಕ ಮುಗ್ಧ ದಲಿತರನ್ನೇ ಬಳಸಿಕೊಂಡು ಪ್ರತಿಭಟನೆ ಮಾಡಿಸಿ ಬಚಾವಾಗಿದ್ದ. ಆಗ ತನ್ನನ್ನು ಉಳಿಸಿದ್ದ ದಲಿತರ ಋಣ ತೀರಿಸಲೋ ಎಂಬಂತೆ ಈಗ ದಲಿತರ ಸಂಸ್ಥೆಯನ್ನೇ ನುಂಗಿ ಹಾಕಲು ಹೊರಟಿದ್ದಾನೆ.




ಭೂಮಿ ಕೇಳಿದರೆ ಜೈಲು! ದಲಿತರ ಮೇಲೆ ಯಡ್ಡಿ–ರಾಘು ದೌರ್ಜನ್ಯ!

ನಿಮಗೆ ಗೊತ್ತಿರಬಹುದು. ಶಿಕಾರಿಪುರ ತಾಲ್ಲೂಕಿನ ...ೂರು ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಷರ ವಿರುದ್ಧ ... ಹೊಡೆದು ನಿಂತಿತ್ತು. 'ಏಸೂರು ಕೊಟ್ಟರೂ ಈಸೂರು ...ವು' ಎಂದು ಬ್ರಿಟಿಷರ ಗುಂಡಿಗೆ ಅಂದು ಎದೆಯೊಡ್ಡಿ ...ದ್ದರು ಇಲ್ಲಿನ ಜನ. ಈ ಸ್ವಾತಂತ್ರ್ಯಾಕಾಂಕ್ಷಿ ರೈತರ ...ೋದ್ದಾತ ಹೋರಾಟವನ್ನು ಬಗ್ಗುಬಡಿಯುವುದಕ್ಕೆ ...ದಿನ ಕೆಂಪುಮೂತಿ ಬ್ರಿಟಿಷರು ಅಮಾಯಕ ರೈತರ ...ಲೆ ಹೇಳತೀರದ ದೌರ್ಜನ್ಯವೆಸಗಿದ್ದರು.

... ದುರಂತ ನೋಡಿ. ದೇಶಕ್ಕೆ ಸ್ವಾತಂತ್ರ್ಯ ಬಂದು ಈಗ ... ದಶಕಗಳು ಉರುಳಿವೆ. ಈಸೂರಿನ ಜನ ಅವತ್ತು ...ಷರ ದೌರ್ಜನ್ಯ ಎದುರಿಸಿದ್ದರೆ ಇವತ್ತು ಮುಖ್ಯಮಂತ್ರಿ ...ಡಿಯೂರಪ್ಪ ಮತ್ತವನ ಪುತ್ರರತ್ನ ಬಿ.ವೈ.ರಾಘವೇಂದ್ರನ ...ರ್ಜನ್ಯ ಎದುರಿಸಬೇಕಾಗಿದೆ.

... ಈಸೂರು ಯಡ್ಡಿಯ ಮತ್ತು ರಾಘವೇಂದ್ರರ ...ತ್ರದೊಳಗೆ ಬರುತ್ತದೆ. ಈ ಜನಪ್ರತಿನಿಧಿಗಳೇ ಅಲ್ಲಿ ...ಕಂಟಕರಾಗಿದ್ದಾರೆ. ಅರಣ್ಯ ಇಲಾಖೆಯ ಹಾಗೂ ...ಲೀಸ್ ಇಲಾಖೆಯ ಸಿಬ್ಬಂದಿಗಳನ್ನು ಛೂಬಿಟ್ಟು ...ತ್ತಾರು ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ...ಡುತ್ತಾ ಬಂದಿರುವ ಬಡ ದಲಿತರನ್ನು ಭೂಮಿಯಿಂದ ...ರದಬ್ಬತೊಡಗಿದ್ದಾರೆ. ಅದನ್ನು ಪ್ರತಿಭಟಿಸಿದವರ ಮೇಲೆ ... ನಡೆಸಿ ಜೈಲಿಗೆ ದೂಡಿದ್ದಾರೆ. ಕೇವಲ ಈಸೂರು ...ತ್ರವಲ್ಲದೇ, ಅಕ್ಕಪಕ್ಕದ ಚುರ್ಚಿಗುಂಡಿ, ಕಲ್ಮನೆ, ತಡಗಣಿ ...ದಲಾದ ಊರುಗಳಲ್ಲೂ ಯಡ್ಡಿ–ರಾಘು ದೌರ್ಜನ್ಯ ...ಲ್ಲದೇ ಸಾಗಿದೆ.

...ಹಾಗೆ ನೋಡಿದರೆ, ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ... ಹೆಚ್ಚು ಕಂದಾಯ ಮತ್ತು ಅರಣ್ಯ ಭೂಮಿಗಳು ...ತ್ತುವರಿಯಾಗಿದ್ದು ಶಿಕಾರಿಪುರ ತಾಲ್ಲೂಕಿನಲ್ಲೆ. ಕೇವಲ ...ಮಿಯಿಲ್ಲದವರು ಹೊಟ್ಟೆಪಾಡಿಗಾಗಿ ಈ ಒತ್ತುವರಿ ...ಡಿದ್ದಾರೆಂದೇನೂ ಅಲ್ಲ. ಸಾಕಷ್ಟು ಭೂಮಿ ಇದ್ದವರೂ ...ಾಸೆಯಿಂದ ಒತ್ತುವರಿ ಮಾಡಿದ್ದೂ ಬೇಕಾದಷ್ಟಿದೆ. ...ೂರಿನ ಹರಗಿಹಾಳು, ಅರಿಶಿನಗೆರೆ ಗೋಮಾಳ ...ಶದಲ್ಲಿ ಈ ಕಂದಾಯ ಮತ್ತು ಅರಣ್ಯ ಭೂಮಿಗಳಲ್ಲಿ ...ವಳಿ ಮಾಡುತ್ತಿರುವವರು ಭೂಹೀನ ದಲಿತರು ...ತ್ತು ದೇವಾಂಗದವರು. ಅವರಿಗೆ ಜೀವನಾಧಾರಕ್ಕೆ ... ತಮ್ಮದೇ ಆದ ತುಂಡು ಭೂಮಿಯೂ ಇಲ್ಲ, ... ಕೆಲಸವೂ ಇಲ್ಲ, ಹಾಗಾಗಿ ಅನಿವಾರ್ಯವಾಗಿ ಈ ...ಮಿಗಳನ್ನು ಆಕ್ರಮಿಸಿಕೊಂಡು ಸಾಗುವಳಿ ಮಾಡು...ರೆ. ಇದು ನಿನ್ನೆ ಮೊನ್ನೆ ದಿಢೀರನೆ ಪ್ರಾರಂಭವಾದದ್ದೂ ... ತಾತ ಮುತ್ತಾತನ ಕಾಲದಿಂದಲೂ ಅವರು ಈ ...ವಳಿ ಮಾಡುತ್ತಾ ಎರಡು ಹೊತ್ತಿನ ಊಟ ಸಂಪಾದಿಸಿ ...ಕೊಳ್ಳುತ್ತಿದ್ದಾರೆ. ಇಲ್ಲಿಯತನಕ ಅವರಿಗೆ ಅರಣ್ಯ ಇಲಾಖೆ...ದಾಗಲೀ, ಪೊಲೀಸರಿಂದಾಗಲೀ ಹೇಳಿಕೊಳ್ಳುವಂಥ ...ಕುಳವೇನೂ ಆಗಿರಲಿಲ್ಲ, ಆದರೆ ಈಗ ಲೋಕಸಭಾ ...ನಾವಣೆಗಳು ಮುಗಿದು ಯಡ್ಡಿ ಪುತ್ರ ರಾಘವೇಂದ್ರ ... ಕ್ಷಣವೇ ತಂದೆ–ಮಗ ಸೇರಿಕೊಂಡು ಅವರ ಮೇಲೆ ...ರ್ಜನ್ಯನಡೆಸಿದ್ದಾರೆ. ಅರಣ್ಯ [illegible] ಪೊಲೀಸ್ ಇಲಾಖೆ...ನ್ನು ಛೂಬಿಟ್ಟು ದಲಿತ ರೈತರನ್ನು ಗೋಳು ಹೊಯ್ದು...ಕೊಳ್ಳುತ್ತಿದ್ದಾರೆ. ಬೇಕಾದಷ್ಟು ಸ್ವಂತ ಜಮೀನು ಹೊಂದಿ...ರೇ ಅರಣ್ಯ ಮತ್ತು ಕಂದಾಯ ಭೂಮಿಗಳನ್ನು ಒತ್ತುವರಿ ...ಕೊಂಡಿದ್ದರೂ ಅವರನ್ನೆಲ್ಲಾ ಬಿಟ್ಟು ಈ ಭೂಹೀನ ... ದಲಿತ ಕುಟುಂಬಗಳನ್ನೇ ಟಾರ್ಗೆಟ್ ಮಾಡಿದ್ದಾರೆ. ...ಈ ದೌರ್ಜನ್ಯಗಳ ಹಿಂದೆ ಯಡ್ಡಿ–ರಾಘುಗಳ ...ಕೈವಾಡ ಇದೆ ಎಂಬುದಾಗಲೀ, ಅವರೇ ಖುದ್ದಾಗಿ ... ಪೊಲೀಸ್ ಮತ್ತು ಅರಣ್ಯ ಇಲಾಖೆಗಳ ಮೂಲಕ ...ಸುತ್ತಿದ್ದಾರೆಂಬುದಾಗಲೀ ಪಾಪ ಆ ಬಡದಲಿತರಿಗೆ ...ಇರಲಿಲ್ಲ, ಹಾಗಾಗಿ, ತಮ್ಮ ಕಷ್ಟ ಹೇಳಿಕೊಳ್ಳಲು



ಸಂಸದ ಬಿ.ವೈ.ರಾಘವೇಂದ್ರನ ಮನೆಗೆ ಹೋಗಿದ್ದಾರೆ. ಈಸೂರಿನ ರೈತರನ್ನು ಕಂಡಿದ್ದೇ ತಡ, ಯುವ ಸಂಸದನ ಬಾಯಿಂದ 'ಶರಣರ ಉವಾಚ'ಗಳ ಬದಲು 'ಶಿಕಾರಿಪುರದ ಬಯ್ಗುಳ'ಗಳ ಸುರಿಮಳೆಯೇ ಪ್ರಾರಂಭವಾಗಿದೆ. "ಈಸೂರಿನವರು ನನಗೆ ಓಟು ಹಾಕಿಲ್ಲ, ಯಾರಿಗೆ ಓಟು ಹಾಕಿದ್ದೀರೋ ಅವರನ್ನು ಕೇಳಿಕೊಳ್ಳಿ. ನನ್ನ ಮನೆ ಹೊಸಲು ದಾಟಿ ಒಳಬರಬೇಡಿ" ಎಂದು ಮುಖಕ್ಕೆ ಹೊಡೆದಂತೆ ಹೇಳಿಕಳಿಸಿದ್ದಾನೆ ಆ ಮಹಾನುಭಾವ. ಇದರಿಂದ ಆತಂಕಿತರಾದ ದಲಿತರು ಬೇರೆ ದಾರಿ ಕಾಣದೇ ದಲಿತ ಸಂಘರ್ಷ ಸಮಿತಿಯ ಬಳಿಹೋಗಿ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ವಾಸ್ತವದಲ್ಲಿ ಕಳೆದ ವರ್ಷವೂ ಹೀಗೆಯೇ ಆಗಿತ್ತು. ಊರಿನ ಪ್ರಬಲ ಜನಾಂಗದವರು ಅದೇ ಜಾಗದಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡಿದ್ದರೂ ಅವರನ್ನು ಪ್ರಶ್ನಿಸದ ಅಧಿಕಾರಿಗಳು ಕೇವಲ ದಲಿತರಿಗೆ ಮಾತ್ರವೇ ಕಿರುಕುಳ ನೀಡಿದ್ದರು. ಕೂಲಿ ಮಾಡುವ ದಲಿತರು ಭೂಮಿ ಉಳಲು ಪ್ರಾರಂಭಿಸಿಬಿಟ್ಟರೆ ತಮ್ಮ ಹೊಲಗದ್ದೆಗಳಲ್ಲಿ ದನಗಳಂತೆ ದುಡಿಯುವುದಕ್ಕೆ, ತಮ್ಮ ಕೊಟ್ಟಿಗೆಗಳಲ್ಲಿ ಸಗಣಿ ತೆಗೆಯುವುದಕ್ಕೆ, ತಮ್ಮ ಚಾಕರಿ ಮಾಡುವುದಕ್ಕೆ ದಲಿತರು ಬರುವುದಿಲ್ಲ ಎಂದು ಊರಿನ ಪ್ರಬಲ ಜಾತಿಗಳ ಜನರೇ ಅರಣ್ಯ ಇಲಾಖೆಯನ್ನು ಅವರ ವಿರುದ್ಧ ಛೂ ಬಿಟ್ಟಿದ್ದರು. ಅದರ ವಿರುದ್ಧ ದಲಿತರೂ ಬಂಡೆದ್ದಿದ್ದರು. ಇದೇ ಕಾರಣಕ್ಕೆ 156 ದಲಿತರನ್ನು ಬಂಧಿಸಿ, ತೀವ್ರತರ ಕೇಸುಗಳನ್ನು ಹಾಕಿ ಬಳ್ಳಾರಿ ಜೈಲಿಗೆ ಕಳುಹಿಸಲಾಗಿತ್ತು.

ಈ ಬಾರಿಯೂ ಅದೇ ಮರುಕಳಿಸುತ್ತಿರುವುದನ್ನು ಮನಗಂಡ ದಲಿತರು ನೆರವಿಗಾಗಿ ಕೆಲವು ಸಂಘಟನೆಗಳ ಮೊರೆಹೋಗಿದ್ದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಮಲೆನಾಡು ಭೂರಹಿತರ ಒಕ್ಕೂಟ ಹಾಗೂ ಸಾಗರದ ಪ್ರಗತಿಪರ ಸಂಘಟನೆಗಳು ತುಂಡು ಭೂಮಿಗಾಗಿ, ಹೊಟ್ಟೆಪಾಡಿಗಾಗಿ ಸರ್ಕಾರದ ವಿರುದ್ಧ ಸೆಟೆದು ನಿಂತಿರುವ ಈ ದಲಿತರ ಬೆಂಬಲಕ್ಕೆ ನಿಂತವು. ಜೂನ್ 1, 2009ರಂದು ಈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕದ ಬಳಿಯಿಂದಲೇ ಪಾದಯಾತ್ರೆಯೂ ಪ್ರಾರಂಭವಾಯಿತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಕಾಗೋಡು ಸತ್ಯಾಗ್ರಹಿ ಗಣಪತಿಯಪ್ಪ ಅವರೇ ಅದಕ್ಕೆ ಚಾಲನೆ ನೀಡಿ, ಭೂಮಿ ಸಿಗುವವರೆಗೂ ಹೋರಾಟ ನಿಲ್ಲಿಸಬೇಡಿ ಎಂದು ದಲಿತ ಸಮೂಹವನ್ನು ಹುರಿದುಂಬಿಸಿದರು. ಜೂನ್ 2 ರಂದು ಹರಗಿಹಾಳ, ಅರಿಶಿನಗೆರೆಯ ಸರ್ಕಾರಿ ಭೂಮಿ ಸಾಗುವಳಿಗೆ ಈಸೂರಿನ ಸುಮಾರು 200ಕ್ಕೂ ಹೆಚ್ಚು ದಲಿತರು ಮುಂದಾಗಿದ್ದಾರೆ.


ಆದರೆ ಅಷ್ಟು ಹೊತ್ತಿಗಾಗಲೇ ದಲಿತರ ಈ ಹೋರಾಟವನ್ನು ಬಗ್ಗುಬಡಿಯಲು ಸಿದ್ಧರಾಗಿದ್ದ ಪೊಲೀಸರು, ಅರಣ್ಯ ಇಲಾಖೆಯ ಸಿಬ್ಬಂದಿ ಸುಸಜ್ಜಿತವಾಗಿ ಮೂರು ವ್ಯಾನುಗಳಲ್ಲಿ ಬಂದು ಹೆಂಗಸರು, ಮಕ್ಕಳು, ವಯೋವೃದ್ಧರು ಎನ್ನದೇ ಸಾಗುವಳಿನಿರತ ದಲಿತರ ಮೇಲೆ ಬೇಕಾಬಿಟ್ಟಿ ಲಾಠಿಚಾರ್ಜ್ ಮಾಡಿದ್ದಾರೆ. ಶಿಕಾರಿಪುರದ ಎಸಿಎಫ್ ಖುದ್ದಾಗಿ ಈ ದೌರ್ಜನ್ಯಕ್ಕೆ ಸಾರಥ್ಯ ವಹಿಸಿದ್ದ, ಆತನೇ ಮುಂದೆ ನಿಂತು ಅವರೆಲ್ಲರನ್ನೂ ಠಾಣೆಗೆ ಎಳೆತಂದು ಅಕ್ರಮ ಪ್ರವೇಶ, ಅರಣ್ಯ ಕಡಿತ ಇತ್ಯಾದಿ ಕೇಸುಗಳನ್ನು ಜಡಿದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾನೆ. ಬಂಧನಕ್ಕೊಳಗಾದ 21 ಜನ ದಲಿತರು ತಮ್ಮ ಮೇಲೆ ಅನ್ಯಾಯವಾಗಿ ಅರಣ್ಯ ಇಲಾಖೆಯವರು ಕಿರುಕುಳ ಕೊಟ್ಟು ದೌರ್ಜನ್ಯವೆಸಗಿದ್ದಾರೆ ಎಂದು ಪ್ರತಿಭಟಿಸಿ ಜಾಮೀನು ನಿರಾಕರಿಸಿ ಜೈಲಿಗೆ ಹೋಗುವುದಾಗಿಯೂ, ತಮ್ಮ ಕುಟುಂಬದವರನ್ನೆಲ್ಲಾ ಜೈಲಿಗೆ ಹಾಕಿ ಎಂದು ಹೇಳಿ ಜೂನ್ 22ರವರೆಗೂ ನ್ಯಾಯಾಂಗ ಬಂಧನಕ್ಕೊಳಗಾಗಿದ್ದಾರೆ.

ಬಗರ್‌ಹುಕುಂ ಸಾಗುವಳಿದಾರರನ್ನು ಜೈಲಿಗೆ ಕಳುಹಿಸುವ ಸುದ್ದಿ ತಿಳಿದು, ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಮತ್ತು ಶಿಕಾರಿಪುರದ ಕಾಂಗ್ರೆಸ್ ಮುಖಂಡರು, ಈಸೂರಿಗೆ ಹೋಗಿ ಸ್ಥಳ ಪರಿವೀಕ್ಷಣೆ ಮಾಡಿದ್ದಾರೆ. ಲಾಗಾಯ್ತಿನಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ದಲಿತರನ್ನು ಒಕ್ಕಲೆಬ್ಬಿಸುವುದನ್ನು ಖಂಡಿಸಿದ್ದಾರೆ.

ಈಸೂರು ದೌರ್ಜನ್ಯದ ಹಿಂದೆ ಮುಖ್ಯಮಂತ್ರಿ ಯಡ್ಡಿ ಮತ್ತವನ ಪುತ್ರ ಸಂಸದ ರಾಘವೇಂದ್ರನೇ ನಿಂತಿರುವುದು ಈಗ ಬಯಲಾಗಿರುವ ಸತ್ಯ. ಲೋಕಸಭಾ ಚುನಾವಣೆಯಲ್ಲಿ ಈಸೂರಿನಿಂದ ತನಗೆ ಬಹಳ ಕಡಿಮೆ ಓಟುಗಳು ಬಂದಿರುವುದರಿಂದ, ಅದರಲ್ಲೂ ವಿಶೇಷವಾಗಿ ದಲಿತರು ತನಗೆ ಓಟು ನೀಡಲಿಲ್ಲವಾದ್ದರಿಂದ ಆ ಸೇಡನ್ನು ಈಗ ಅಪ್ಪ–ಮಗ ಈ ರೀತಿ ತೀರಿಸಿಕೊಳ್ಳುತ್ತಿದ್ದಾರೆ. ಇವರಿಬ್ಬರು ಹಾಕಿದ ಪ್ರಸಾದವನ್ನು ತಿಂದ ಶಿವಮೊಗ್ಗದ ಕೆಲವು ಪತ್ರಿಕೆಗಳು "ಈಸೂರಿನಲ್ಲಿ ಮರಗಳ ಮಾರಣಹೋಮ" ಎಂಬ ಹಸಿಹಸಿ ಸುಳ್ಳನ್ನು ಬರೆದು ಹೊಟ್ಟೆಪಾಡಿಗಾಗಿ ಹೋರಾಡುತ್ತಿರುವ ದಲಿತರಿಗೆ ತುಂಡು ಭೂಮಿ ಸಿಗದಂತೆ ತಡೆಯಲು ಪ್ರಯತ್ನಿಸಿದವು. ಈಸೂರಿನ ದಲಿತರನ್ನು ಥಳಿಸಿ, ಬಂಧಿಸಿ, ಜೈಲಿಗೆ ಕಳುಹಿಸಿದ ವನಪಾಲಕರು ಮತ್ತು ಪೊಲೀಸರಿಗೆ ಶಿವಮೊಗ್ಗದ ಸ್ಟಾರ್ ಹೋಟೆಲ್ ಒಂದರಲ್ಲಿ ಅದೇ ದಿನ ಭಾರಿ ಭೋಜನ ಮಾಡಿಸಿದವರು ಇದೇ ಯಡ್ಡಿ ಹಿಂಬಾಲಕ ಕೇಸರಿ ಪಡೆ ಎಂಬುದು ಈಗ ಗುಟ್ಟಾಗಿಯೇನೂ ಉಳಿದಿಲ್ಲ.

ಅದಾದ ಮೇಲೆ, ಮತ್ತೆ ಜೂನ್ 15, 2009ರಂದು ನೂರಾರು ದಲಿತ ಕುಟುಂಬಗಳು ಬಗರ್‌ಹುಕುಂ ಜಮೀನಿನಲ್ಲಿ ಜೋಳ ಬಿತ್ತಲು ಹೋಗಿದ್ದಾರೆ. ಅಂದು ಸುಮಾರು 200ಕ್ಕೂ ಹೆಚ್ಚು ಪೊಲೀಸರು, ಅರಣ್ಯ ಇಲಾಖೆಯವರು ಅವರ ಮೇಲೆ ಹದ್ದಿನಂತೆ ಎರಗಿ ದೌರ್ಜನ್ಯ ನಡೆಸಿ ಪೊಲೀಸ್ ವ್ಯಾನ್‌ನಲ್ಲಿ ತುಂಬಿಕೊಂಡು ಬಂಧಿಸಿ ಕರೆತಂದಿದ್ದಾರೆ. ನ್ಯಾಯಾಲಯದಲ್ಲಿ ಹಾಜರುಪಡಿಸಿ ಜೈಲಿಗೂ ಕಳಿಸಿದ್ದಾರೆ.

ಒಟ್ಟಾರೆಯಾಗಿ ಈಸೂರು ದಲಿತರ ಮೇಲೆ ನಡೆಯುತ್ತಿರುವ ಈ ಸರಣಿ ದೌರ್ಜನ್ಯವನ್ನು ಪ್ಲಾನ್ ಮಾಡಿ ಖುದ್ದಾಗಿ ನೇತೃತ್ವ ವಹಿಸಿ ಜಾರಿಗೊಳಿಸಿದ್ದು ಯಡಿಯೂರಪ್ಪನ ಆಪ್ತ ಸಹಾಯಕ ಹಾಗೂ ಶಿಕಾರಿಪುರ ಚೆಡ್ಡಿ ಗ್ಯಾಂಗಿನ ಮುಖ್ಯಸ್ಥ ಗುರುಮೂರ್ತಿಯೇ ಎಂಬುದೂ ಕೂಡ ಎಲ್ಲರಿಗೂ ಗೊತ್ತಿರುವ ರಹಸ್ಯ. ಈ ಕಾರಣಕ್ಕಾಗಿಯೇ ಯಡಿಯೂರಪ್ಪ ಕೂಡ ಶಿಕಾರಿಪುರದ ತಮ್ಮ ಮನೆ ಹಿತ್ತಲಲ್ಲೇ ಇಂತಹದ್ದೊಂದು ದೌರ್ಜನ್ಯ ನಡೆಯುತ್ತಿದ್ದರೂ ಕ್ಯಾರೆ ಎನ್ನದೇ ಬಾಯ್ಮುಚ್ಚಿಕೊಂಡಿದ್ದಾರೆ. ಇದು ಮತದಾರರ ಮೇಲಿನ ಸೇಡಿನ ರಾಜಕೀಯ ಹೊರತು ಬೇರೇನೂ ಇಲ್ಲ.



ಯಡಿಯೂರಪ್ಪ ಅಧಿಕಾರಕ್ಕೆ ಬರುವ ಮೊದಲು ತಾಲ್ಲೂಕಿನ ಹತ್ತಾರು ಸಾವಿರ ಜನ ಬಗರ್‌ಹುಕುಂ ಸಾಗುವಳಿದಾರರ ಸಮಾವೇಶ ನಡೆಸಿ, ಜಿಲ್ಲಾಧಿಕಾರಿಗಳ ಕಚೇರಿಯವರೆಗೂ ಪಾದಯಾತ್ರೆ ಬಂದು, ರೈತರ ಪರ ತಾನಿದ್ದೇನೆ ಎಂದು ಮೊಸಳೆ ಕಣ್ಣೀರು ಸುರಿಸಿದ್ದನ್ನು ಜನ ಮರೆತಿಲ್ಲ, ಈಗ ಅದೇ ಯಡ್ಡಿ ಭೂಮಿ ಕೇಳಿದ ದಲಿತರನ್ನು ಮಕ್ಕಳು, ಮರಿ ಸಮೇತ ಜೈಲಿಗೆ ದೂಡಿದ್ದಾನೆ.

ದಲಿತರ ಸಿಟ್ಟು ರಟ್ಟೆಗೆ ಬಂದರೆ ಏನಾಗುತ್ತೆ ಅಂತ ಪ್ರಾಯಶಃ ಯಡ್ಡಿಗೆ ಗೊತ್ತಿಲ್ಲ.

● ಎನ್. ಶಿವಾನಂದ ಕುಗ್ವೆ

ಮೈಸೂರು ಮರೀಗೌಡನ ಹೆಂಗಸರ ಹಗರಣ


ಈ ಕಾಂಗ್ರೆಸ್‌ನವರಿಗೆ ಕೈಯಲ್ಲಿ ಅಧಿಕಾರ ಇಲ್ಲದಿದ್ದಾಗ ಸುಮ್ಮನೆ ಕೂತಿರಲು ಆಗಲ್ಲ ಅಂತ ಕಾಣುತ್ತೆ, ಹಾಗಾಗಿ ನಾನಾ ವೆರೈಟಿಯ ಹಗರಣಗಳನ್ನು ಮಾಡಿಕೊಳ್ಳುತ್ತಿರುತ್ತವೆ. ಇದಕ್ಕೆ ಲೇಟೆಸ್ಟ್ ಉದಾಹರಣೆ ಅಂದರೆ ಮೈಸೂರು ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷ ಮರೀಗೌಡ.

ಕಳೆದ ಭಾನುವಾರ ರಾತ್ರಿ ಮೈಸೂರಿನ ಹೆಬ್ಬಾಳ ಬಡಾವಣೆಯ ಸಂಕ್ರಾಂತಿ ಸರ್ಕಲ್ ಹತ್ತಿರ ಇರುವ ಮನೆಯೊಂದರಲ್ಲಿ ಇಬ್ಬರು ಹೆಂಗಸರ ಜಗಳದಲ್ಲಿ ಸಿಕ್ಕಿಕೊಂಡ ಮರೀಗೌಡನ ಶರ್ಟು ಹರಿದು, ಮೊಬೈಲ್ ಮುರಿದು ರಂಪಾಟವಾಗಿದೆ.

ವಿಷಯ ಏನಪ್ಪ ಅಂದರೆ ಈ ಇಬ್ಬರು ಹೆಂಗಸರ ಪೈಕಿ ಜಯಶ್ರೀ ಎಂಬಾಕೆ ಸಾಕ್ಷಾತ್ ಮರೀಗೌಡನ 2ನೇ ಹೆಂಡತಿ. ಇನ್ನೊಬ್ಬ ಮಹಿಳಾಮಣಿ ಅನ್ನಪೂರ್ಣ ಎಂದು. ಈಕೆಗೆ ಹೆಸರಿಗೆ ಗಂಡ ಅಂತ ಸತ್ಯನಾರಾಯಣ ಎಂಬ ಆಸಾಮಿ ಇದ್ದನಾದರೂ ಮರೀಗೌಡನೇ ಮನೆ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಎಂಬ ಪುಕಾರುಗಳಿವೆ. ಮರೀಗೌಡ ಕುರುಬರ ಪೈಕಿಯಾದರೆ ಈ ಮಹಿಳೆಯರಿಬ್ಬರೂ ಬ್ರಾಹ್ಮಣರು.

ಅವತ್ತು ಏನಾಯಿತೆಂದರೆ ಮರೀಗೌಡ ಎಂದಿನಂತೆ ರಾತ್ರಿಯೂಟಕ್ಕೆ ಅನ್ನಪೂರ್ಣಮ್ಮ ಮನೆಗೆ ಹೋಗಿದ್ದಾನೆ. ಆಗಲೇ ಅವನ ಹೆಂಡತಿ ಜಯಶ್ರೀ ದೂರದ ರಾಮಕೃಷ್ಣನಗರದಿಂದ ಧಾವಿಸಿ ಬಂದವಳೇ ಮನೆಹೊಕ್ಕು ಕದನ ಆರಂಭಿಸಿದ್ದಾಳೆ. ಮರೀಗೌಡ ಯಾರಿಗೆ ಸೇರಬೇಕು ಎಂಬ ಜಗಳ ಅದು. ಸ್ಥಳದಲ್ಲೇ ಮರೀಗೌಡನ ಬಟ್ಟೆಗಳೆಲ್ಲ ಹರಿದು ಚಿಂದಿಯಾಗಿವೆ ಅಂದರೆ ಈ ಇಬ್ಬರು ಮಹಿಳೆಯರ ಕದನ ಎಷ್ಟು ಜೋರಾಗಿ ನಡೆದಿರಬಹುದು ಊಹಿಸಿಕೊಳ್ಳಿ.

ಕೊನೆಗೆ ಈ ಜಗಳ ವಿಜಯನಗರ ಪೊಲೀಸ್



ಸ್ಟೇಷನ್ ಮೆಟ್ಟಿಲೇರಿತು. ಜಗಳವಾದಾಗ ಈ ಮರೀಗೌಡ ತನ್ನ ಹೆಂಡತಿ ಜಯಶ್ರೀ ಪರ ನಿಂತು ತನಗೆ ಏಟುಹಾಕಿಸಿದ ಎಂದು ಸಿಟ್ಟಿಗೆದ್ದಿದ್ದ ಅನ್ನಪೂರ್ಣ ಹಿಂದೆಮುಂದೆ ಯೋಚಿಸದೆ ಮರೀಗೌಡನ ಮೇಲೆ ಅತ್ಯಾಚಾರದ ಬಾಯಿಮಾತಿನ ದೂರನ್ನೇ ಹೇಳಿದಳು. ಆದರೆ ಕೊನೆಗೆ ಲಿಖಿತ ದೂರು ಕೊಡುವಾಗ ಜಯಶ್ರೀ ವಿರುದ್ಧ ಬೈದು ಹಲ್ಲೆ ಮಾಡಿದ ಆರೋಪ ಮಾಡಿದ್ದಾಳೆ. ಇನ್ಸ್‌ಪೆಕ್ಟರ್ ಅರುಣ್‌ನಾಗೇಗೌಡ ಒಲ್ಲದ ಮನಸ್ಸಿನಿಂದ ದೂರು ಪಡೆದು ಕ್ರಮ ಕೈಗೊಂಡಿದ್ದಾರೆ.

ಈ ಮರೀಗೌಡ ಮೊದಲಿನಿಂದಲೂ ಸ್ವಲ್ಪ ಕಿತಾಪತಿ ಮನುಷ್ಯ. ಹಣ, ಹೆಂಗಸರೆಂದರೆ ಸ್ವಲ್ಪ ಲೂಸಿನಂತೆ ಆಡುತ್ತಿರುತ್ತಾನೆ. ಕೆಲ ವರ್ಷಗಳ ಹಿಂದೆ 'ಜನಾಂತರಂಗ' ಪತ್ರಿಕೆಯಲ್ಲಿ ತನ್ನ ವಿರುದ್ಧ ವರದಿ ಪ್ರಕಟವಾಯಿತೆಂದು ಸಿಟ್ಟಿಗೆದ್ದು ಸಂಪಾದಕ ಲೋಕೇಶ್ ಮೊಸಳೆಗೆ ಹಲ್ಲೆ ಬೆದರಿಕೆ ಹಾಕಿದ್ದ ಇವನು. ಈಗ ನೋಡಿದರೆ ಇವನು ಸಾಕಿಕೊಂಡಿದ್ದ ಹೆಂಗಸರೇ ಶರ್ಟು–ಪ್ಯಾಂಟು ಹರಿದು ಹೋಗುವಂತೆ ಚಚ್ಚಿ ಕಳಿಸಿದ್ದಾರೆ. ಈ ಜಗಳಕ್ಕೆ ಟೀಚರ್ ಅನ್ನಪೂರ್ಣಳ ಲೋಭವೂ ಕಾರಣ ಎನ್ನಲಾಗುತ್ತಿದೆ. ಮರೀಗೌಡ ಜಿಲ್ಲಾ ಪಂಚಾಯತಿ ಅಧ್ಯಕ್ಷನಾಗಿದ್ದಾಗ ತನಗೇನೂ ಲಾಭ ಮಾಡಿಕೊಡಲಿಲ್ಲ ಎಂಬ ಆಕ್ರೋಶವೂ ಅವಳಿಗಿತ್ತಂತೆ.

ಜಿಲ್ಲಾ ಪಂಚಾಯತಿ ಅಧ್ಯಕ್ಷನಾಗಿದ್ದ ಒಬ್ಬ ನಾಯಕನಿಗೆ ಸ್ವಲ್ಪವಾದರೂ ಗಂಭೀರ ಇರಬೇಕಲ್ಲವೇ? ಈ ತರಹ ಹೆಂಗಸರ ರಂಪಾಟ ಮಾಡಿಕೊಂಡರೆ ಜನ ಏನನ್ನುತ್ತಾರೆಂದು ಯೋಚಿಸಬೇಕಲ್ಲವೆ?

■ ಕುಮಾರ್

.....ಹರಿಯುತಿರುವುದು ಮಾತ್ರ ಒಂದೇ ಖರೆ...

● ಚಂಪಾ

ಮೊನ್ನೆ ಗೌರಿ ಲಂಕೇಶ್ ಫೋನ್ ಮಾಡಿ, "ನಿಮಗೆ ಮೊದಲು ಶುಭಾಶಯ..." ಅಂದರು. ನನಗೆ ಇದೆಲ್ಲ ಅನಿರೀಕ್ಷಿತ. ಏನಾದರೂ ಲಾಟರಿ ಹೊಡೆದಿರಬಹುದೇ? ಕನ್ನಡದ 'ಜ್ಞಾನಪೀಠ'ಕ್ಕೆ ಮೂರನೆಯ ಕಾಲು ಮೂಡಿರಬಹುದೇ? "ಯಾಕ ಹೇಳ್ರಿ" ಅಂದೆ. ಅವರು "ಪಾರ್ವತೀಶ್ ಹೇಳಿದರು, ಜೂನ್ ಹದಿನೆಂಟು ನಿಮ್ಮ ಜನ್ಮ ದಿನ ಅಂತ. ನಿಮಗೀಗ..."







ಇದೊಳ್ಳೇ ಫಜೀತಿ. ಸಾಮಾನ್ಯವಾಗಿ ಯಾರಾದರೂ ಕುತೂಹಲದಿಂದ ನನ್ನ ವಯಸ್ಸು ಕೇಳಿದಾಗ ನಾನು ಮಾತು ಮರೆಸಿ ಎಲ್ಲಿಗೋ ಅವರನ್ನು ಓಡಿಸಿಕೊಂಡು ಹೋಗುತ್ತೇನೆ. ಮತ್ತೂ ಜುಲುಮೆ ಮಾಡಿದರೆ, "ಸಿಕ್ಸ್‌ಟಿ ಪ್ಲಸ್" ಅನ್ನುತ್ತೇನೆ. (ಯಾಕೆಂದರೆ ನಾನು ರಿಟೈರ್ಡ್ ಆಗಿದ್ದು ಅವರಿಗೆ ಗೊತ್ತು)

"ನಿಮ್ಮ ಹಳೇ ನೆನಪುಗಳ ಬಗ್ಗೆ, ನಡೆದುಬಂದ ದಾರಿಯ ಬಗ್ಗೆ ಒಂದು ಲೇಖನ ಬರೆದು ಕಳಿಸಿರಿ" ಅಂದರು ಗೌರಿ. ನಾನೆಂದೆ: "ನಾ ಹಳೇದನ್ನು ನೆನೆಯೋದೇ ಇಲ್ಲ, ನನ್ನ ಗಮನ ಏನಿದ್ದರೂ ಇವತ್ತಿನ ಮೇಲೆ; ನಾಳೆ-ನಾಡದಿನ ಮೇಲೆ."

ಇದೊಂದು ಅರ್ಧಸತ್ಯದ ಮಾತು ಅಷ್ಟೆ. ನಾನು ತೆವಳಿಕೊಂಡೋ ನಡೆದುಕೊಂಡೋ ಓಡಿಕೊಂಡೋ ಬಂದ ಹಾದಿ ಸುರುಳಿಸುರುಳಿಯಾಗಿ ಹಾವಿನಂತೆ ನನ್ನ ಒಳಗೇ ಮಿಸುಕಾಡುತ್ತದೆ; ಒಮ್ಮೊಮ್ಮೆ ಭುಸ್ ಅನ್ನುತ್ತದೆ. ಭೂತದ ನೆನಪಿನ ಚಿಂದಿ-ಚೀಲ ಕಟ್ಟಿಕೊಂಡೇ ವರ್ತಮಾನದ ಗಟಾರಗಳ ಗುಂಟ ಭವಿಷ್ಯದ ದಾರಿ ಸವೆಸಬೇಕು. ನೆನಪು: ಅವಸರದಲ್ಲಿ ನಾವು ಸುತ್ತುತ್ತಲೇ ಇರುವ ದಾರದ ಉಂಡಿ. ಎಲ್ಲಿಂದ ಸುರು ಮಾಡಬೇಕು ಅನ್ನುವಂತಿಲ್ಲ; ಎಲ್ಲಿಂದಾದರೂ ಎಳೆ ಜಗ್ಗಬಹುದು.

* * * * *

ಮೊದಲು ಅಖಂಡ ಧಾರವಾಡ ಜಿಲ್ಲೆಯ, ಈಗ ಹಾವೇರಿ ಜಿಲ್ಲೆಯ, ಒಂದು ಊರು ಹತ್ತೀಮತ್ತೂರು. ನಮ್ಮ ಅವ್ವನ ಊರು. ಈಗಿನಂತೆ ತಾಯಂದಿರು ಮಕ್ಕಳ 'ಬಾಣಂತನ'ಕ್ಕಾಗಿ ಅಮೆರಿಕೆಗೆ ಹಾರುವ ದಿನಗಳಲ್ಲ ಅವು. ನಾವೆಲ್ಲ ಅವ್ವನ ತವರು ಮನೆಯಲ್ಲೇ ಹುಟ್ಟಿದವರು. ಅಪ್ಪನ ಮೊದಲ ಅಡ್ಡ ಹೆಸರು 'ಕುಲಕರ್ಣಿ'. ದತ್ತಕ ಹೋಗಿ 'ಪಾಟೀಲ' ಆದ. 'ಜಂಗಮ' ಜಾತಿ. ಹೀಗಾಗಿ ನಾನೆಂದರೆ ಏನಂತ ತಿಳಿದಿದ್ದೀರಿ? ಪಾಟೀಲ, ಕುಲಕರ್ಣಿ, ಜಂಗಮಗಳ ಕೂಡಲಸಂಗಮ! ನನಗೋ ಅವು ತ್ರಿಶೂಲದ ಮೂರು ಹಲ್ಲುಗಳು!

ಅಪ್ಪ ಆಗಿನ ಕಾಲದಲ್ಲೇ ಧಾರವಾಡದ ಕರ್ನಾಟಕ ಕಾಲೇಜಿನ ವಿದ್ಯಾರ್ಥಿ. ಏನೋ ಜಗಳ ಮಾಡಿಕೊಂಡು ಕಾಲೇಜು ಬಿಟ್ಟು ಬಂದವನು ಹಾವೇರಿಯಲ್ಲಿ 'ಇಂಗ್ಲಿಷ್ ಟ್ಯುಟೋರಿಯಲ್' ಪ್ರಾರಂಭಿಸಿದ. (ಹೀಗಾಗಿ ನಮ್ಮಪ್ಪನೇ ನನ್ನ ಪ್ರಥಮ ಗುರು-ಇಂಗ್ಲಿಷ್‌ನಲ್ಲಿ; ಕನ್ನಡದಲ್ಲಿ; ಜಗಳ ಗಂಟತನದಲ್ಲಿ) ಅವ್ವನದು ಮುಲ್ಕಿ ಪರೀಕ್ಷೆಯತನಕ ಓದು. ಚಂದಾಗಿ ಸೋಬಾನ, ಮಂಗಳಾರತಿ ಪದ ಹಾಡುತ್ತಿದ್ದಳು. ನಮ್ಮ ಓದು-ಬರಹದ ದೇಖರೇಖಿ ಅವಳದೇ.

ನಲವತ್ತೆರಡರ ಚಳವಳಿಯ ಕಾಲವದು. ಅಪ್ಪನೂ ಹಳೇ ಕಾಂಗ್ರೆಸ್ ಮನುಷ್ಯ. ಆ ಭಾಗದ ಚಳವಳಿಗಾರರು-(ಮೈಲಾರ ಮಾದೇವಪ್ಪ, ಹಳ್ಳಿಗೇರಿ, ನೆಸ್ವಿ, ಸರದಾರ ವೀರನಗೌಡ ಮುಂ) -ನಮ್ಮ ಮನೆಗೆ ಕರೆಯದೆ ಬಂದ ಅತಿಥಿಗಳು. ಸರೋರಾತ್ರಿಗೆ ಬಂದರೂ ನಮ್ಮವ್ವ ರೊಟ್ಟಿ ಬಡಿದು ಅವರಿಗೆಲ್ಲ ಊಟ ಹಾಕುತ್ತಿದ್ದಳು.

ಚಳವಳಿ ಮಂದಿ ನಮ್ಮೂರಿನ ಚಾವಡಿ ಸುಟ್ಟರು. ನನಗೆ ಆಗ ಮೂರು ವರ್ಷ. ಯಾರದೋ ಬಗಲಲ್ಲಿ ಕುಂತು ನಾನು ಕಂಡ ಆ ಬೆಂಕಿ ಇವತ್ತಿಗೂ ನನ್ನೊಡಲ ಪಾತಾಳದಲ್ಲಿ ನಿಗಿನಿಗಿ ಉರಿಯುತ್ತಿದೆ.

* * * * *

ನೀ ಹಿಡಿದ ಹಾದಿಯಲಿ ಹೂಗಳೇ ಇರಬಹುದು;

ನನ್ನನ್ನು ಆ ದಾರಿಗೆಳೆಯಬೇಡ.

ನನ್ನ ಹಾಡಿನ ಹಳ್ಳ ಎಲ್ಲಿ ಹೊರಳುವದೇನೋ!

ಗಟ್ಟಿನ ಗಟಾರವನು ಕಟ್ಟಬೇಡ.

ಇದು ೧೯೬೦ರಲ್ಲಿ (ನಾನಾಗ ಬಿ.ಎ. ಅಂತಿಮ ವಿದ್ಯಾರ್ಥಿ) ಬರೆದ 'ಬೇಡ' ಎಂಬ ಕವನದ ಸಾಲುಗಳು. ವ್ಯಗ್ರ ಕ್ಷಣವೊಂದರ ಈ ಭಾವ ನನ್ನೊಳಗೆ ಗುಪ್ತಗಾಮಿನಿಯಾಗಿ ಹರಿಯುತ್ತಲೇ ನನ್ನ ಬದುಕಿಗೊಂದು ಲಯವನ್ನು, ಧ್ವನಿಯನ್ನು ಕೊಟ್ಟಿರಬಹುದೇ?

ನಮ್ಮೂರಲ್ಲಿ ಕನ್ನಡ ಶಾಲೆ ಮುಗಿಸಿ, ಹಾವೇರಿಯ ಮುನ್ಸಿಪಲ್ ಹೈಸ್ಕೂಲಿನಿಂದ ಆಗಿನ ಮುಂಬೈ ಪ್ರಾಂತದ ಎಸ್ಸೆಸ್ಸೆಲ್ಸಿ ಬೋರ್ಡಿಗೆ ರ್‍ಯಾಂಕ್ ಗಳಿಸಿ, ಧಾರವಾಡದ ಕರ್ನಾಟಕ ಕಾಲೇಜಿಗೆ ಬಂದವ ನಾನು. ಸಮದೂ ಸ್ವಭಾವ, ಮೈಕೈ ಗಟ್ಟಿ ಇಲ್ಲ, ಉಡಾಳರ ದಬ್ಬಾಳಿಕೆ ಸುಮ್ಮನೇ ನುಂಗುತ್ತಿದ್ದೆ. ಆದರೆ ಹಾವೇರಿಯಲ್ಲೇ "ನನ್ನ ಶಕ್ತಿ ಇರುವುದು ಅಕ್ಷರದಲ್ಲಿ" ಎಂಬ ಅರಿವು ಮೂಡಿಸಿಕೊಂಡು, ಧಾರವಾಡಕ್ಕೆ ಬಂದೊಡನೆ ಆ ಅರಿವಿನ ಸ್ಫೋಟಕ್ಕೆ ಪ್ರಯೋಗಾಲಯಗಳನ್ನು ಅರಸತೊಡಗಿದೆ. ನಾನೊಬ್ಬ ದೊಡ್ಡ ಐಎಎಸ್ ಸಾಹೇಬನಾಗಬೇಕೆಂಬ ನಮ್ಮ ಅಪ್ಪನ ಕನಸುಗಳ ವಿರುದ್ಧ ಬಂಡಾಯವೆದ್ದು 'ಇಂಗ್ಲಿಷ್ ಸಾಹಿತ್ಯ'ದ ವಿದ್ಯಾರ್ಥಿಯಾದೆ. ಕಲಿತ ಕಾಲೇಜಿನಲ್ಲಿಯೇ ಪ್ರಾಧ್ಯಾಪಕ. ಅನಂತರ ಹೈದ್ರಾಬಾದ್. ಅಲ್ಲಿಂದ ಇಂಗ್ಲೆಂಡ್. ಮರಳಿ ಧಾರವಾಡಕ್ಕೆ- ಈಗ ಯುನಿವರ್ಸಿಟಿ ಪ್ರೊಫೆಸರ್ ಆಗಿ. (ಸದ್ಯ ಬೆಂಗಳೂರಿಗ)

ನಾನು ಧಾರವಾಡ ಸೇರಿದ್ದು ೧೯೫೬ರಲ್ಲಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನನ್ನಾಗಿ ಪಟೇಲರು ನೇಮಿಸಿದಾಗ, ಧಾರವಾಡ ಬಿಟ್ಟಿದ್ದು ೧೯೯೬ರಲ್ಲಿ. ಅಖಂಡ ನಲವತ್ತು ವರ್ಷ- ಧಾರವಾಡ ನನ್ನ ಬದುಕನ್ನು ಆವರಿಸಿಕೊಂಡಿದೆ. ಪ್ರೀತಿ ಪ್ರೇಮ ಪ್ರಣಯಗಳ ತಾಣವಾಗಿ; ಕಾವ್ಯ-ನಾಟಕಗಳ ಕಲಾಕ್ಷೇತ್ರವಾಗಿ; ಸಂಘರ್ಷಗಳ ರಣರಂಗವಾಗಿ.

* * * * *

ಒಂದೇ, ಎರಡೇ ಸಾಲುಸಾಲಾಗಿ "ಚಳವಳಿಗಳು!

ಹೈದ್ರಾಬಾದಿನಿಂದ ಮರಳಿದಾಗ ಕವಿಯೊಂದಿಗೆ ನಾಟಕಕಾರನೂ ಆಗಿದ್ದೆ. ಅಂತರಂಗ ಮ್ಯಾಳಗಳ ಮೂಲಕ ರಂಗಚಳವಳಿ. ಇಂಗ್ಲೆಂಡಿನ ಲೀಡ್ ಯೂನಿವರ್ಸಿಟಿಯಿಂದ ಮರಳಿದಾಗ ಕೆ.ಎಂ.ಶಂಕರಪ್ಪ ನಂಜುಂಡಸ್ವಾಮಿ, ಲಂಕೇಶ್, ತೇಜಸ್ವಿ ಎಂಬ ಚಂಡಾಳ ಚೌಕಳಿಯ ಸಂಗತಿ-ಸಹವಾಸದಿಂದಾಗಿ ಸಮಾಜವಾದಿ ಯುವಜನ ಸಭಾ, ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ಮೂಲಕ ಜಾತಿ ವಿನಾಶ ಆಂದೋಲನ; ಜೇಪಿ ಚಳವಳಿ; ತುರ್ತು ಪರಿಸ್ಥಿತಿಯಲ್ಲಿ ಜೈಲುವಾಸ; ನಂತರ ಬಂಡಾಯ ಸಾಹಿತ್ಯ ಚಳವಳಿ; ಮಂಡಲ್ ವರದಿ ಚಳವಳಿ. ಕೊನೆಗೆ ಈ ಚಳವಳಿಯ ವಾದ್ಯವೃಂದ ತಾರಕ್ಕೇರಿದ್ದು ೧೯೮೦ರ ಪ್ರಾರಂಭದ ಗೋಕಾಕ್ ಚಳವಳಿಯಲ್ಲಿ.

ನನ್ನ ಪ್ರೀತಿಯ ಕಾವ್ಯಗುರು-ವಿ.ಕೃ. ಗೋಕಾಕರು. ನನ್ನ ಮೊಟ್ಟಮೊದಲ ಸಂಕಲನ 'ಬಾನುಲಿ'ಗೆ ಮುನ್ನುಡಿ ಬರೆದ ಅವರು ನನಗಾಗಿ ಒಂದು ಕವನವನ್ನೇ ಹೊಸೆದಿದ್ದರು. ಅದೇ ಗುರುವಿನ ಎದುರಿಗೆ ನಿಂತು ಪಟ್ಟಶಿಷ್ಯನಾದ ನಾನು 'ಗೋಕಾಕ್-ಗೋಬ್ಯಾಕ್' ಅಂತ ಕೂಗಿದ್ದೆ. ನಗುನಗುತ್ತಲೇ ಆ ಕೂಗನ್ನು ಸ್ವೀಕರಿಸಿದ ಆ ಮಹಾಜೀವ ತಮ್ಮ ಜೀವಿತದ ಕೊನೆಯ ದಿನದವರೆಗೂ ನನ್ನ ಮೇಲೆ ಪ್ರೀತಿಯ ಮಳೆಯನ್ನೇ ಸುರಿಸಿದರು.

* * * * *

ಈ ಚಳವಳಿಯ ಜೊತೆಗೆ ಮತ್ತೊಂದು ಚಳವಳಿಯೇ ಆಗಿ ನನ್ನನ್ನು ಪುಟ್ಟಾಪೂರ ತೊಡಗಿಸಿಕೊಂಡದ್ದು 'ಸಂಕ್ರಮಣ' ಪತ್ರಿಕೆ. ಮೊದಲ ೧೧ ವರ್ಷ ನಾವು ಮೂವರಿದ್ದೆವು. ಗಿರಡ್ಡಿ, ಪಟ್ಟಣಶೆಟ್ಟಿ ಮತ್ತು ನಾನು. ಈಗ ನನ್ನೊಂದಿಗೆ ನನ್ನ ಇಡೀ ಕುಟುಂಬವಿದೆ. ಪತ್ರಿಕೆ ಸುರುವಾದದ್ದು ೧೯೬೪ರಲ್ಲಿ; ನನ್ನ ಅಕ್ಕನ ಮಗಳು ನೀಲಾ ನನಗೆ ಹೆಂಡತಿಯಾಗಿ 'ಗಂಟು ಬಿದ್ದದ್ದು' ೧೯೬೫ರಲ್ಲಿ (ಇದು 'ಅವಳದೇ ಶಬ್ದ!). ಇವೆರಡೂ ಬ್ರಹ್ಮಗಂಟುಗಳೇ!

"ನೀವು ಇಂಗ್ಲಿಷ್ ಪ್ರೊಫೆಸರಾಗಿ ಕನ್ನಡ ಕನ್ನಡ ಅಂತ ಯಾಕೆ ಬಡಕೊಳ್ಳುತ್ತೀರ?" ಅಂತ ಬಹಳ ಜನ ಕೇಳುತ್ತಾರೆ. ನಾನು ಎಷ್ಟೋ ವರ್ಷಗಳಿಂದ ಹೇಳುತ್ತ ಬಂದ ಉತ್ತರ: "ನೋಡ್ರೆಪ್ಪ, ಇಂಗ್ಲಿಷ್ ನನ್ನ ಉಪಜೀವನ; ಕನ್ನಡ ನನ್ನ ಜೀವನ." ತನ್ನ ನುಡಿಗೆ, ತನ್ನ ನೆಲಕ್ಕೆ ಬದ್ಧನಾಗದವ ಬದುಕಿನಲ್ಲಿ ಯಾವುದಕ್ಕೂ ಬದ್ಧನಾಗಲಾರ. ನಾನೊಬ್ಬ ಒಳ್ಳೆಯ ಇಂಗ್ಲಿಷ್ ಪ್ರಾಧ್ಯಾಪಕನೆಂದು ನನ್ನ ಸಾವಿರಾರು ವಿದ್ಯಾರ್ಥಿಗಳು ನೆನೆಯುತ್ತಾರೆ. ಅವರನ್ನು ಸಾಹಿತ್ಯದಲ್ಲಿ, ರಂಗಭೂಮಿಯಲ್ಲಿ, ಜನಪರ ಚಳವಳಿಗಳಲ್ಲಿ ತೊಡಗುವಂತೆ ಮಾಡಿ ಅವರೊಂದಿಗೇ ಸಂಗಾತಿಯಾಗಿ ಬೆಳೆದ ಮನುಷ್ಯ ನಾನು. ಮನುಷ್ಯರ ಸ್ವಭಾವಜನ್ಯ ಹಾಗೂ ಪರಿಸರಜನ್ಯ ರೋಪಗಳ ಬಗ್ಗೆ ನಾನು ಪಾಲುಗೊಂಡ ಅನೇಕ ಸಮಷ್ಟಿ ಸ್ವರೂಪದ ಚಳವಳಿಗಳ ವೈಫಲ್ಯದ ಬಗ್ಗೆ ನನಗೆ ನೋವಿದೆ. ಉತ್ತರವೇ ಸಿಗದ ನೂರಾರು ಪ್ರಶ್ನೆಗಳು ನನ್ನೊಳಗಿವೆ. ಆದರೂ ಕತ್ತಲೆ ಕಳೆದು ನಾಳೆ ಬೆಳಗು ಹರಿಯುತ್ತದೆ ಎಂಬ ಅಗಾಧ ನಂಬಿಕೆಯೂ ನನಗಿದೆ.



ಚಂಪಾ-20

* * * * *

ನನ್ನ ಸ್ವಭಾವದ ಒಂದು ಲಕ್ಷಣವಾಗಿಯೇ ಬೆಳೆದ ವ್ಯಂಗ್ಯ-ವಿಡಂಬನೆಯಿಂದಾಗಿ ನಾನು ಬಹಳ ಕಳಕೊಂಡಿದ್ದೇನೆ. ನನ್ನ ಅಕ್ಷರಗಳ ಮೂಲಕ ನಾನು ಕಳಕೊಂಡವರ ಪಟ್ಟಿ ಇನ್ನೂ ಬೆಳೆಯುತ್ತಲೇ ಇದೆ. ಆದರೆ ನಂಬಿದ ಮೌಲ್ಯಗಳಿಗಾಗಿ ಎಂಥವರನ್ನಾದರೂ ಎದುರು ಹಾಕಿಕೊಳ್ಳುವ ಛಾತಿ ನನಗಿದೆ ಎಂದೇ ನೂರಾರು ಜೀವಗಳು ನನ್ನನ್ನು ಮೌನವಾಗಿಯೇ ಪ್ರೀತಿಸುತ್ತವೆ ಎಂಬ ಸತ್ಯವೂ ನನಗೆ ಗೊತ್ತು. ನಾನು ವಹಿಸಿಕೊಂಡ ಜವಾಬ್ದಾರಿಗಳನ್ನು (ಪ್ರಾಧಿಕಾರದ ಅಧ್ಯಕ್ಷತೆ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆ, ಇತ್ಯಾದಿ) ಸತ್ಯನಿಷ್ಠೆಯಿಂದ ನಿಭಾಯಿಸಿದ ತೃಪ್ತಿ ನನಗಿದೆ.

ಅಂದಹಾಗೆ, ನಾನು ಹುಟ್ಟಿದ ದಿನಾಂಕ ಜೂನ್ ಹದಿನೆಂಟು. ಪ್ರತಿವರ್ಷ ಬರುತ್ತದೆ, ಹೋಗುತ್ತದೆ. ನನಗೆ ಐವತ್ತು ತುಂಬಿದಾಗ, ಜೊತೆಗೇ ಸಂಕ್ರಮಣಕ್ಕೆ ೨೫ ತುಂಬಿದಾಗ, ಕೆಲವು ಕಡೆ ವಿಚಾರಸಂಕಿರಣಗಳಾಗಿದ್ದವು. ಅನಂತರದ ವರ್ಷಗಳಲ್ಲಿ ಆ ದಿನಾಂಕ ಬಂದಾಗ ನಾನು ತಪ್ಪಿಸಿಕೊಂಡು ಅಡ್ಡಾಡುತ್ತಿದ್ದೆ ಅಷ್ಟೆ. ಮನೆಯಲ್ಲೂ ಕೂಡಾ ಅವತ್ತು ಸ್ವಲ್ಪ ಬೆಲ್ಲದಡಿಗೆ. ಮುಗಿಯಿತು.

* * * * *

ಇದು ನಾನು ಹಾದುಬಂದ ಹಾದಿ. ಹಾದಿಗೆ ಕೊನೆ ಎಂಬುದಿಲ್ಲ, ಡೆಡ್ ಎಂಡ್ ಎಂಬುದು ಕೂಡಾ ಮತ್ತೊಂದು ಹಾದಿಗೆ ಹೊರಳು, ಅಷ್ಟೆ. ಆದರೆ ಸ್ವಲ್ಪ ಹೊರಳಿ ನೋಡಿದಾಗ ನನ್ನೊಳಗೆ ಉಂಟಾದ ಅಗಾಧ ವ್ಯತ್ಯಾಸ ಕಂಡು ನನಗೇ ಅಚ್ಚರಿ. 'ನಿನ್ನ ಹೊಗಳಿಕೆ ಬೇಡ, ನಿನ್ನ ತೆಗಳಿಕೆ ಬೇಡ, ನಿನ್ನದೆಂಬುದು ನನಗೆ ಯಾವುದೂ ಬೇಡ' ಎಂದು ನಾನು ಇಪ್ಪತ್ತನೆಯ ವಯಸ್ಸಿನಲ್ಲಿ ಬರೆದಿದ್ದೆ. ಅದೇ ಭಾವ ಮುಂದುವರೆದಿದ್ದರೆ ನಾನೊಬ್ಬ ಮಹಾ ಸಿನಿಕನಾಗಿ ಸತ್ತುಹೋಗುತ್ತಿದ್ದೆ. ಆದರೆ ಅಂತರಾಳದ ಜೀವನ ಪ್ರೀತಿಯ ಮಿಡಿತ ಜಾಗೃತಗೊಂಡು ನನ್ನನ್ನು ಜೀವಂತವಾಗಿಟ್ಟಿವೆ.

ಬದುಕಿನ ರಹಸ್ಯವನ್ನು ಹುಡುಕಿಕೊಂಡು, ನನ್ನ ವಾರಿಗೆಯ ಕೆಲವರಂತೆ ನಾನು ಇತಿಹಾಸ, ಪುರಾಣಗಳ ಕಡೆ ಧಾವಿಸಿದವನಲ್ಲ, ನಿತ್ಯ ಬದುಕಿನ ನಿರಂತರ ವೈರುಧ್ಯಗಳೇ ನನ್ನ ಅಕ್ಷರಲೋಕದ ಜೀವದ್ರವ್ಯ. ನಮ್ಮೂರಿನ ವಿಳುಗುಡ್ಡಗಳ 'ಭೂಗರ್ಭದ ಮೌನದಲ್ಲಿ ಜುಮ್ಮೆನ್ನುತ' ಹರಿಯುತ್ತಿರುವ ಶಾಲ್ಮಲೆಯ ಹಾಗೆ ಈ ಜೀವಪ್ರೀತಿ:

ಉಗಮವೆಲ್ಲೋ ... ನಿನ್ನ ಸಂಗಮವೆಲ್ಲೋ
ನೀನು ಹರಿಯುತಿ... ಮಾತ್ರ ಒಂದೇ ಖರೆ.

ಬಹುಶಃ

ನಾನು ಬದುಕಬೇಕೆಂದಿರುವ ಬದುಕಿನಂತೆ
ನಾನು ಬರೆಯಬೇಕೆಂದಿರುವ ಕಾವ್ಯದ ...

ಅಸಂಗತವನ್ನು ಅಸಂಗತದಿಂದಲೇ ಎದುರಿಸಬೇಕೆಂದು ನನ್ನ ಕಾಣ್ಕೆ : ಅಂಥದ್ದೊಂದು ಅಸಂಗತ ಇದು:

ಪ್ರೀತಿ ಇಲ್ಲದೆ
ನಾನು ಏನನ್ನೂ ಮಾಡಲಾರೆ:
ದ್ವೇಷವನ್ನೂ ಕೂಡ.

ಚಂಪಾಗೆ ಎಪ್ಪತ್ತು....

ಕನ್ನಡ ಸಾಂಸ್ಕೃತಿಕ ಲೋಕದ ಮುಖ್ಯರಲ್ಲಿ ಒಬ್ಬರಾಗಿರುವ ಚಂಪಾ ಅವರಿಗೆ ಎಪ್ಪತ್ತು ವರ್ಷ ತುಂಬಿದೆ. ಅವರ ಬಗ್ಗೆ ಮೂರು ಪುಟದ ವೈವಿಧ್ಯಮಯ ಬರಹಗಳು ಇಲ್ಲಿವೆ.

ಕನ್ನಡ ಸಾಹಿತ್ಯವನ್ನು ಮತ್ತು ಸಾಂಸ ತಿಕ ಬದುಕನ್ನು ಸಮೃದ್ಧಗೊಳಿಸಿರುವ ಪ್ರಮುಖರಲ್ಲಿ ಚಂಪಾ ಕೂಡಾ ಒಬ್ಬರು. ಚಂಪಾ ಜೊತೆ ಭಿನ್ನಾಭಿಪ್ರಾಯವಿರುವವರು, ಜಗಳವಾಡಿರುವವರು ಅನೇಕರಿರಬಹುದು. ಆದರೆ ಅಷ್ಟು ಮಾತ್ರಕ್ಕೆ ಅವರ ಕೊಡುಗೆ ಮತ್ತು ಪ್ರಸ್ತುತತೆ ನಗಣ್ಯವಾಗಿ ಬಿಡುವುದಿಲ್ಲ.

ಇಲ್ಲಿ ಎಪ್ಪತ್ತು ತಲುಪಿದ ಚಂಪಾರ ಬರಹ, ಬಂಜಗೆರೆ ಜಯಪ್ರಕಾಶ್, ಸಿದ್ಧನಗೌಡ ಪಾಟೀಲರ ಲೇಖನಗಳಿವೆ. ಮೈಸೂರಿನ ಕವಿ ಡಾ. ರವಿಯ ಒಂದೆರಡು ಹೈಕುಗಳಿವೆ. ಜೊತೆಗೆ ಚಂಪಾರ ಹಿಂದಿನ ಬರಹಗಳ ಹಲವು ಆಯ್ದ ಪ್ಯಾರಾಗಳಿವೆ ಚಂಪಾಯಣದಲ್ಲಿ....

ಚಂ.ಪಾಟೀಲ

'ಚಂಪಾ' ಹೆಸರಿನ ಚಂದ್ರಶೇಖರ ಪಾಟೀಲರೆಂದರೆ ದೆವ್ವವನ್ನು ಕಂಡವರಂತೆ ಓಡಿಹೋಗುವ ಶೂದ್ರರೂ, ಯಜ್ಞವನ್ನ ಕುಲಗೆಡಿಸಲು ಬಂದ ರಾಕ್ಷಸನನ್ನ ನೋಡಿದಂತೆ ಬಾಯಿಬಾಯಿ ಬಡಿದುಕೊಳ್ಳುವ ಬ್ರಾಹ್ಮಣರೂ ನಮ್ಮಲ್ಲಿ ಬಹಳ ಜನರಿದ್ದಾರೆ; ಆದರೆ ಈತ ತನ್ನ ಅರ್ಥಪೂರ್ಣ ಚಟುವಟಿಕೆಯಿಂದ, ಕೆಲವೊಮ್ಮೆ ಸುಮ್ಮನೇ ಎತ್ತರದ ಗಂಟಲಲ್ಲಿ ಕೂಗು ಹಾಕಿ, ಕೇಕೆ ಹಾಕಿ ರೇಗಿ ಅಥವಾ ನಕ್ಕು ನಡೆಸುವ ಕೆಲಸಗಳು ಒಟ್ಟಾರೆ ಜನತೆಗೆ ಒಳ್ಳೆಯದು ಮಾಡುತ್ತವೆ.

ಎಲ್ಲರೂ ಉಸಿರೆತ್ತಲು ಹಿಂಜರಿಯುತ್ತಿದ್ದಾಗ ಸಾಯಿಬಾಬಾ ಭಾವಚಿತ್ರಕ್ಕೆ ರಸ್ತೆಯಲ್ಲಿ ಚಪ್ಪಲಿ ಸೇವೆ ಸಲ್ಲಿಸಿದವರು, ತುರ್ತುಸ್ಥಿತಿಯಲ್ಲಿ ಜೈಲಿಗೆ ಹೋಗಿ ಡೈರಿ ಬರೆದು ಹೊರಬಂದು ವ್ಯವಸ್ಥೆಯ ವಿರುದ್ಧ ನಕ್ಕವರು, ಕರ್ನಾಟಕದಲ್ಲಿ ಎಲ್ಲಿ ವಿಚಾರವಾದದ ಸೊಲ್ಲಿದ್ದರೂ ಅಲ್ಲಿ ಧ್ವನಿವರ್ಧಕ ಇಟ್ಟು ನಿಲ್ಲುವವರು ನಮ್ಮ ಪಾಟೀಲ.



ಧಾರವಾಡದಲ್ಲಿ ಪಾಟೀಲ ಗೋಕಾಕ್ ವರದಿ ಪರವಾಗಿ ಎಬ್ಬಿಸಿರುವ ಗಲಾಟೆ ಗೋಕಾಕ್ ವರದಿಗಿಂತ ಮುಂದೆ ಹೋಗಿ ಸಂಘಟನೆಗೆ ಹಾದಿಯಾಗುವ ರೀತಿಯಲ್ಲಿದೆ; ಅಂದ ಹಾಗೆ ಗೋಕಾಕ್ ಶಿಷ್ಯನಾದ ಈತ ಗೋಕಾಕ್ ವರದಿ ಸರಿಯಾಗಿ ರೂಪುಗೊಳ್ಳುವಂತೆ ರೇಗಿದ್ದು ನಿಮಗೆ ನೆನಪಿರಬಹುದು.

● ಪಿ. ಲಂಕೇಶ್, ಏಪ್ರಿಲ್ 18,1982

ಹಿಡಿದ ಕೊಡೆ ಬದಲಾದವು ಆದರೆ ಕೈ ಬದಲಾಗಲಿಲ್ಲ'

'ಜಗಳಾಟಾನೂ ಆಟಾನಾ' ಎನ್ನುತ್ತದೆ ಚಂಪಾ ಬರೆದ ...ಡೆಗಳು' ನಾಟಕದ ಒಂದು ಪಾತ್ರ. ಆ ಪಾತ್ರ ಹೇಳುವ ...ಗೆಯೇ ಆ ಪಾತ್ರ ನಿರ್ಮಿಸಿರುವ ಲೇಖಕ ಕೂಡ ...ಗಳವನ್ನು ಆಟದಂತೆಯೇ ಆಡುವವರು. 'ಕೊಡೆಗಳು' ...ಟಕದಲ್ಲಿ ಇರುವುದು ಎರಡೇ ಪಾತ್ರಗಳು. ದೃಶ್ಯ ಬದ...ವಣೆ ಕೂಡ ಕಮ್ಮಿ. ಅವುಗಳು ಮಾತನಾಡುತ್ತಾ, ...ಡುತ್ತಾ ನಿರ್ಮಿಸುವ ಅಸಂಗತ ಸಂಭಾಷಣಾ ಲೋಕ, ...ಮಾತುಗಳು ಹೊರಡಿಸುತ್ತಾ ಸಾಗುವ ಅಸಂಗತವಲ್ಲದ ...ರ್ಥಗಳು, ಮಾತಿನ ಧಾಟಿ, ವ್ಯಂಗ್ಯದ ಹರಿತ, ...ಮಾನ್ಯವಾಗಿ ನಾವು 'ಟಿಟ್ಟಿ' ಎಂದು ಕರೆಯುವ ಆದರೆ ...ಷ್ಟು ಮಾತ್ರವೇ ಅಲ್ಲದ ನಗಿಸುವ ಹಾಗೆಯೇ ...ಲೋಚನೆಗೆ ಹಚ್ಚುವ ನಾಟಕ ಅದು.

ಅದರಲ್ಲಿನ ಮುಚ್ಚಿದ ಕೊಡೆ ಪಾತ್ರ ಹೇಳುತ್ತದೆ ...ಡಿದ ಕೈ ಬದಲಾದವು ಆದರೆ ಕೊಡೆ ಬದಲಾಗಲಿಲ್ಲ'. ...ಚ್ಚಿದ ಕೊಡೆಯ ಪಾತ್ರ ಹೇಳುತ್ತದೆ 'ಹಿಡಿದ ಕೊಡೆ ...ದಲಾದವು ಆದರೆ ಕೈ ಬದಲಾಗಲಿಲ್ಲ'. ಎರಡು ಪಾತ್ರಗಳ ...ವಿಕೆಯಲ್ಲೂ ಸ್ಥಾವರವಾದ ಅಂಶವೊಂದಿದೆ. ಹಾಗೆಯೇ ...ಗಮವಾದ ಅಂಶವೂ ಇದೆ.

ನೋಡ-ನೋಡುತ್ತಲೇ ಅಥವಾ ಆಡ-ಆಡುತ್ತಲೇ ...ಪಾ ಅವರಿಗೆ ೭೦ ವರ್ಷ ತುಂಬಿದೆ. ಈ

ಚಂಪಾ-70



...ದರ್ಭದಲ್ಲಿ ಅವರ ಸಾಮಾಜಿಕ ಕ್ರಿಯಾಶೀಲತೆಯ ... ಬರೆಯುವಾಗ ನನಗೆ ಅವರ ಕೊಡೆಗಳು ನಾಟಕದ ...ಗಳಾಟಾನೂ ಆಟಾನಾ' ಹಾಗೂ 'ಹಿಡಿದ ಕೊಡೆ ...ದಲಾದವು ಆದರೆ ಕೈ ಬದಲಾಗಲಿಲ್ಲ' ಎಂಬ ಎರಡು ...ತುಗಳು ರೂಪಕಗಳಂತೆ ಕಾಣುತ್ತಿವೆ.


... ಚಂಪಾ ಜೊತೆ ಜಗಳವಾಡುವುದು ಸುಲಭ. ನೀವೇ ...ರ್ಪಡಿಸಿದ್ದ ಸಭೆಗೆ ಬಂದು ಅಥವಾ ನಿಮ್ಮದೇ ಪತ್ರಿಕೆಯಲ್ಲಿ ...ದು ಅವರು ಜಗಳ ತೆಗೆಯಬಲ್ಲರು. ಅವರಿಗೆ ಅದು ...ಮೂಲಿ. ಧಾರವಾಡ ಸೀಮೆಯ ದೇಸಿ ಶೈಲಿಯಲ್ಲಿ ...ಪಾ ತಮ್ಮ ಜಗಳದ ವರಸೆ ಆರಂಭಿಸಿದರೆ ಸಾಕು. ...ಗಳಾಟವೂ ಆಟವಾಗುವ ರೀತಿ ಗೊತ್ತಾಗುತ್ತದೆ. ಚಂಪಾ ...ಗಳದಲ್ಲಿ ಕೋಪದ ಅಂಶ ಕಡಿಮೆ. ಜಾಣ ಮಾತಿನ ...ಟ್ಟುಗಳ ಪಟ್ಟೇ ಹೆಚ್ಚು.

... ಜಗಳವನ್ನು ಅವರು ಕ್ರಿಯಾಶೀಲತೆ ಮತ್ತು ...ಭಾಗಿತ್ವದ ಅತ್ಯವಶ್ಯಕ ಅಂಶ ಎಂದು ಮನಗಂಡೇ ...ಡುತ್ತಾರೆ ಎಂದು ಹೇಳಲಿಕ್ಕೆ ಕಾರಣಗಳು ಸಿಕ್ಕುತ್ತವೆ ...ಥವಾ ಅವರ ಹುಟ್ಟಾ ಜಗಳಗಂಟಿ ಸ್ವಭಾವವನ್ನು ...ಮಾಜದ ಒಡನಾಟದಲ್ಲಿ ಪ್ರಜಾತಾಂತ್ರಿಕ ನಿಯಮಗಳ ...ಚೌಕಟ್ಟು...ಮೆಗೆ ಹಾಕಿ, ಹೀಗೆ ಜಗಳವನ್ನೊಂದು ನಿರ್ಭಿಡೆಯ ...ಕ್ತ ಸಂವಾದವನ್ನಾಗಿ ಪಳಗಿಸಿಕೊಂಡಿರಬಹುದು ಎಂದು ...ಹಿಸಲೂ ಕಾರಣಗಳು ಸಿಕ್ಕುತ್ತವೆ.

ಈ ಅರ್ಥದಲ್ಲಿ ಅವರು ಪ್ರಜಾಪ್ರಭುತ್ವಕ್ಕಾಗಿ ದನಿಯೆತ್ತಿ ...ಯು ಸೇರಿದ ಕವಿ ಮಾತ್ರವಲ್ಲ, ಪ್ರಜಾತಾಂತ್ರಿಕ ...ಲ್ಯಗಳನ್ನು ನಿತ್ಯದ ವಹಿವಾಟಿನಲ್ಲಿ ಅಳವಡಿಸಿಕೊಳ್ಳಲಿಕ್ಕಾಗಿ ...ತ ಜಗಳಾಟವನ್ನು ಮುಂದುವರಿಸಿರುವ ಸೃಜನಶೀಲ ...ಭಾವದ ವ್ಯಕ್ತಿ.

ಹೀಗಾಗಿ ಚಂಪಾ ಅವರ ಬಗ್ಗೆ ನೂರಕ್ಕೆ ನೂರರಷ್ಟು ...ಮೆಚ್ಚುಗೆಯನ್ನಾಗಲೀ, ನೂರಕ್ಕೆ ನೂರರಷ್ಟು ದೂರನ್ನಾಗಲೀ ...ಹೇಳಲು ಸಾಧ್ಯವಾಗುವುದಿಲ್ಲ. ಅವರು ನಮಗೆ ಆಪ್ತರು, ...ಪಾ ದೋಸ್ತ್ ಎಂಬ ಭಾವನೆಯನ್ನು ತುಂಬಿದ ...ಗಳಿಗೆಯೇ ತಮ್ಮ ಹರಿತ ನಾಲಿಗೆಯ ಚಾಟಿಯಿಂದ ...ಮ್ಮಿಷ್ಟದ ಮೇಲೆ ಬಾಸುಂಡೆ ಬರಿಸಬಲ್ಲರು. ಅವರಿಗೆ ...ಕೋ ನಮ್ಮ ಬಗ್ಗೆ ಅಷ್ಟಕ್ಕಷ್ಟೆ ಎಂದು ನಾವು ಎಣಿ...ಸುವ ಸಂದರ್ಭಗಳಲ್ಲಿ ನಮ್ಮ ನಿರೀಕ್ಷೆ ಸುಳ್ಳಾಗುವಂತೆ ... ಸಂಘಟಿಸಿದ ಯಾವುದಾದರೊಂದು ಸಭೆಗೋ, ...ಘಟನೆಗೋ ಬಂದು ಬೆಂಬಲ ಸೂಚಿಸಬಲ್ಲರು.

...ಇದನ್ನೆಲ್ಲ ಅವರು ಉದ್ದೇಶಪೂರ್ವಕವಾಗಿ ಮಾಡುತ್ತಾರೆ ...ನವರೂ ಇದ್ದಾರೆ. ಅವರ ಜಗಳದ ಹಾಗೆಯೇ ...ನುತವೂ ಕೂಡ ಅಸ್ಥಿರವಾದದ್ದು ಎಂದು ವಾದಿಸುವ



ಕುವೆಂಪು ಜೊತೆ ಒಡನಾಟ ೧೯೭೪

ವರೂ ಇದ್ದಾರೆ. ಅದಕ್ಕೆ ಬಹಳ ಮುಖ್ಯ ಕಾರಣ ಅವರು ಯಾವುದೇ ಗುಂಪಿನಲ್ಲಿ ಕಾಯಂ ಸದಸ್ಯತ್ವ ಪಡೆಯದಿರುವುದು. ಹಾಗೆಯೇ ಯಾರನ್ನೂ ಕಾಯಂ ಆಗಿ ದೂರವಿಡದೇ ಇರುವುದು.

ಪೇಜಾವರ ಸ್ವಾಮೀಜಿಯವರೊಂದಿಗೆ ಖಡಕ್ ಆಗಿ ಜಗಳ ತೆಗೆದಿರುತ್ತಾರೆ. ಮಾರನೇ ದಿನವೇ ಪೇಜಾವರ ಸ್ವಾಮೀಜಿ ಇವರಿಗೆ ಫೋನು ಮಾಡಿದರೆ ಯಾವುದೇ ಕಹಿಯಿಲ್ಲದೆ ಕುಶಲ ಸಂಭಾಷಣೆ ಮಾಡುತ್ತಾ, ಜೊತೆಗೆ ತಮ್ಮ ನಿಲುವುಗಳನ್ನೂ ಪ್ರತಿಪಾದಿಸಿರುತ್ತಾರೆ. ಇದು ಸಿರಿಗೆರೆ ಸ್ವಾಮೀಜಿ ಜೊತೆ ಆಗಬಹುದು ಅಥವಾ ಎಚ್.ಡಿ. ದೇವೇಗೌಡರ ಜೊತೆ ಆಗಬಹುದು. ನಾನು ಕಂಡಂತೆ ಅವರ ಜಗಳ ಹಾಗೂ ಸ್ನೇಹ ಎರಡೂ ಮೂಲಭೂತವಾಗಿ ಒಂದು ತಾತ್ವಿಕ ಸಂವಾದದ ನೆಲೆಯಲ್ಲೇ ಇರುತ್ತವೆ.

ತಮ್ಮ ಎದುರಾಳಿಯನ್ನು ಅವರು ಎದುರಿಸುವ ಬಗೆಯನ್ನು ಪರಿಶೀಲಿಸಲು ಅವರು ಬರೆದ ಹನಿಗವಿತೆಯೊಂದನ್ನು ಇಲ್ಲಿ ಉದಾಹರಿಸಬಹುದು. ಆ ಹನಿಗವಿತೆಯಲ್ಲಿ ಬರುವುದು ಗಂಡ-ಹೆಂಡಿರ ಸರಸ. ಆ ಸರಸದಲ್ಲಿ ಸ್ವಲ್ಪ ವಿರಸದ ರಸವೂ ಬೆರೆತಿರುವ ಒಂದು ಸಂದರ್ಭ. ಹೆಂಡತಿ ಹೇಳುತ್ತಾಳೆ 'ನಿಮ್ಮ ಹುಟ್ಟಿದ ಹಬ್ಬಕ್ಕೆ ನಾನು ಚಪ್ಲಿ ತಗೊಂಡಿದ್ದು ಮರೆತಿಲ್ಲ ತಾನೆ?' ಅದಕ್ಕೆ ಗಂಡ ಉತ್ತರಿಸುತ್ತಾನೆ 'ಹೆಂಗೆ ಮರೆಯಲೇ ಮಾರಾಯತಿ, ಆ ಚಪ್ಲಿ ನೋಡಿದಾಗಲೆಲ್ಲ ನಿನ್ನ ಮಾರೀನೇ ನೆಪ್ಪಾಗುತ್ತೈತಿ''.

ಮಾತಿನ ವರಸೆಯಲ್ಲಿ ಎದುರಾಳಿ ಚಿತ್ತಾಗುವಂತಹ ಪಟ್ಟುಗಳನ್ನು ಹಾಕುವುದರಲ್ಲಿ ಚಂಪಾ ನಿಸ್ಸೀಮರು. ನಮಗೆ ಯಾರನ್ನಾದರೂ ಛೇಡಿಸಬೇಕೆನಿಸಿದರೆ ಚಂಪಾ ವರಸೆಯನ್ನಷ್ಟು ಅಭ್ಯಾಸ ಮಾಡಬೇಕು ಅಂತ ಅನಿಸುವಷ್ಟು ಪ್ರಾವೀಣ್ಯತೆಯನ್ನು ಅವರು ಸಾಧಿಸಿಕೊಂಡಿದ್ದಾರೆ. ಖಾಸಗಿ ಸಂಬಂಧದ ನಿದರ್ಶನ ಹೊಂದಿರುವ 'ಚಪ್ಲಿ ತಗೊಂಡ' ಕವಿತೆ ಸಂಕೇತಿಸುತ್ತಿರುವ ಹಾಗೆಯೇ ಅವರ ಸಾಮಾಜಿಕ ವಾಗ್ವಾದಗಳ ಸರಣಿಯೂ ಇರುತ್ತದೆ.



ಎದುರಾಳಿಯನ್ನು ಅವರು ಚಿತ್ತು ಮಾಡುತ್ತಾರೆ ಆದರೆ ಖಲಾಸ್ ಮಾಡಿಬಿಡಬೇಕೆಂಬ ಹುನ್ನಾರ ಅದರೊಳಗಿರುವುದಿಲ್ಲ. ಇದರರ್ಥ ಅಸ್ತಿತ್ವದೊಳಗಿನ ದ್ವಂದ್ವಗಳನ್ನು ಅವರು ಮಾನ್ಯ ಮಾಡಿದ್ದಾರೆ. ಅವುಗಳ ನಡುವೆ ಇರುವ ಸಂಘರ್ಷವನ್ನೂ ಅವರು ಮಾನ್ಯ ಮಾಡಿದ್ದಾರೆ. ಜೊತೆಗೆ ಸಂಘರ್ಷದಿಂದ ಬರುವ ಲಾಭ-ನಷ್ಟಗಳೆರಡನ್ನೂ ಸ್ವೀಕರಿಸಬಲ್ಲರು.

ಎದುರಾಳಿಯನ್ನು ಚಿತ್ತು ಮಾಡುವುದಕ್ಕೆ ಮಾತ್ರ ಚಂಪಾ ಸೀಮಿತರಾಗುತ್ತಾರೆ, 'ಖಲಾಸ್' ಮಾಡುವ ಕ್ಲೈಮ್ಯಾಕ್ಸ್‌ಗೆ ಅವರು ಹೋಗುವುದಿಲ್ಲ, ಇದು ಅವರ ವ್ಯಕ್ತಿತ್ವದ ದುರ್ಬಲ ಅಂಶ ಎಂದು ವಿಶ್ಲೇಷಿಸುವವರಿಗೂ ಕೊರತೆಯಿಲ್ಲ, ತಾತ್ವಿಕ ಸಂಘರ್ಷ ಅಥವಾ ಸಾಮಾಜಿಕ ಸಂಘರ್ಷವನ್ನು ಅವೈಯಕ್ತಿಕ ನೆಲೆಯಲ್ಲಿ ನಡೆಸುವುದು, ಅದರಲ್ಲಿ ಪಾಲ್ಗೊಂಡ ವ್ಯಕ್ತಿಗಳ ಬಗ್ಗೆ ವ್ಯಕ್ತಿಗತವಾದ ಸಿಟ್ಟನ್ನು ಬೆಳೆಸಿಕೊಳ್ಳದಿರುವುದು ಯಾವುದೇ ಹೋರಾಟದಲ್ಲಿ ಪಕ್ವ ಮನೋಸ್ಥಿತಿಯ ಪ್ರತಿಬಿಂಬವಾಗಿರುತ್ತದೆ. ಆದರೆ ಈ ಧೋರಣೆಯನ್ನು ಪರಿಹಾರ್ಯ ವೈರುಧ್ಯಗಳ ವಿಷಯದಲ್ಲಿ ತಳೆಯಬಹುದೇ ಹೊರತು ವಿಪರ್ಯಾಸ ವೈರುಧ್ಯಗಳ ಬಗ್ಗೆ ತೋರಿಸಲಾಗದು.

ಪ್ರಜಾಪ್ರಭುತ್ವದಲ್ಲಿ ಪಕ್ಷ ಮತ್ತು ವಿಪಕ್ಷಗಳೆರಡೂ ಸದಾ ಅಸ್ತಿತ್ವದಲ್ಲಿರಲೇಬೇಕಾದ ಘಟಕಾಂಶಗಳು ಎಂಬ ನೆಲೆಯನ್ನು ತಮ್ಮ ಸಂಘರ್ಷಗಳ ಮೂಲನೆಲೆಯನ್ನಾಗಿ ತೆಗೆದುಕೊಂಡಂತಿರುವ ಚಂಪಾ ಅದಕ್ಕಾಗಿಯೇ ಜಗಳವನ್ನೂ ಒಂದು ಆಟ ಎಂದು ಆಡುತ್ತಾರೆಯೇ ಎಂದು ನಾನು ಹಲವು ಸಲ ವಿಸ್ಮಯಗೊಂಡಿದ್ದೇನೆ. ಈ ಅಂಶ ಅವರ ಮಾಗಿದ ವ್ಯಕ್ತಿತ್ವವನ್ನು ಸೂಚಿಸುವ ಹಾಗೆಯೇ ಸಂಘರ್ಷದಲ್ಲಿ ವಿನಾಕಾರಣ ನಮ್ಯತೆಯನ್ನೂ ತಂದುಬಿಡುವುದಿಲ್ಲವೇ ಎಂದೂ ತಲೆಕೆಡಿಸಿಕೊಂಡಿದ್ದೇನೆ. ಇಂತಹ ವಿಷಯಗಳ ಬಗ್ಗೆ ತಳೆಯುವ ನಿಲುವುಗಳೆಲ್ಲ ಸಾಂದರ್ಭಿಕವೋ, ವ್ಯಕ್ತಿಗತವೋ ಆಗಿಬಿಡುವ ಅಪಾಯವಿರುವುದರಿಂದ ಇದನ್ನು ಪಕ್ಕಕ್ಕಿಟ್ಟು, ಚಂಪಾ ಈ ಸಾಮಾಜಿಕ ಕ್ರಿಯಾಶೀಲತೆಯ ಸುದೀರ್ಘ ಹಾದಿಯಲ್ಲಿ ನಡೆಯುತ್ತಲೇ ಇರುವ ಬಗ್ಗೆ ನನಗಿರುವ ಅಭಿಮಾನವನ್ನು ಮಾತ್ರ ಇಲ್ಲಿ ಹೇಳಬಯಸಿದ್ದೇನೆ.

'ಕೊಡೆಗಳು' ನಾಟಕದ ಬಿಚ್ಚಿದ ಕೊಡೆ ಪಾತ್ರ ಹೇಳುವಂತೆ, ಹಿಡಿದ ಕೊಡೆ ಬದಲಾಗಿರಬಹುದು ಆದರೆ ಹಿಡಿದ ಕೈ ಬದಲಾಗಿಲ್ಲ. ಈ ಕೊಡೆ ಎಂಬುದು ಚಂಪಾ ವಿಷಯದಲ್ಲಿ ಛತ್ರಿ ಚಾಮರವಲ್ಲ. ಚಂಪಾ ಅವರು ಭಾಗವಹಿಸಿದ ಬೇರೆ ಬೇರೆ ಬಗೆಯ ಹೋರಾಟಗಳು ಮತ್ತು ವೇದಿಕೆಗಳು. ಗೋಕಾಕ್ ವರದಿ ಚಳವಳಿಯಲ್ಲಿ



ಚಂಪಾ ನಿರ್ವಹಿಸಿದ ಪಾತ್ರ ಹೇಗೂ ಸುವಿಖ್ಯಾತ. ನಾವು ಕೆಲವು ಗೆಳೆಯರು ಒಂದು ಸಂದರ್ಭದಲ್ಲಿ ಡಾ. ರಾಜ್ ಮನೆಗೆ ಹೋದಾಗ ಡಾ. ರಾಜ್ ತಟ್ಟನೆ ಗುರುತು ಹಿಡಿದದ್ದು ಚಂಪಾ ಅವರನ್ನೇ. ತಮ್ಮದೇ ಶೈಲಿಯಲ್ಲಿ ಡಾ. ರಾಜ್ 'ಓ ಹೋ ಹೋ, ನಮ್ಮ ಕನ್ನಡ ಹೋರಾಟದ ಗುರುಗಳು' ಎಂದು ಉದ್ಗರಿಸಿದ್ದರು.

ತಿಂಗಳಾನುಗಟ್ಟಲೆ ಗೋಕಾಕ್ ವರದಿ ಚಳವಳಿಯ ಕಲಾಪವನ್ನು ಮುನ್ನಡೆಸಿದವರು ಹಾಗೂ ನಿರ್ವಹಿಸಿದವರು ಚಂಪಾ. ಬಂಡಾಯ ಸಾಹಿತ್ಯ ಸಂಘಟನೆ, ವಿಚಾರವಾದಿ ಒಕ್ಕೂಟ, ಸಮಾಜವಾದಿ ಯುವಜನ ಸಭಾ, ಕನ್ನಡ ಹೋರಾಟ, ಕರ್ನಾಟಕ ವಿಕಾಸ ವೇದಿಕೆ, ಕೋಮುವಾದಿ ವಿರೋಧಿ ಆಂದೋಲನ, ರೈತ ಚಳವಳಿ, ದಲಿತರ ಹೋರಾಟ, ತುರ್ತು ಪರಿಸ್ಥಿತಿ ವಿರೋಧಿ ಹೋರಾಟ – ೧೯೬೦ ರ ದಶಕದಿಂದಲೂ ಚಂಪಾ ಅವರು ಪಾಲ್ಗೊಂಡ ಹೋರಾಟಗಳ ದೊಡ್ಡ ಪಟ್ಟಿ ತಯಾರಾಗುತ್ತದೆ ಮತ್ತು ಅದು ಇಂದಿಗೂ ಕೊನೆಗೊಳ್ಳುವುದಿಲ್ಲ.

ಕರ್ನಾಟಕ ವಿಮೋಚನಾ ರಂಗವನ್ನು ಆರಂಭಿಸುವ ಪೀಠಿಕೆಯಾಗಿ ನಾವು ೧೯೮೮ ಅಥವಾ ೮೯ರಲ್ಲಿ ಕರ್ನಾಟಕ ಸ್ವಾಭಿಮಾನಿ ಸಮಾವೇಶವನ್ನು ಧಾರವಾಡದಲ್ಲಿ ಸಂಘಟಿಸಿದ್ದೆವು. ಆಗ ಅದರಲ್ಲಿ ಭಾಗವಹಿಸಿ ಮಾತನಾಡಿದವರಲ್ಲಿ ಚಂಪಾ ಒಬ್ಬರೇ ಹೆಸರಾಂತ ಸಾಹಿತಿ ಆಗಿದ್ದರು. ಬೇರೆ ಸಾಹಿತಿಗಳಿಗೆ ನಮ್ಮ ಕನ್ನಡ ರಾಷ್ಟ್ರೀಯತೆಯ ಕಲ್ಪನೆಯ ಬಗ್ಗೆ ತಾತ್ವಿಕ ಭಿನ್ನಾಭಿಪ್ರಾಯಗಳಿದ್ದವು. ಮತ್ತೆ ಕೆಲವರಿಗೆ ನಾವು ಪ್ರತಿಪಾದಿಸುತ್ತಿದ್ದ 'ವಿಮೋಚನೆ' ಎಂಬ ಪದ ಆಗ ಉತ್ಕರ್ಷದಲ್ಲಿದ್ದ ಜಮ್ಮು ಕಾಶ್ಮೀರ ವಿಮೋಚನಾ ರಂಗ, ಅಸ್ಸಾಂ ವಿಮೋಚನಾರಂಗ ಮುಂತಾದ ಸಂಘಟನೆಗಳ ಹೋಲಿಕೆಯಲ್ಲಿದ್ದು, ಜೊತೆಗೆ ವಿಮೋಚನಾರಂಗ ಸ್ಥಾಪಿಸಲು ಹೊರಟಿದ್ದ ನಮ್ಮ ಮಾರ್ಕ್ಸ್‌ವಾದಿ - ಲೆನಿನ್‌ವಾದಿ ಹಿನ್ನೆಲೆಯ ಅರಿವೂ ಇದ್ದು ಪ್ರಭುತ್ವವನ್ನು ಎದುರು ಹಾಕಿಕೊಳ್ಳಬೇಕಾದ ಭಯವಿತ್ತು.



ಅದ್ಯಾವುದೂ ಇಲ್ಲದೆ ಸ್ವಾಭಿಮಾನಿ ಸಮಾವೇಶದಲ್ಲಿ ಪಾಲ್ಗೊಂಡು ನಾವು ಪ್ರತಿಪಾದಿಸುತ್ತಿದ್ದ 'ಕನ್ನಡ ರಾಷ್ಟ್ರೀಯತೆ' ಎಂಬ ಪರಿಕಲ್ಪನೆಯನ್ನು, ತಮ್ಮ ಸಮಾಜವಾದಿ ವಿಕೇಂದ್ರೀಕರಣ ಹಾಗೂ ಕನ್ನಡ ಸ್ವಾಭಿಮಾನದ ಹಿನ್ನೆಲೆಯಲ್ಲಿ ಬೆಂಬಲಿಸಿ ಚಂಪಾ ಮಾತನಾಡಿದ್ದರು. ಆಗಿನಿಂದ ಗಮನಿಸಿ ಹೇಳುವುದಾದರೆ ಚಂಪಾ ದಣಿವರಿಯದ ಪ್ರಜಾತಾಂತ್ರಿಕ ಹೋರಾಟಗಾರರಾಗಿ, ಸಾಮಾಜಿಕ ಕಾಳಜಿಗಳಲ್ಲಿ ದಮನಿತರ ಪರವಾದ ನಿಲುವುಗಳನ್ನು ಬೆಂಬಲಿಸುವ ಕ್ರಿಯಾಶೀಲರಾಗಿಯೇ ಮುಂದುವರಿದಿದ್ದಾರೆ.

ಸಾಹಿತ್ಯ ಸಭೆ, ಸಂಸ್ಕೃತಿ ಚಿಂತನಾ ಸಭೆ, ಸಾಮಾಜಿಕ ಸಮಸ್ಯೆಗಳ ವಿಚಾರ ಸಂಕಿರಣ, ರಾಜಕೀಯ ಪ್ರತಿಭಟನಾ ಹೋರಾಟದ ವೇದಿಕೆ ಅಥವಾ ಖಾಸಗಿ ಗೆಳೆಯರ ಬೈಠಕ್-ಹೀಗೆ 'ಬೆಸಗೊಂಡ' ಗುಂಪಿನ ಜಾಯಮಾನ ಯಾವುದೇ ಇರಲಿ, ಚಂಪಾ ಅವರು ಅದಕ್ಕೆ ಸೂಕ್ತ ಆಯ್ಕೆಯಾಗಿರುತ್ತಾರೆ. ಈ 'ಕೆಟಗರಿ' ಸಭೆಗೆ ಅವರು ಸಲ್ಲುವುದಿಲ್ಲ ಎಂಬ ಪ್ರಶ್ನೆಯೇ ಇಲ್ಲ, ಇದು ಚಂಪಾ ಸಾಮಾಜಿಕ ವ್ಯಕ್ತಿತ್ವಕ್ಕಿರುವ ಬಹುಮುಖಿ ಆಯಾಮ.


ಚಂಪಾ ತಮ್ಮ ಬರವಣಿಗೆಯನ್ನು ಆರಂಭಿಸಿದ್ದು ನವ್ಯ ಸಾಹಿತಿಯಾಗಿ. ಅದರಲ್ಲಿ ಅವರು ಯಶಸ್ವಿ ಕೃತಿಗಳನ್ನೂ ಕೊಟ್ಟರು. ನವ್ಯ ಸಾಹಿತಿಗಳಲ್ಲಿ ಅನೇಕರು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತರಾದರು. ಸಾಮಾಜಿಕ ಕ್ರಿಯಾಶೀಲ ವೇದಿಕೆಗಳಿಗೆ ಹೊಂದಿಕೊಳ್ಳದ 'ಅಸಾಮಾಜಿಕ' ವ್ಯಕ್ತಿತ್ವವನ್ನು ಮತ್ತೆ ಕೆಲವರು ಬೆಳೆಸಿಕೊಂಡರು. ಆದರೆ ಚಂಪಾ ಇವರಿಂದ ಬಹಳ ಭಿನ್ನವಾಗಿ ತಮ್ಮ ಸಾಮಾಜಿಕ ಕಾಳಜಿಗಳ ಕ್ರಿಯಾಶೀಲತೆಯನ್ನು ಬೆಳೆಸಿಕೊಂಡಿದ್ದಾರೆ. ಪ್ರವಾಸ, ಪ್ರತಿಭಟನೆ ಹಾಗೂ ಭಾಷಣ ಇವಿಲ್ಲದಿದ್ದರೆ ಚಂಪಾ ಅವರಿಗೆ ಸರಿಯಾಗಿ ನಿದ್ದೆ ಹತ್ತುವುದಿಲ್ಲ ಎಂದು ನಾವು ಖಾಸಗಿಯಾಗಿ ಜೋಕ್ ಮಾಡುವುದಿದೆ. ಈ ಜೋಕನ್ನು ಅವರಿಲ್ಲದಾಗ ಮಾತ್ರ ಮಾಡಬೇಕೆಂದೇನೂ ಇಲ್ಲ. ಅವರಿದ್ದಾಗಲೇ ಮಾಡಿದರೆ ಒಂದು ಅಪಾಯ ಮಾತ್ರ ಎದುರಾಗುತ್ತದೆ. ಆ ತಕ್ಷಣ ಅವರು ಈ ಮೊದಲೇ ಸಿದ್ಧವಿತ್ತೇನೋ ಎಂಬಷ್ಟು ಶೀಘ್ರವಾಗಿ ನಮ್ಮ ಬಗ್ಗೆ ಎಸೆಯುವ ಜೋಕನ್ನು ಎದುರಿಸಲು ತಕ್ಕ ಗುರಾಣಿ ಇರಬೇಕಷ್ಟೇ.

ಶಿವಮೊಗ್ಗದಲ್ಲಿ ಸಾಹಿತ್ಯ ಸಮ್ಮೇಳನ ನಡೆಸಿದಾಗ ಇವರು ಅದನ್ನು ಬಿಜೆಪೀಕರಣಗೊಳಿಸಲು ಸಡಿಲಬಿಟ್ಟರು ಎಂದು ನಾವು ಗೊಣಗಿಕೊಳ್ಳುತ್ತಿರುವ ಸಂದರ್ಭದಲ್ಲೇ, ಆ ಸಮ್ಮೇಳನಕ್ಕೆ ಸಂಘ ಪರಿವಾರಿಗಳ ತೀವ್ರ ವಿರೋಧ ಮತ್ತು ಆಗ ಉಪಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಮತ್ತು ಮಂತ್ರಿ ಈಶ್ವರಪ್ಪ ಅವರ ಗೈರುಹಾಜರಿ ಬೆದರಿಕೆಗೂ ಸೊಪ್ಪುಹಾಕದೆ ಗೌರಿ ಲಂಕೇಶ್ ಮತ್ತು ಕಲ್ಕುಳಿ ವಿಠಲ ಹೆಗಡೆಯವರಿದ್ದ ಗೋಷ್ಠಿಯನ್ನು ನಿರ್ವಹಿಸಿದ ರೀತಿ ಚಂಪಾ ಅವರ ಸಾಮಾಜಿಕ ಬದ್ಧತೆಗೊಂದು ಈಚಿನ ನಿದರ್ಶನ.


ಸೂಕ್ತವಾದ ನಜರೆಯೊಂದಿಗೆ ತಮ್ಮನ್ನು ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸಿಲ್ಲ ಎಂದು ಆಗಿನ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಮುನಿಸಿಕೊಂಡಾಗ, 'ಕನ್ನಡದ ಸಾಹಿತ್ಯ ಸಮ್ಮೇಳನಕ್ಕೆ ಬರಬೇಕೆಂದಿದ್ದರೆ ಮುಖ್ಯಮಂತ್ರಿಗಳು ಬರುತ್ತಾರೆ. ಅವರು ಬರದಿದ್ದರೂ ಸಾಹಿತ್ಯ ಸಮ್ಮೇಳನ ನಡೆಯುತ್ತದೆ' ಎಂಬ ಹೇಳಿಕೆ ನೀಡಿ, ಸಾಹಿತ್ಯ ಸಮ್ಮೇಳನದ ಮಟ್ಟಿಗೆ ರಾಜಕಾರಣಿಗಳಿಗಿಂತ ಸಾಂಸ್ಕೃತಿಕ ವ್ಯಕ್ತಿತ್ವಗಳೇ ಮುಖ್ಯ ಎಂಬ ನಿಲುವನ್ನು ನಿಷ್ಠೂರಕ್ಕೊಳಗಾದರೂ ಬಿಡದೆ ಪ್ರತಿಪಾದಿಸಿದ್ದು ಚಂಪಾ ಅವರ ಪ್ರಬುದ್ಧತೆಗೊಂದು ನಿದರ್ಶನ.


ನಮ್ಮ ಜೊತೆ ಎಲ್ಲೇ ಬೆರೆಯಲಿ, ಎಲ್ಲಿಗೇ ಬರಲಿ, ಅವರ ಹಿರಿತನವನ್ನು ನಮಗೊಂದು ಭಾರವಾಗಿ ಹೊರಿಸದೆ, ನಿಮ್ಮಂತೇ ನಾನು ಎಂಬಷ್ಟು ನಿರಾಳವಾಗಿ ಬೆರೆಯುವ, ಒಡನಾಡುವ ಚಂಪಾ ತಮ್ಮ 'ಜವಾರಿ'ತನದಿಂದಲೇ ಸಾಮಾಜಿಕ ಕ್ಷೇತ್ರದ ಕ್ರಿಯಾಶೀಲತೆಗೊಂದು ಅರ್ಥವನ್ನು ತುಂಬಿದ್ದಾರೆ. ನಾವೆಲ್ಲ ಸೇರಿದಾಗ ಸಾಹಿತ್ಯದ ಚರ್ಚೆಗಳಲ್ಲಿ ಮುಳುಗುವುದು ಕಮ್ಮಿ. ಬದಲಾಗಿ ಸಾಹಿತಿಗಳ ಬಗ್ಗೆ ಮಾತಾಡುತ್ತೇವೆ. ಅದು ಸಾಕಾದರೆ ಸ್ವಾಮೀಜಿಗಳ ಬಗ್ಗೆ ಮಾತಾಡುತ್ತೇವೆ. ಅದೂ ಸಾಕಾದರೆ ನಮ್ಮ ನಮ್ಮದೇ ಎಡವಟ್ಟುಗಳ ಬಗ್ಗೆ ಮಾತಾಡಿಕೊಂಡು ನಗುತ್ತೇವೆ. ಎಪ್ಪತ್ತು ತುಂಬಿದರೂ ಅವರ ಎದೆಯೊಳಗೊಂದು ಗುಪ್ತಗಾಮಿನಿ ನದಿ ಶಾಲ್ಮಲೆ ಹರಿಯುತ್ತಲೇ ಇದೆ. ಅದು ಬತ್ತುವ ಜಾಯಮಾನದ್ದಲ್ಲ.

● ಡಾ.ಬಂಜಗೆರೆ ಜಯಪ್ರಕಾಶ




ಹೈಕು ಪದ್ಯ





ಸಂಗೀತದ ಮತ್ತಿನಲ್ಲಿ
ಮುಳುಗಿದವರ ಕಿವಿಗೊಂದು
ತಮಟೆಯ ಸದ್ದು
* * *
ಮನದ ಬಾಗಿಲು ತಟ್ಟಿದ್ದ
ಆ ಸಪ್ಪಳದ ಗುರುತು
ಎಂದೂ ಮಾಸುವುದಿಲ್ಲ.

● ಡಾ. ಸಿ. ರವೀಂದ್ರನಾಥ, ಮೈಸೂರು



ಚಂಪಾ ಎಂಬ ಜನಧ್ವನಿ

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಸಂಪ್ರದಾಯ ಪ್ರಿಯರ ಕೇಂದ್ರಸ್ಥಾನವೆಂದೇ ಪರಿಗಣಿತವಾಗಿತ್ತು. ಒಂದು ಜಾತಿಯ ಹಿಡಿತದಲ್ಲಿದ್ದ ಈ ಯುನಿವರ್‌ಸಿಟಿಯನ್ನು ಐನೋರ್‌ಸಿಟಿ ಎಂದೇ ಕರೆಯುತ್ತಿದ್ದರು. ಅದೇ ಜಂಗಮರ ಮನೆತನದಲ್ಲಿ ಜನಿಸಿ ವಿಶ್ವವಿದ್ಯಾಲಯ ಹಾಗೂ ಸಮಾಜದಲ್ಲಿನ ಜಾತಿ ವ್ಯವಸ್ಥೆ ವಿರುದ್ಧ ಸಿಡಿದೆದ್ದವರು ಚಂದ್ರಶೇಖರ ಪಾಟೀಲ. ಇಡೀ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಗತಿಪರ ಚಿಂತಕರಿಗೆ ಕೇಂದ್ರಬಿಂದುವಾಗಿದ್ದವರು. ಸಮಾಜವಾದಿ ಸಿದ್ಧಾಂತಗಳನ್ನು, ಲೋಹಿಯಾ ಜೆಪಿ ಚಿಂತನಧಾರೆಗಳನ್ನು ತಮ್ಮ ಸಾಹಿತ್ಯ ಮತ್ತು ಬದುಕಿನಲ್ಲಿ ಅಳವಡಿಸಿಕೊಂಡವರು ಚಂಪಾ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲಿಗೂ ಹೋಗಿಬಂದವರು. ಸಮಾಜದಲ್ಲಿ ನಡೆವ ಮೋಸ, ವಂಚನೆ ವಿರುದ್ಧವೂ ಧ್ವನಿ ಎತ್ತಿ ಸಂಘಟನಾತ್ಮಕವಾಗಿಯೂ ಕೆಲಸ ಮಾಡಿದವರು. ಇಂಥ ವ್ಯಕ್ತಿ ಸಹಜವಾಗಿಯೇ ಬಂಡಾಯ ಮನೋಭಾವದ, ಪ್ರಗತಿಪರ ಚಿಂತಕರ ಮಾರ್ಗದರ್ಶಿಯಾಗಿ ರೂಪಗೊಂಡರು.

1979 ರಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಮೊದಲ ಸಮ್ಮೇಳನ ಬೆಂಗಳೂರಿನಲ್ಲಿ ನಡೆದ ಮರುವರ್ಷದಲ್ಲಿ ವಿಜಾಪುರದಲ್ಲಿ ಎರಡನೆಯ ಸಮ್ಮೇಳನ ನಡೆಸಲು ತಯಾರಿ ನಡೆಯಿತು. ಪ್ರೊ. ಎ.ಎಸ್. ಹಿಪ್ಪರಗಿಯವರ ನಾಯಕತ್ವದಲ್ಲಿ 1980ರಲ್ಲಿ ಎರಡನೇ ಸಮ್ಮೇಳನ ವಿಜಾಪುರದಲ್ಲಿ ನಡೆಯಿತು. ಆ ಸಮ್ಮೇಳನದ ತಯಾರಿಗಾಗಿ ವಿಜಾಪುರಕ್ಕೆ ಬಂದಿದ್ದ ಚಂಪಾ ಅವರನ್ನು ನಾನು ನೋಡಿದ್ದು ಅದೇ ಮೊದಲ ಬಾರಿಗೆ. ತಮ್ಮ ಸರಳತನ, ಕ್ರಿಯಾಶೀಲತೆ, ಮೊನಚು ವಿಡಂಬನೆ ತುಂಬಿದ ಮಾತುಗಳು; ನಡುನಡುವೆ ಸೈದ್ಧಾಂತಿಕ ಚರ್ಚೆ ಹೀಗೆ ತಮ್ಮ ವ್ಯಕ್ತಿತ್ವದಿಂದಲೇ ಆತ್ಮೀಯರಾದರು. ಅದೇ ಆಗ ಕಮ್ಯುನಿಸ್ಟ ಪಕ್ಷದ ಚಳವಳಿಯಲ್ಲಿ ತೊಡಗಿದ ನಮ್ಮ ಜೊತೆಗೆ ಅವರು ನಡೆಸಿದ ಸಂಭಾಷಣೆಗಳು ನಮ್ಮನ್ನು ಮತ್ತಷ್ಟು ಹತ್ತಿರ ತಂದವು. ನಾವು ವಿದ್ಯಾರ್ಥಿಗಳು,



ಅವರೊಬ್ಬ ಅಧ್ಯಾಪಕರೆನ್ನದೆ ಅಂತರವನ್ನು ದೂರ ಮಾಡಿದವು. ನಂತರ ಅದೇ ವರ್ಷ ನಾನು ಧಾರವಾಡಕ್ಕೆ ಸ್ನಾತಕೋತ್ತರ ಅಧ್ಯಯನಕ್ಕೆ ಹೋದಾಗ ಚಂಪಾ ಅವರ ಜೊತೆ ಸಂಪರ್ಕ ಹೆಚ್ಚಿತು. ನವಲಗುಂದ ನರಗುಂದ ರೈತರ ಮೇಲೆ ಗೋಲಿಬಾರ್ ನಡೆಸಿದ ಕಾಂಗ್ರೆಸ್‌ನ ಗುಂಡೂರಾವ್ ಸರ್ಕಾರದ ವಿರುದ್ಧ ನಿರಂತರ ಹೋರಾಟ ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ನಡೆದ ಹಲವಾರು ಹೋರಾಟಗಳಲ್ಲಿ ಚಂಪಾ ಸ್ಕೂಟರ್ ಮೇಲೆ ಎರಡು ಕೋಲು, ಬ್ಯಾಗ್‌ನಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಬ್ಯಾನರ್ ಇಟ್ಟುಕೊಂಡು ಬರುತ್ತಿದ್ದರು. ವಿಶ್ವವಿದ್ಯಾಲಯದ ಪ್ರಾಧ್ಯಾಪಕರೆಂದರೆ ಹೀಗೂ ಇರುತ್ತಾರಾ ಎಂಬ ಪ್ರಶ್ನೆಗೆ ಹೀಗೇ ಇರಬೇಕೆ ಎಂಬ ಮಾದರಿಯನ್ನು ಚಂಪಾ ತಮ್ಮ ಕ್ರಿಯೆಯ ಮೂಲಕ ತೋರಿಸಿಕೊಟ್ಟಿದ್ದರು. .

ಮುಂದೆ ಬಂದದ್ದು ಗೋಕಾಕ್ ವರದಿ ಕುರಿತ ಚಳವಳಿ. ಗೋಕಾಕ್ ಸಮಿತಿ ರಾಜ್ಯದಲ್ಲಿ ಪ್ರವಾಸ ಮಾಡುವಾಗಲೆಲ್ಲ ಅದರ ವಿರುದ್ಧ ಪ್ರತಿಭಟನೆಗಳನ್ನು ಸಂಘಟಿಸಿದವರು ಚಂಪಾ. ಆರಂಭದಲ್ಲಿ ಸಂಸ್ಕೃತದ ಸ್ಥಾನವನ್ನು, ಮಹತ್ವವನ್ನು ಕುರಿತು ಅಧ್ಯಯನಕ್ಕೆ ಗೋಕಾಕ್ ಸಮಿತಿ ಪ್ರವಾಸ ಹೊರಟಿತ್ತು, ಎಲ್ಲ ಕಡೆ ಗೋಕಾಕ್ ಸಮಿತಿಯ ಉದ್ದೇಶವನ್ನೇ ಪ್ರತಿಭಟಿಸಿ ಹೋರಾಟ ನಡೆದಾಗ ಸಮಿತಿಯ ವರದಿಯೇ ಬೇರೆ ರೂಪ ತಾಳಿತು. ಮುಂದಿನದು ಗೋಕಾಕ್ ವರದಿಯ ಜಾರಿಗಾಗಿ ನಡೆದ ಐತಿಹಾಸಿಕ ಹೋರಾಟ . ಗೋಕಾಕ್ ವರದಿ ಜಾರಿಗಾಗಿ ನಡೆದ ಹೋರಾಟದಲ್ಲಿ ಚಂಪಾ ಪಾತ್ರ ದೊಡ್ಡದು. ಆರಂಭದಲ್ಲಿ ನಾವೆಲ್ಲ ಜೊತೆಗಿದ್ದರೂ ಚಳವಳಿ ಬೆಳೆದಂತೆ ಕೆಲವು ತಾತ್ವಿಕ ಭಿನ್ನಾಭಿಪ್ರಾಯಗಳು ಆರಂಭವಾದವು. ಚಂಪಾ ಬಂಡಾಯ ಸಾಹಿತ್ಯ ಸಂಘಟನೆಗೆ ರಾಜೀನಾಮೆ ಕೊಟ್ಟು ಕನ್ನಡ ಕೇಂದ್ರ ಕ್ರಿಯಾಸಮಿತಿಯಲ್ಲಿ ಸಕ್ರಿಯರಾದರು. ಆಗ ನಮ್ಮ ನಡುವಿನ ಈ ತಾತ್ವಿಕ ಜಗಳ ಲಂಕೇಶ್ ಪತ್ರಿಕೆಯಲ್ಲೂ ವರದಿಯಾಯಿತು. ಚಂಪಾ ಮತ್ತು ನಮ್ಮ ನಡುವಿನ ಸಂಘರ್ಷ ಒಬ್ಬ ಲೋಹಿಯಾವಾದಿ ಮತ್ತು ಮಾರ್ಕ್ಸ್‌ವಾದಿಗಳ ನಡುವಿನ ಸಂಘರ್ಷವಾಗಿತ್ತು. ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಚಂಪಾ ವೈಯಕ್ತಿಕ ವಿಶ್ವಾಸ, ಪ್ರೀತಿ, ಸ್ನೇಹ ಕಳೆದುಕೊಳ್ಳುತ್ತಿರಲಿಲ್ಲ, ಏನೇ ತಾತ್ವಿಕ ಭಿನ್ನಾಭಿಪ್ರಾಯಗಳಿದ್ದರೂ ಕೋಮುವಾದ, ಜಾತಿವಾದಗಳ ವಿರುದ್ಧ ಚಂಪಾ ಎಲ್ಲರ ಜೊತೆಗೂಡಿ ಹೋರಾಡುತ್ತಿದ್ದರು: ಅಂಥ ಒಂದು ಮಹತ್ವದ ಹೋರಾಟ ಮಂಡಲ್ ವರದಿ ಜಾರಿಗಾಗಿ ನಡೆದ ಚಳವಳಿ.

1990 ರಲ್ಲಿ ವಿ.ಪಿ. ಸಿಂಗ್ ಸರ್ಕಾರ ಮಂಡಲ್ ವರದಿ ಜಾರಿಗೆ ಮುಂದಾದಾಗ ದೇಶಾದ್ಯಂತ ಜಾತಿವಾದಿ ಹಾಗೂ ಬಲಪಂಥೀಯ ಶಕ್ತಿಗಳು ಅದರ ವಿರುದ್ಧ ಹೋರಾಟಕ್ಕಿಳಿದರು. ಧಾರವಾಡದಲ್ಲಿ ಎಬಿವಿಪಿ ಮತ್ತು ಮೇಲ್ಜಾತಿ ಶಕ್ತಿಗಳು ಮಂಡಲ್ ವರದಿ ವಿರುದ್ಧ ತೀವ್ರವಾದ ಚಳವಳಿ ಆರಂಭಿಸಿದರು. ಆಗ ಚಂಪಾ, ನಾನು ಹಾಗೂ ಪ್ರೊ. ವೈ.ಎಂ. ಮಾದಾರ ಅವರು ಸೇರಿ ಎಲ್ಲ ಪ್ರಗತಿಪರ, ದಲಿತ ಸಂಘಟನೆಗಳನ್ನು ಸೇರಿಸಿ ಪ್ರಗತಿಪರ ಪ್ರಜಾ ವೇದಿಕೆ ಆರಂಭಿಸಿ ಮಂಡಲ್ ವರದಿ ಜಾರಿಗಾಗಿ ಚಳವಳಿ ಆರಂಭಿಸಿದೆವು. ನಮ್ಮ ಚಳವಳಿಯೂ ತೀವ್ರವಾಯಿತು. ಚಳವಳಿಯ ತೀವ್ರತೆಯನ್ನು ಕಂಡ ಜಿಲ್ಲಾಡಳಿತ ಎಲ್ಲ ಶಾಲಾ ಕಾಲೇಜ್‌ಗಳಿಗೆ ರಜೆ ಘೋಷಿಸಿತು. ಆದರೂ ಸಾವಿರಾರು ವಿದ್ಯಾರ್ಥಿಗಳು ಎರಡೂ ಬಣಗಳಲ್ಲಿ ಪ್ರತಿದಿನ ಮೆರವಣಿಗೆ, ಪ್ರತಿಭಟನೆ ಮುಂದುವರೆಸಿದರು. ಮಂಡಲ್ ವರದಿಯ ಪರ ಚಳವಳಿ ಪ್ರಬಲವಾದಾಗ ವಿರೋಧಿಗಳು ಪ್ರೊ. ಚಂಪಾ ಮತ್ತು ನನ್ನ ಮೇಲೆ ದಾಳಿಗೆ ಸಂಚು ರೂಪಿಸಿದರು.



ಚಂಪಾ-20

'ಹೊಲೆ ಮಾದಿಗರಿಗೆ ಹುಟ್ಟಿದ ಚಂಪಾ ಹಾಗೂ ಸಿದ್ದನಗೌಡನಿಗೆ ಧಿಕ್ಕಾರ' ಎಂಬ ಘೋಷಣೆ ಆರಂಭಿಸಿದರು. ಮಂಡಲ್ ವಿರೋಧಕ್ಕಿಂತಲೂ ನಮ್ಮಿಬ್ಬರ ಮೇಲಿನ ದ್ವೇಷ ಹೆಚ್ಚಿತು. ಅಂಥ ಸಂದರ್ಭದಲ್ಲಿ ಒಬ್ಬಂಟಿಯಾಗಿ ಹಳೇ ಸ್ಕೂಟರ್ ಮೇಲೆ ಓಡಾಡುತ್ತಿದ್ದ ಚಂಪಾ ಅವರಿಗೆ ಎಚ್ಚರದಿಂದಿರಲು ಹೇಳಿದೆವು. ಹಲ್ಲೆಯ ಸಂದರ್ಭದಲ್ಲೂ ಯಾವುದನ್ನೂ ಲೆಕ್ಕಿಸದೆ ಪ್ರತಿದಿನ ಚಳವಳಿಯಲ್ಲಿ ಚಂಪಾ ಭಾಗವಹಿಸಿದರು: ಮಂಡಲ್ ವರದಿ ಹಿಂದುಳಿದ ವರ್ಗದ ಕುರಿತಾಗಿದ್ದರೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಅದರ ಅರಿವಿರಲಿಲ್ಲ. ಆ ವಿದ್ಯಾರ್ಥಿಗಳನ್ನೇ ಬಳಸಿಕೊಂಡು ಮಂಡಲ್ ವಿರೋಧಿ ಚಳವಳಿ ನಡೆದಿತ್ತು. ಆಗ ನಾವು ಮಂಡಲ್ ವರದಿ ಅದರಲ್ಲಿ ಬರುವ ಜಾತಿಗಳ ಕುರಿತು ಕಿರುಹೊತ್ತಿಗೆ, ಕರಪತ್ರ ಮುದ್ರಿಸಲು ತೀರ್ಮಾನಿಸಿದೆವು. ಪ್ರೊ. ತೇಜಸ್ವಿ ಕಟ್ಟಿಮನಿ ಎರಡೇ ದಿನದಲ್ಲಿ ವರದಿ, ವ್ಯಾಪ್ತಿಗೆ ಬರುತ್ತಿದ್ದ 332 ಜಾತಿಗಳ ಪಟ್ಟಿ ಮತ್ತು ಕಿರುಹೊತ್ತಿಗೆ ಸಿದ್ಧಪಡಿಸಿದರು. ಆ ಕರಪತ್ರವನ್ನು ಹಂಚಿದ ಮಾರನೇ ದಿನವೇ ಮಂಡಲ್ ವಿರೋಧಿ ಧ್ವನಿ ಕರಗತೊಡಗಿತು. ಈ ಹೋರಾಟದಲ್ಲಿ ಒಬ್ಬ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ಚಂಪಾ ಎದುರಿಸಿದ ಟೀಕೆ, ನಿಭಾಯಿಸಿದ ರೀತಿ ಅವರಲ್ಲೊಬ್ಬ ದಿಟ್ಟ ಹೋರಾಟಗಾರನಿರುವುದನ್ನು ಮತ್ತೊಮ್ಮೆ ಸಾಬೀತುಪಡಿಸಿತು.

ತಮ್ಮ ಚಟುವಟಿಕೆ, ಸಾಹಿತ್ಯ ಸಂಕ್ರಮಣ ಪತ್ರಿಕೆ, ಅಧ್ಯಾಪಕನ ವೃತ್ತಿ ಹೀಗೆ ಎಲ್ಲ ಮೂಲಗಳಿಂದ ಚಂಪಾ ತಮ್ಮನ್ನು ಜನಪರವಾಗಿ ತೊಡಗಿಸಿಕೊಂಡವರು. 'ಪ್ರೀತಿ ಇಲ್ಲದೆ ಏನನ್ನೂ ಮಾಡಲಾರೆ, ದ್ವೇಷವನ್ನೂ ಸಹ' ಎಂಬ ಅವರ ಹೇಳಿಕೆ ಎಲ್ಲ ಭಿನ್ನಾಭಿಪ್ರಾಯಗಳ ಮಧ್ಯೆಯೂ ಅವರನ್ನು ಗೌರವಿಸುವಂತೆ ಮಾಡಿದೆ. ಈಗಲೂ ಕೋಮುವಾದದ ವಿಷಯಕ್ಕೆ ಬಂದರೆ ಚಂಪಾ ಅವರದ್ದು ಅದೇ ಖಚಿತವಾದ ನಿಲುವು. ಅವರು ಧಾರವಾಡದಲ್ಲೇ ಇರಬೇಕಿತ್ತು. ಕೌಟುಂಬಿಕ ಅನಿವಾರ್ಯತೆಗಳಿಂದ ಬೆಂಗಳೂರಿಗೆ ಬಂದಿದ್ದಾರೆ. ಬೆಂಗಳೂರಿನ ಜನಜಂಗುಳಿಯಲ್ಲಿ ಕಳೆದೇ ಹೋಗಿದ್ದಾರೇನೋ ಎನ್ನಿಸುತ್ತಿದೆ. ಈ ವಯಸ್ಸಿನಲ್ಲಿಯೂ ಬತ್ತದ ಅವರ ಉತ್ಸಾಹ, ನಿರಂತರ ಚಟುವಟಿಕೆ ಜನಪರ ಚಳವಳಿಗಳಿಗೆ ಮಾರ್ಗದರ್ಶಿಯಾಗಲೆಂದು ಆಶಿಸುತ್ತೇನೆ.



● ಡಾ. ಸಿದ್ದನಗೌಡ ಪಾಟೀಲ

ಕನ್ನಡ ಕಾವ್ಯದ ಗತಿ



"ಕನ್ನಡ ಕಾವ್ಯದ
ಭೂತ ಭವಿಷ್ಯವ
ಬಣ್ಣಿಸಿ ಹೇಳೋ ಗಾಂಪಾ."

"ನಮ್ಮ ಆದಿಕವಿ
ಪಂಪಾ. ಗುರುವೇ,
ನಮ್ಮ ಅಂತ್ಯ ಕವಿ ಚಂಪಾ."

● ಚಂಪಾ ಬಗ್ಗೆ ಚಂಪಾ

ಚಂಪಾ ಬರಹಗಳ ಒಂದೆರಡು ಝಲಕ....

ಚಂಪಾಯಣ

ಚಂಪಾರ ಹಾಸ್ಯಪ್ರಜ್ಞೆ, ವ್ಯಂಗ್ಯದೊಂದಿಗೆ ಬೆರೆತ ವಿಷಾದ, ಸಮಯಸ್ಫೂರ್ತಿಯ ಬರಹಗಳಿಗೆ ಒಂದೆರಡು ಉದಾಹರಣೆಗಳು ಇಲ್ಲಿವೆ.


"ಪದ್ಮಶ್ರೀ ಬಂದಮೇಲೆ ಜಿ.ಬಿ. ಅವರಿಗೆ ಬಿಡುವೇ ಇರಲಿಲ್ಲ ಅಥವಾ 'ಬಿಡುವೇ ಇಲ್ಲ' ಎಂಬ ವಾತಾವರಣ ಅವರು ನಿರ್ಮಿಸಿದ್ದರು. ದೂರದ ಊರುಗಳಿಗೆ ಸತ್ಕಾರ ಮಾಡಿಸಿಕೊಳ್ಳಲು ಹೋಗಿಬರುವ ಸಲುವಾಗಿ ಒಂದು ಕಾಯಂ ಟ್ಯಾಕ್ಸಿಯನ್ನೇ ಗೊತ್ತು ಮಾಡಿದ್ದರು. ಮಿನಿಸ್ಟರುಗಳ 'ಟಿ.ಪಿ.' (ಟೂರ್ ಪ್ರೋಗ್ರಾಂ) ಹಾಗೆಯೇ ಇವರದೂ ಖಚಿತ ಕಾರ್ಯಕ್ರಮ. ಇವರ ಅಂಗರಕ್ಷಕರಾದ ಇವರ ಪುತ್ರ ರಾಮ ಜೋಶಿಯವರಂತೂ ಪ್ರಶಸ್ತಿ-ಗಿಶಸ್ತಿಗಳ ಬಗ್ಗೆ ಒಂದು ಕಂಪ್ಯೂಟರ್ ಕೆಲಸ ಮಾಡಿದಂತೆ ಮಾಡುತ್ತಾರೆ. ಯಾರಿಗೆ ಯಾವ ಪ್ರಶಸ್ತಿ ಯಾವಾಗ ಬಂತು; ಪ್ರಶಸ್ತಿಗಳ ಆಗಿನ ರೇಟು, ಈಗಿನ ರೇಟು; ಒಂದು ಪ್ರಶಸ್ತಿಯಿಂದ ಇನ್ನೊಂದು ಪ್ರಶಸ್ತಿಗೆ ಬಡತಿ ಸಿಗುವುದೇ; ಅಂಥ ಉದಾಹರಣೆಗಳು ಇವೆಯೇ; ಕೊಟ್ಟ ಮೆಡಲುಗಳಲ್ಲಿ ಬಂಗಾರದ ಪರಸೆಂಟೇಜ್ ಎಷ್ಟು; ಅದನ್ನು ಹಾಗೇ ಇಟ್ಟರೆ ಲಾಭವೋ, ಕರಗಿಸಿ ಮಾರಾಟ ಮಾಡಿದರೆ ಲಾಭವೋ.... ಒಂದೇ ಎರಡೇ? ಇಂಥ ಸಾವಿರಾರು ಚಿಲ್ಲರೆ ವಿಷಯಗಳ ಬಗ್ಗೆ ಚಟ್‌ಪಟ್ ಮಾತಾಡುತ್ತಾರೆ ಅವರು. ಎಂಥ ಬಣಜಿಗರನ್ನೂ ನಾಚಿಸುವ ಇವರ ಮುಖದ ಹಾವಭಾವ ನೋಡುವುದೇ ನೇತ್ರಾನಂದ, ಮಾತು ಕೇಳುವುದೇ ಕರ್ಣಾನಂದ!

ಇದೇ ಹಿರಿಯರ ಇನ್ನೊಂದು ಮುಖವೂ ಇದೆ. ಅದು ಅವರ ವಿನೋದ ಪ್ರವೃತ್ತಿ. ಪ್ರಶಸ್ತಿ ಸಿಕ್ಕ ಹೊಸದರಲ್ಲಿ ಅವರನ್ನೊಮ್ಮೆ ಕಂಡಾಗ, 'ಈಗ ನಾವು ಬದ್ಮಾಶ್ರೀ, ನಾವು ಬದ್ಮಾಶ್ರೀ' ಎಂದು ಲಯಬದ್ಧವಾಗಿ ಹಾಡುತ್ತ ಹೇಳಿದರು. ಕನ್ನಡದ 'ಗದಬಾದೇಶ ಸಂಧಿ'ಯ ಪ್ರಕಾರ ಅವರ ಪದ್ಮಶ್ರೀಯ 'ಪ' ಕಾರಕ್ಕೆ 'ಬ' ಕಾರಾದೇಶವಾಗಿ, ಅದು 'ಬದ್ಮಾಶ್ರೀ' ಆಗಿತ್ತು,

(ಪ್ರಶಸ್ತಿಗಳೂ ಪ್ರಸಂಗಗಳೂ ಲೇಖನದಿಂದ)
(ಜಿ.ಬಿ. ಜೋಶಿ ಬಗ್ಗೆ)

* * * * *

ಒಮ್ಮೆ ರಾಯಚೂರಿಗೆ ನಾನೊಬ್ಬನೇ ಚಂದಾಯಾತ್ರೆ ಕೈಗೊಂಡಿದ್ದೆ. ಅಲ್ಲಿ ಶಾಂತರಸ, ಎಸ್.ಜಿ. ಸ್ವಾಮಿ, ಅಮರೇಶ. ಅಮರಣ್ಣ ಚುಕ್ಕಿ ಮುಂತಾದವರು ಒಂದೆರಡು ದಿನ ಅಲ್ಲಲ್ಲಿ ಓಡಾಡಿ ಚಂದಾ ಸಂಗ್ರಹಿಸಿದರು. ಇನ್ನೂ ಕೆಲವರನ್ನು ಕಾಣಬೇಕಾಗಿತ್ತು. ಆದರೆ ನಾನು ಧಾರವಾಡಕ್ಕೆ ಬೇಗ ಮರಳಬೇಕಾಗಿತ್ತು.



ಲಕ್ಷ್ಮೀದೇವಿ (ಶಾಂತರಸರ ಪತ್ನಿ) ಹೇಳಿದರು: 'ಚಂದಾ ಕೇಳಾಕ ಹೋದಾಗ ನೀವು ಇರಾಕS ಬೇಕು. ಈಗ ಊರಿಗೆ ಹೋಗಬ್ಯಾಡ್ರಿ.'

ನಾನು: 'ಹಂಗೇನಿಲ್ಲ, ನೀವು ಕೇಳಿದ್ರ ಯಾರೂ ಇಲ್ಲಾ ಅನ್ನಂಗಿಲ್ಲ.'

ಅವರು: 'ನಿಮಗ ತಿಳಿಂಗಿಲ್ಲ ಬಿಡ್ರಿ.'

ನಾನು: 'ಏನು ತಿಳಿಂಗಿಲ್ರಿ?'

ಅವರು: 'ಹೆಣಾ ಎದುರಿಗಿದ್ರ ಅಳಾಕ ಚಂದರೆಪಾ!'

(ಸಂಕ್ರಮಣ ಚಂದಾಯಣ)

* * * * *

ಮನೆಯಲ್ಲಿ ಮುಖ್ಯವಾದ ಎರಡು ಕೆಲಸಗಳೆಂದರೆ: ದಿನಾಲು ದೇವರ ಪೂಜೆ ಮಾಡುವುದು ಮತ್ತು ಸಂಜೆ ಲಾಟೀನ ಪಾವು ಒರೆಸುವುದು. ಹಣೆಗೆ ಲಕ್ಷಣವಾಗಿ ಇಬತ್ತಿ ಹಚ್ಚಿಕೊಂಡು, ಗಂಧದ ಬಟ್ಟು ಇಟ್ಟುಕೊಂಡು, ಜಗುಲಿಯ ಮೇಲೆ ಮನೆದೇವರಾದ ಕೊಟ್ಟೂರು ಬಸವಣ್ಣನ ಅಧ್ಯಕ್ಷತೆಯಲ್ಲಿ ಆಸೀನರಾಗಿದ್ದ ನೂರಾ ಎಂಟು ಫೋಟೋಗಳಲ್ಲಿಯ ದೇವರುಗಳಿಗೆ ಅದೇ ಮೇಕಪ್ ಮಾಡಿ, ಧೂಪಾರತಿ ಬೆಳಗಿ ಮನೆ ತುಂಬ ಲೋಬಾನದ ಹೊಗೆ ಎಬ್ಬಿಸುತ್ತಿದ್ದ ನನ್ನ ಆಗಿನ ಮೂರ್ತಿಯನ್ನು ನೆನಿಸಿಕೊಂಡರೆ ಈಗಲೂ ಮೂಗಿನ ತುಂಬ ಆ ಕಂಪು ಅಡರುತ್ತದೆ. (ಅದೇ ವೇಗದಲ್ಲಿ ತರ್ಕಬದ್ಧವಾಗಿ ನನ್ನ ಬದುಕು ಸಾಗಿದ್ದರೆ ಇಷ್ಟೊತ್ತಿಗಾಗಲೇ ನಾನು ಹುಬ್ಬಳ್ಳಿಯ ಥ್ರೀ ಥೌಜಂಡ್ ಜಗದ್ಗುರುವಿಗೆ ಎದುರಾಗಿ ಸಿಕ್ಸ್ ಥೌಜಂಡ್ ಜಗದ್ಗುರುವಾಗಿ ಜಗತ್‌ಪ್ರಸಿದ್ಧನಾಗಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆಯುತ್ತಿದ್ದೇನೇನೋ. ಅಂಥ ಭಾಗ್ಯ ಈ ಭುವನಕ್ಕೆ ಇರಲಿಲ್ಲ ಎಂದು ಕಾಣಿಸುತ್ತದೆ).

(ನೆನೆವುದೆನ್ನ ಮನಂ
ನಮ್ಮೂರನು....)

* * * * *

ಸ್ಪಾಂಡಿಲೈಟಿಸ್: ಎಂಥ ಸುಂದರ ವಾದಶಬ್ದವಲ್ಲವೇ? ಅದರಲ್ಲಿ 'ಡಿಲೈಟ್' ಕೂಡ ಇದೆ. ನನಗೊಮ್ಮೆ ಬೆನ್ನು ಹುರಿ ನೋವಾದಾಗ ನಮ್ಮ ಡಾಕ್ಟರರ ಬಾಯಿಂದ ಈ ಶಬ್ದ ಹೊರಬಿತ್ತು, ನನ್ನ ಬೆನ್ನ ಹುರಿಯಗುಂಟ ಕರೆಂಟು ಪಾಸಾದಂತಾಗಿತ್ತು ನನಗೆ. ನಾನು ಬೆಂಗಳೂರಿನ ಆ ಪಾನಪೂರ್ವ ಅಥವಾ ಪಾನೋತ್ತರ ಗಳಿಗೆಯಲ್ಲಿ ನನ್ನ ಬೆನ್ನುನೋವಿನ ಬಗ್ಗೆ ಮಾತನಾಡುತ್ತಿದ್ದ ಅಂತ ಕಾಣುತ್ತದೆ.

ನನಗೆ ಬಹಳ ವರ್ಷಗಳಿಂದ ಗೆಜ್ಜೆಯಲ್ಲೊಂದು ಗಂಟು ಕಾಡುತ್ತಿತ್ತು, ಕುಂತಾಗ ತೆಪ್ಪಗಿದ್ದು ನಿಂತಾಗ, ನಡೆದಾಗ ಮಾತ್ರ ಗಂಟು ಬೀಳುತ್ತಿದ್ದ ಈ ಗಂಟು ನಾನು ಇಂಗ್ಲೆಂಡಿಗೆ ಹೋದಾಗ ಅಲ್ಲಿಗೂ ಅಂಟಿಕೊಂಡು ಬಂತು. ಅಲ್ಲಿಯ ಡಾಕ್ಟರಿಗೆ ತೋರಿಸಿದಾಗ ಅವರದಕ್ಕೆ 'ಹರ್ನಿಯಾ' ಅಂದರು. ಹರ್ನಿಯಾ! ಹರ್ನಿಯಾ!.... ಎಂಥಾ ರೊಮ್ಯಾಂಟಿಕ್ ಶಬ್ದ! ಶೇಕ್ಸ್‌ಪಿಯರ್ ನಾಟಕವೊಂದರ ಸ್ತ್ರೀಪಾತ್ರ ವಿರಬಹುದೇ..... ಅನಿಸಿ ರೋಮಾಂಚನಗೊಂಡಿದ್ದೆ... ಹರ್ನಿಯಾ, ಹರ್ನಿಯಾ, ಎಂಥ ಚೆಲುವೆ ಹರ್ನಿಯಾ...

ಎಂತೆಂಥಾ ಸುಂದರ ರೋಗಗಳಿವೆ ಈ ಜಗತ್ತಿನಲ್ಲಿ! ಎಂಥಾ ಭಾಗ್ಯ ಈ ಹುಲುಮಾನವ ರದು!.... ಎಂಥಾ ಭಾಗ್ಯವಯ್ಯಾ....

(ಅನಾರೋಗ್ಯವೇ ಭಾಗ್ಯ)

...ಅಲ್ಪನಿಗೆ ಐಶ್ವರ್ಯ ಬಂದ್ರೆ ಐವತ್ತು ಕೋಟಿಗೆ ಕಿರೀಟ ಮಾಡಿಸಿದ್ನಂತೆ!

ಹಿಂದೆಲ್ಲಾ ಮುಂಗಾರು ಮಳೆ ಬಿದ್ದ ಕೂಡಲೆ ...ರೆ ಜನ ಉಳ್ಮೆ ಹೊಡೆಯಲು ಓಡಾಡುತ್ತಿದ್ದರು. ಆದರೀಗ ...ತಹ ಯಾವ ಆತಂಕವೂ ಇಲ್ಲದೆ ಟ್ರ್ಯಾಕ್ಟರ್ ...ದಗಿದ್ದವರನ್ನು ಹುಡುಕುತ್ತ ಅಲೆಯುವುದನ್ನು ನೋಡಿ ...ಮಾವ ಖಿನ್ನಮನಸ್ಸನಾಗಿದ್ದ. ಮನಸ್ಸಿನಾಳದಲ್ಲಿ ಮನುಷ್ಯ ...ಕೊಂಡು ಬಂದ ಬೇಸಾಯದ ಕಸುಬೇ ಅವನತಿಯ ...ಬಿ ಹಿಡಿದಿರುವುದು ಆತನಿಗೆ ಗೋಚರವಾಗತೊಡಗಿತ್ತು. ...ಾಗಲೇ ಸೀರ ಬಜೆಪಿ ಜನರ ಜಗಳ ಕುರಿತು ಮಾತನಾಡಿ ...ೂ ಅವನ ಕಿವಿಗೆ ತಾಕಿರಲೇ ಇಲ್ಲ. ಅವನೇನೋ ...ಳಿದ್ದಕ್ಕೆ ಇವನು,

...ಬಯಲುಸೀಮೆ ಕಟ್ಟೆಪುರಾಣ

▸ಬಿ. ಚಂದ್ರೇಗೌಡ

"ಹೊಯ್ತಾ ಅದಲ್ಲಯ್ಯ ಯವಸಾಯದ ಕಸುಬು" ...ದ.

"ಹೋಯ್ತಾ ಅದೆ ಅಂದ್ರೆ ಯಾವನಾರ ಉಪಾಸ ...ಬಿಗಿದ್ದನೆ. ಆ ಕಾಲ್ದಲ್ಲಿ ಏಟುಗೇದ್ರು ವಟ್ಟೆಗಿಟ್ಟಲ್ಲ ...ಳಕ್ಕೆ ಬಟ್ಟಿಲ್ಲ ಅನ್ನಂಗಿತ್ತು. ಅದೇ ಇವತ್ತು ನೋಡು ...ಮಿ ನಚ್ಚಿರವೆ ಪಡಬಾರ್ದ ಪಾಡುಪಡ್ತಾ ಅವೆ. ...ಡೋರು ಚನ್ನಾಗೆ ಅವ್ರೆ" ಎಂದ ಸೀರ.

"ವಬ್ಬ ಗಾರೆ ಕ್ಯಲಸದೋನು ದಿನಕೆ ನೂರೈವತ್ತು ...ಪಾಯಿ ತತ್ತನೆ. ವಲ ಉಳೋನು ಏನು ತಂದನೂ" ...ದ ಉಗ್ರಿ. ಆದರೆ ಇವರ ಯಾವ ತರ್ಕವೂ ಕಾಳಮಾವನ ...ಗೆ ಹೋಗಲಿಲ್ಲ. ಆದ್ದರಿಂದ ಆಖೈರಾಗಿ,

"ಹಾಳಾಗೋಯ್ತರೆ ಬುಡು" ಎಂದ.

"ಏನು ಹಾಳಾಗದಿಲ್ಲ ಬುಡು. ಅಂತ ದ್ಯಾವೇಗೌಡನೆ ...ರಡೊರ್ಸ ಬುಟ್ಟು ತಿರಗ ಅಧಿಕಾರಕ್ಕೆ ಬತ್ತಿವಿ ಅಂತ ...ವಾಗ ನೀನು ಹಾಳಾಗೋಯ್ತರೆ ಅಂತ ಕುಂತಿದ್ದಿ. ...ವತ್ತು ದ್ಯಾವೇಗೌಡನಂಗೆ ಕನಸು ಕಾಣಬೇಕು ...ಮಾವ" ಎಂದ ಉಗ್ರಿ.

"ದ್ಯಾವೇಗೌಡ ಕನಸು ಕಾಣಬೇಕಾದ್ದೆ ಬುಡ್ಡ. ಅಪ್ಪ ...ದ್ದಕ್ವಾದ್ರೆ ಮಗ ಇಲ್ಲದ್ದ ಕ್ಷ. ರೇವಣ್ಣ ಇದಾನಸಭೆ ...ತರಂತೆ. ಇನ್ನ ಸ್ವಸೆ ಹೆಂಗುಸರಿಗ್ಯಲ್ಲ ಲೀಡ್ರು. ಚನ್ನನೇನಾರ ...ಗಿದ್ರೆ ಚಂದ್ರಾಪಟ್ಣಕ್ಕೆ ಎಮ್ಮೆಲ್ಲೆ ಮಾಡತಿದ್ದನೊ" ಎಂದು ... ನಕ್ಕ.

"ಮುಂದೆ ಮಕ್ಕಳಿಗೆ ನಾಚಗೆ ಹೇಸಿಗೆ ಅನ್ನದೆ ...ವೇನಪ್ಪ" ಎಂದ ಉಗ್ರಿ.

"ಅಂಗಂದ್ರೇನು ಅಂತ ಕೇಳಂಗವ್ರುರೆ ಕಂಡ್ಯ ಅವುರು."

"ದ್ಯಾವೇಗೌಡ ಯಲ್ಲಾರ್ನು ಕರಕಂಡು ರಾಜಕಾರಣ ...ಡದೆ ಆಗಿದ್ರೆ ಕರ್ನಾಟಕದಲ್ಲಿ ವಳ್ಳೆ ಪಾರ್ಟಿನೆ ...ಬವುದಿತ್ತು, ಯಲ್ಲಾನು ಹಾಳು ಮಾಡಿದ ಅತ್ತಗೆ."

"ಈಗೇನೊ ಪಾರ್ಟಿಗೆ ಮಸ ಜನನೆ ಸೇರಿಸಿಗಂಡನಂತೆ."

"ಮಸ ಜನ ಅಂದ್ರಾ ಯ್ರಾರು ಗೊತ್ತೇನೊ. ಬಾಯಿಬುಟ್ರೆ ಕುಮಾರಣ್ಣ, ರೇವಣ್ಣ, ಅನಿತಕ್ಕ ಅಂತ ಯಾರಂತರೊ ಅವುರನ್ಯಲ್ಲ ಸೇರಿಸಿಗತ್ತವೆ. ಸೇರಿಸಿಗಂಡು ಮುಂದೆ ನೂರಿಪ್ಪತ್ತೈದು ಸ್ಥಾನ ಗೆದ್ದು ಕುಮಾರಣ್ಣ ಮುಖ್ಯಮಂತ್ರಿ, ರೇವಣ್ಣ ಉಪಮುಖ್ಯಮಂತ್ರಿಯಾದರಂತೆ."

"ಯಾರ್ಲ ಅಂಗದೋರು?" ಎಂದ ಕಾಳಮಾವ.

"ದ್ಯಾವೇಗೌಡ್ನೆ ಹೇಳ್ತ ಕುಂತವುನೆ ಕಣಮಾವ. ಯಾವೋ ಜೆಡಿಎಸ್ ಪಾರ್ಟಿ ಪೋಲಿಗಳೇಳಿದ್ರೆ ನಗಾಡಬವುದಿತ್ತು. ದ್ಯಾವೇಗೌಡ್ನೆ ಯಡಸವುರದ ಹನ್ನೆಂದಕ್ಕೆ ಅಧಿಕಾರಕ್ಕೆ ಬತ್ತಿನಿ ಅಂದವುನೆ. ಇದಕೇನೇಳ್ತೀ?"

"ಯಾಮೋಹ ಅಂತ ಮಾತಾಡುಸ್ತದೆ ಕಂಡ್ಯ."

"ವ್ಯಾಮೋಹ ಇರ್ಲಿ ಕಣಮಾವ, ಆದ್ರೆ ತೀರ ಜನ ನಗಾಡಂಗೆ ಮಾತಾಡಬಾರ್ದು."

"ಯಾರಪ್ಪ ನಗಾಡಂಗೆ ಮಾತಾಡಿದೋರು? ವ್ಹೂ ಈಸ್ ಕಾಮಿಡಿ? ರೆಡ್ಡಿಗಳೊ, ಈಶ್ವರಪ್ಪನೊ ಅಥವ ಎಡೂರಪ್ಪನೊ?" ಎಂದುಕೊಂಡು ವಾಟಿಸ್ಸೆ ಪ್ರತ್ಯಕ್ಷನಾದ.

"ಅವುರ್ಯಾರೂ ಅಲ್ಲ, ನಿಮ್ಮ ದ್ಯಾವೇಗೌಡ ಇನ್ನ ರ‍ಡೊರ್ಸಕ್ಕೆ ಪವರ್ಗೆ ಬಂದನಂತೆ ಕಣೊ" ಎಂದ ಉಗ್ರಿ.

"ಹೇಳಕ್ಕೆ ಬರಲ್ಲ. ಈಗ ಎಡೂರಪ್ಪ ಆಡ್ತಯಿರೊ ಆಟ ನೋಡಿದ್ರೆ ಒಂದೇ ವರ್ಸಕ್ಕೂ ಬರಬವುದು."

"ಎಡೂರಪ್ಪ ಬಿದ್ರೆ ಜೆಡಿಎಸ್ ಯಂಗೆ ಪವರ್ಗೆ ಬತ್ತದೊ? ಕಾಂಗ್ರೆಸ್ ಸಪೋರ್ಟು ಮಾಡಬೇಕಲವೆ?"

"ಕಾಂಗ್ರೆಸ್ ಮಾಡದೆಯಿದ್ರೆ ಎಡೂರಪ್ಪನೇ ಮಾಡ್ತನೆ ಕಣೊ. ಬಜೆಪಿ ವಡಕಂಡು ಈ ಕಡಿಕೆ ಬಂದು ನಾನೇ ಮುಖ್ಯಮಂತ್ರಿ, ರೇವಣ್ಣ ಉಪಮುಖ್ಯಮಂತ್ರಿ ಅಂದ್ರೆ ಏನು ಮಾಡಕ್ಕಾಯ್ತದೆ? ಆಗ ಪುನಃ ದೇವೇಗೌಡ ಹೋಗಿ ಅವುನಳಿಯನ ಆಸ್ಪತ್ರೆಲಿ ಡ್ರಿಪ್ ಹಾಕಿಸಿಗಂಡು ಮನಿಕತ್ತನೆ. ಆಗ ರೇವಣ್ಣ ಎಡೂರಪ್ಪನಿಗೆ ಸಪೋರ್ಟು ಮಾಡಿ ಉಪಮುಖ್ಯಮಂತ್ರಿ ಆಯ್ತನೆ. ದೇವೇಗೌಡ ಹೇಳಿರೊ ಯರಡೊರ್ಸದಲ್ಲಿ ಏನಾದ್ರು ಆಗಬವುದು" ಎಂದ ವಾಟಿಸ್ಸೆ.

"ರೆಡ್ಡಿಗಳು ಸುಮ್ಮನಿದ್ದರೇನೊ? ಅವುನ್ಯಾರೊ ಉಪ ಮುಖ್ಯಮಂತ್ರಿ ನಾನಾಯ್ತಿನಿ ಅಂತ ಕಾಯ್ತ ಕುಂತಿದ್ದನಂತೇ."

"ಮಿಸ್ಟರ್ ಉಗ್ರಿ, ರೆಡ್ಡಿಗಳತ್ರ ದುಡ್ಡುಬುಟ್ರೆ ಇನ್ನೇನದೊ? ನನಿಗ್ಗೊತ್ತಿರಂಗೆ ಯಾವ ಯೋಗ್ಯತೆನೂ ಇಲ್ದೆಯಿರೊ ಪೂಲಿಷ್ ಫೆಲೊಗಳವುರು."

"ಅಂಗಂತಿಯಾ?"

"ಅನ್ನದೇನು ಸಾಬೀತು ಮಾಡಿದರಲ್ಲೋ. ಕರ್ನಾಟಕದ ಕಬ್ಬಿಣಾ ಮಾರಿ ತಿರುಪ್ತಿ ದೇವುರಿಗೆ ನಲವತ್ತೈದು ಕೋಟಿ ರೂಪಾಯಿನ ಕಿರೀಟ ಮಾಡ್ಸಿ ಕೊಡ್ತರಲ್ಲ, ಇವುರಿನ್ಯಂಥಾ ಕಳ್ಳಿದ್ದರು?"

"ಹರಕೆ ಕಟ್ಟಿಗಂಡಿದ್ದೇನೊ" ಎಂದಳು ಜುಮ್ಮಿ.


"ಹರಕೆಯ ಹಿಂಗೂ ಕಟಗತ್ತರೇನಕ್ಕ? ನಲವತ್ತೈದು ಕೋಟಿ ಯಾರಪ್ಪನ ಮನೆದು ಗೊತ್ತಾ? ಇದೇ ನಮ್ಮ ಕರ್ನಾಟಕದ ಮಣ್ಣಿನ ದುಡ್ಡು. ಆ ದುಡ್ಡಲ್ಲಿ ಆ ನನಮಗ ಏನು ಮಾಡಬವುದಿತ್ತು ಗೊತ್ತಾ?"

"ಏನು ಮಾಡಬೇಕಾಗಿತ್ತು ಅದ್ನಾರ ಹೇಳ್ಳ."

"ನೋಡಕ್ಕ, ನಲವತ್ತೈದು ಅಂದ್ರೆ ಅಷ್ಟೇ ಆಗಿಲ್ಲ, ಐವತ್ತು ಅಂತ್ಲೆ ಇಟಗೊ. ಐವತ್ತು ಕೋಟಲಿ ಸುಮಾರು ಎರಡು ಸಾವಿರ ಕುಟುಂಬಕ್ಕೆ ಸಹಾಯ ಮಾಡಬವುದಿತ್ತು, ಬಳ್ಳಾರಿಲಿ ಒಂದೇ ಒಂದು ಕುಟುಂಬನೂ ಗುಡಸಲಲ್ಲಿ ಇರದಂಗೆ ಮಾಡಬವುದಿತ್ತು, ಅದೂ ಬ್ಯಾಡ, ಇವುರಪ್ಪ ಪೊಲೀಸಾಗಿದ್ದ."

"ಅಂಗರೆ ಅವುರಪ್ಪ ಪೊಲೀಸಾಗಿದ್ನೇನ್ಲ?"

"ಪೊಲೀಸ್ ಅಂದ್ರೆ ಇನ್ಸ್‌ಪೆಕ್ಟರಲ್ಲ, ಕಾನ್ಸ್‌ಸ್ಟೇಬಲ್ ಕಣಕ್ಕ. ಚಂಗಾರೆಡ್ಡಿ ಅಂತ ಅವುನೆಸರು. ಅವುನು ಎಂ.ಪಿ. ಪ್ರಕಾಶ್ ಮಂತ್ರಿ ಆಗಿದ್ದಾಗ ದೂರದಲ್ಲಿ ನಿಂತಿರೋನು.



ನನ್ನ ಮಕ್ಕಳು ಮುಂದೆ ಮಂತ್ರಿಗಳಾಯ್ತವೆ ಅನ್ನೊ ಕನಸು ಕಂಡೋನಲ್ಲ. ಯಾಕವ್ವ ಅಂದ್ರೆ ಅಷ್ಟು ಪೋಲಿ ಬದ್ದೊಗಿದ್ದವಂತೆ ಈ ರೆಡ್ಡಿಗಳು. ಆಗ ಅವುರಪ್ಪ ಪ್ರಕಾಶನತ್ರ ಬಂದು ಕೈ ಮುಗುದು, ನಮ್ಮುಡಗರಿಗೆ ಯಂತೆದಾರ ಒಂದು ಕ್ಯಲಸ ಕೊಡಿಸಿ ಅಯ್ಯನೋರ, ಇಲ್ಲ ಅಂದ್ರೆ ತೀರಾ ಪೋಲಿ ಬದ್ದೊಯ್ತವೆ ಅಂತ ಗೋಗರಿಯೋನಂತೆ. ಈ ಪ್ರಕಾಶ ಅವತ್ತೆ ಮನಸು ಮಾಡಿ, ಆ ರೆಡ್ಡಿ ಹುಡುಗರಿಗೆ ಯಂತೆದಾರ ಕ್ಯಲಸ ಕೊಡಿಸಿದ್ರೆ, ಇವತ್ತು ಕರ್ನಾಟಕದ ಗದಿಸೂ ಉಳಕಳದು, ಕಬ್ಬಿಣಾನೂ ಉಳಕಳದು."

"ನಿಜವೇನ್ಲ ನಿನೇಳ್ತಯಿರದು?"

"ನಿನ್ನಾಣೆ ನಿಜ ಕಣಕ್ಕ, ನಾನ್ಯಾಕ್ ಸುಳ್ಳೇಳಲಿ? ಬಡವನಿಗೆ ಸಡನ್ನಂತ ಶ್ರೀಮಂತಿಕೆ ಬರಬಾರ್ದಂತೆ."

"ಬಂದ್ರೇನಾದತೂ?"

"ಆಗೊ ರೆಡ್ಡಿ ಮಾಡಿದಂಗೆ ಮಾಡ್ತನೆ. ಅನನ ಮಕ್ಕಳು ಬಡತನನೂ ಮರತ್ರು, ಬಡವರನೂ ಮರತ್ರು. ಅಷ್ಟೇ ಅಲ್ಲ ಕಣಕ್ಕ ನಾವು ಒಬ್ಬ ಪೊಲೀಸ್ ಕಾನ್ಸ್‌ಟೇಬಲ್ ಮಕ್ಕಳೂ ಅನ್ನದ್ನೂ ಮರತ್ರು. ಅದೇನಾರ ನ್ಯನಪಿದ್ರೆ, ಅವುರಪ್ಪ ಕಾನ್ಸ್‌ಸ್ಟೇಬಲ್ಲಾಗಿ, ಇದೀ ಬಳ್ಳಾರಿ ಜಿಲ್ಲೆ ಯಲ್ಲಾ ಪೊಲೀಸ್ ಠಾಣೆಲೂ ಕ್ಯಲಸ ಮಾಡ್ಯವುನೆ. ಆಗ ಅವುನಿದ್ದುದ್ದು ಪೊಲೀಸ್ ಕ್ವಾಟ್ರಸಲ್ಲಿ. ನೀನು ಎಲ್ಲೇ ನೋಡು ಪೊಲೀಸ್ ಕ್ವಾಟ್ರಸ್ ಯಂಗವೆ ಅಂದ್ರೇ, ಕತ್ತೆ ಕ್ವಟಗೆ ತರ ಅವೆ."

"ಊ ಕಂಡ್ಲ ನಾನು ನೋಡಿದ್ದಿನಿ?" ಎಂದಳು ಜುಮ್ಮಿ.

"ನೀನೆಲ್ಲಿ ನೋಡಿದ್ದಕ್ಕಾ?"

"ತುರುಬನಳ್ಳಿ ಶಿವಣ್ಣಿಲವೇನ್ಲ? ಅವುನ ಸ್ವಾದುರ ಮಾವ ಪೊಲೀಸಾಗ್ಯವುನೆ. ದ್ಯಾವಣ್ಣ ಅಂತವ ಅವುನ ಮಗಳ ಮದಿವಿಗೆ ಕರದಿದ್ದ, ಹೋಗಿದ್ದೆ ಅವುರ ಮನೆ ಯಂಗಿದ್ದೊ ಅಂದ್ರೆ, ಕುದುರೆ ಲಾಯಿ ದ್ದಂಗಿದ್ದೊ. ಒಂದಡಗೆ ಕ್ವಾಣೆ, ನಡುಮನೆ, ವರಾಂಡ, ಆಟರಲ್ಲೇ ಇರಬೇಕು. ಅಂತ ಮನೆ ಅವು."

"ನೋಡಕ್ಕ, ಅಂತ ಮನೆಲಿ ಬೆಳದೋರು ಈ ರೆಡ್ಡಿಗಳು. ಇವುರಿಗೆ ಏನಾರ ಮನುಷ್ಯತ್ವ ಅನ್ನದಿದ್ದಿದ್ರೆ ಐವತ್ತು ಕೋಟಿ ದುಡ್ಡಲ್ಲಿ ಪೊಲೀಸ್ ಕ್ವಾಟ್ರಸ್ಸ ರಿಪೇರಿ ಮಾಡಿಸಿಕೊಡತಿದ್ರು. ಅದು ಬುಟ್ಟು ತಿರುಪ್ತಿ ತಿಮ್ಮಪ್ಪಮ್ಯಾಲೆ ಹಳಸಿನಣ್ಣು ಮಡಗಿದಂಗೆ. ಅಷ್ಟುಗಾತ್ರ ಕಿರೀಟ ಇಡತರಲ್ಲಾ, ವೇಸ್ಟಲವೇನಕ್ಕ?"

"ಯಾಕೇಪ್ಪಾದತ್ಲ?" ಎಂದ ಸೀರ.

"ವೇಸ್ಟೆ ಚಿಗಪ್ಪ ಅದು. ಅದ ತಿರುಪ್ತಿ ತಿಮ್ಮಪ್ಪನ ತಲೆಮ್ಯಾಲೆ ಯಾವಾಗ್ಲು ಮಡಗದಿಲ್ಲ. ಮೂಲೆಲಿ ಮಡಗಿರತರೆ. ವೇಸ್ಟಲವೆ?"

"ಸುಮ್ಮಸುಮ್ಮನೆ ಅಟು ದುಡ್ಡಿನ ಕಿರೀಟ ಮಾಡಿಸಿದ್ದರೇ? ಏನೋ ಹರಕೆ ಕಟ್ಟಿಗಂಡವುರೆ ಕಂಡ್ಯ" ಎಂದ ಕಾಳಮಾವ.

"ಇರಬವುದು ದ್ವಡಪ್ಪ, ಈ ದ್ಯಾವೇಗೌಡನ ಮಗ ಮುಖ್ಯಮಂತ್ರಿ ಸ್ಥಾನದಿಂದ ಇಳದು, ನಾವು ಅಧಿಕಾರಕ್ಕೆ ಬಂದ್ರೆ ಚಿನ್ನದ ಕಿರೀಟ ಮಾಡಿಸಿ ಕೊಡ್ತಿನಿ ಅಂತ ಹರಕೆ ಹೊತ್ತಿದ್ದೇನೊ ಅನ್ನೊ ಡವುಟ್ ಬತ್ತಾ ಅದೆ ನನಿಗೆ."

"ಅವುರಿನ್ನು ಪವರ್ಗೆ ಬಂದಿಲವಲ್ಲೊ? ಅಂದ್ರೆ ಉಪಮುಖ್ಯಮಂತ್ರಿ ಆಗಿಲವಲ್ಲೇಳು?" ಎಂದ ಉಗ್ರಿ.

"ಇದೇನೊ ಉಗ್ರಿ ಹಿಂಗಂತೀ. ರೆಡ್ಡಿ ಕಾಲಲ್ಲಿ ತೋರಿಸಿದ್ದ ಎಡೂರಪ್ಪ ತಲೆಮ್ಯಾಲೊತ್ತಗಂಡು ಕುಣಿತನೆ ಅಂದ್ರೇ ರೆಡ್ಡಿಗಳು ಪವರ್ಗೆ ಬಂದಂಗಲ್ಲವೇನೊ" ಎಂದು ವಾಟಿಸ್ಸೆ ವಿಕಟವಾಗಿ ನಕ್ಕ. ■




700ನೇ ಹುಟ್ಟುಹಬ್ಬ

ಸ್ವಿಟ್ಜರ್‌ಲೆಂಡ್ ದೇಶ ಈಗ ತನ್ನ ಏಳುನೂರನೆ ವರ್ಷದ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವುದರ ಬಗ್ಗೆ ಓದಿದೆ. ಒಂದಾದಮೇಲೊಂದರಂತೆ ಅನೇಕ ಇಂಗ್ಲಿಷ್ ಪತ್ರಿಕೆಗಳು ಈ ದೇಶದ ಬಗ್ಗೆ ಬರೆದವು.

ಇದು ಎಂಥ ದೇಶ? ಇದರ ವೈಶಿಷ್ಟ್ಯವೇನು? ನನಗೆ ಆಯ್ಕೆ ಮಾಡಲು ಹೇಳಿದರೆ ಈ ದೇಶವನ್ನು ...ನು ಆರಿಸಿಕೊಂಡು ನನ್ನ ಉಳಿದ ವರ್ಷಗಳನ್ನು ಇಲ್ಲಿ ಬದುಕಬಲ್ಲೆನೆ? ಮುಂತಾಗಿ ಕೇಳಿಕೊಳ್ಳುವುದು ...ಷ್ಟ ಅಭ್ಯಾಸ.

ಸ್ವಿಟ್ಜರ್‌ಲೆಂಡ್ ವಿಚಿತ್ರ ದೇಶ. ಇಲ್ಲಿಯ ಭಾಷೆಗಳು ನಾಲ್ಕು: ಜರ್ಮನ್, ಫ್ರೆಂಚ್, ಇಟಾಲಿಯನ್ ...ತ್ತು ಆದರದೇ ಆದ ಪ್ರಾದೇಶಿಕ ಭಾಷೆ. ಇದು ಇಡೀ ಯುರೋಪಿನಲ್ಲಿ ಅತ್ಯಂತ ಶ್ರೀಮಂತ ದೇಶ; ...ಗೆಯೇ ಯಾವ ಬಣಕ್ಕೂ ಸೇರದ ಅಲಿಪ್ತ, ನಿರ್ಲಿಪ್ತ ದೇಶ. ಇದು ಅಲಿಪ್ತ ರಾಷ್ಟ್ರವಾದ್ದರಿಂದ ಈ ...ಮಾನದ ಎರಡು ಜಾಗತಿಕ ಯುದ್ಧಗಳ ಆಘಾತದಿಂದ ಬಚಾವಾಯಿತು. ಹೀಗೆ ಬಚಾವಾದ್ದರಿಂದ ...ತ್ತು ನಿರ್ಲಿಪ್ತನಾಗಿದ್ದರಿಂದ ಈ ದೇಶಕ್ಕೆ ಬೋರ್ ಆಯಿತು. ಇಡೀ ಯುರೋಪಿನಲ್ಲಿ ಇವತ್ತು ...ತ್ಯಂತ ಹೆಚ್ಚು ಏಡ್ಸ್ ರೋಗದ, ಮದ್ದು ತಿನ್ನುವ ದೇಶ ಇದು. ಹಾಗೆಯೇ ಮೌನದ, ಆತ್ಮನಿರೀಕ್ಷಣೆಯ ...ಷ್ಟ. ಯಾಕೆಂದರೆ ಗುಪ್ತ, ಕಳ್ಳ ಬ್ಯಾಂಕಿಂಗ್ ವ್ಯವಹಾರದ ಬಗ್ಗೆ ಇದಕ್ಕೆ ಸಂಕೋಚ; ಹಾಗೆಯೇ ...ವಾಸೋದ್ಯಮದ ಬಗ್ಗೆ ಅಳುಕು, ಪ್ರವಾಸೋದ್ಯಮವನ್ನು ನೆಚ್ಚಿದ ಯಾವ ದೇಶವೂ ತನ್ನ ಪರಿಶುದ್ಧತೆಯ ...ಗ್ಗೆ ಗಟ್ಟಿಯಾಗಿ ಮಾತಾಡಿಕೊಳ್ಳುವುದಿಲ್ಲ.



ಗುಡ್ಡಗಾಡಿನ, ಆಲ್ಪ್ಸ್ ಪರ್ವತಶ್ರೇಣಿಯ ಹಸಿರು ಮತ್ತು ಮಂಜಿನ ಈ ಸ್ವಿಟ್ಜರ್‌ಲೆಂಡ್ ...ಮೂಲಭೂತವಾಗಿ ಹಳ್ಳಿಗರ, ಗುಡ್ಡಗರ ದೇಶವೆಂದು ಕೇಳಿ ಅಚ್ಚರಿಯಾಗುತ್ತದೆ; ಇಡೀ ಯೂರೋಪಿನಲ್ಲಿ ತಮ್ಮ ...ಮುಕ್ತಿ, ನಿರ್ಲಿಪ್ತತೆ ಕಾಯ್ದುಕೊಳ್ಳುವುದಕ್ಕಾಗಿಯೇ ಉಗ್ರ ಹೋರಾಟಗಾರರ ಸೈನ್ಯವನ್ನಿಟ್ಟುಕೊಂಡಿರುವ ಸ್ವಿಟ್ಜರ್‌ಲೆಂಡ್ ...ಭಾವಂತರನ್ನು ಹೆತ್ತದ್ದು ಕಡಿಮೆ. ಬೇರೆ ದೇಶಗಳ ಸಂಗೀತಗಾರರು, ಚಿತ್ರಕಾರರು, ಕವಿಗಳು ಇಲ್ಲಿ ಶ್ರಮಪರಿಹಾರಕ್ಕೆ ...ದರೂ ಇಲ್ಲೇ ಉಳಿಯುವುದಿಲ್ಲ.

ನಮ್ಮಂಥವರು ಇಲ್ಲಿ ಇದ್ದುಬಿಡುವುದು ಕಷ್ಟ.

'ಚಲಿಸುವ ಹಬ್ಬ'



ದೇಶಗಳ ಬಗ್ಗೆ ಯೋಚಿಸುತ್ತಿದ್ದಾಗಲೇ ಇದನ್ನು ಹೇಳಿಬಿಡಬಹುದು. ಇಡೀ ಜಗತ್ತಿನಲ್ಲಿ ಒಂದು ದೇಶಕ್ಕೆ ಬೇಕಾದ ಎಲ್ಲ ಭಾಗ್ಯವನ್ನೂ ಪಡೆದ ನಾಡು.... ಇಂಗ್ಲೆಂಡ್, ಅಮೆರಿಕ, ಜರ್ಮನಿ, ರಷ್ಯಾ, ಚೈನಾ, ಚಿಲಿ.... ಯಾವುದೂ ಅಲ್ಲ. ಒಂದು ದೇಶಕ್ಕೆ ಶ್ರೇಷ್ಠತೆಯನ್ನು ತರುವುದು ಅಲ್ಲಿಯ ಅರಣ್ಯವಾಗಲಿ, ನದಿಗಳಾಗಲಿ, ಪ್ರವಾಸೋದ್ಯಮವಾಗಲಿ ಅಲ್ಲ. ಇವೆಲ್ಲವುಗಳನ್ನೊಳಗೊಂಡ ಜೀವನ ಶೈಲಿ, ಪರಂಪರೆ ಮತ್ತು ಕ್ರಿಯಾಶೀಲತೆ. ಹೀಗೆ ನೋಡಿದಾಗಲೇ ಜಗತ್ತಿನ ಅತ್ಯುತ್ತಮ ರಾಷ್ಟ್ರ ಫ್ರಾನ್ಸ್ ಎನ್ನಿಸುತ್ತದೆ. ಇಂಗ್ಲೆಂಡಿನ ಮೂರರಷ್ಟು ಭೂಮಿ, ಎರಡು ಸಮುದ್ರಗಳು, ಕೃಷಿ-ಕೈಗಾರಿಕೆಯ ಸಾಮರಸ್ಯ ಪ್ರಕೃತಿ ಸೌಂದರ್ಯ, ಅಪಾರ ಸಂಪತ್ತು ಮತ್ತು ಸಾಹಿತ್ಯ ಕಲೆಗಳ ನಾಡು ಈ ಫ್ರಾನ್ಸ್. ತಮ್ಮ ನಾಡಿನ ಬಗ್ಗೆ ವಿಪರೀತವೆನ್ನುವಷ್ಟು ಹೆಮ್ಮೆಯನ್ನಿಟ್ಟುಕೊಂಡ ಫ್ರೆಂಚ್ ಜನ ತಲೆಹರಟೆಗಳು ಮತ್ತು ಗಂಭೀರರು; ಹೊಸತನ್ನು ಸೃಷ್ಟಿಸಲು ಹಾತೊರೆಯುವವರು ಮತ್ತು ಹಳೆಯ ಪೊರೆಗಳಿಂದ ಹೊರಬರಲು ಕಾತರಿಸುವವರು.


"ಪ್ಯಾರಿಸ್ ಮತ್ತು ವೆನಿಸ್‌ನಲ್ಲಿ ಜೀವಿಸಿದ ಮೇಲೆ ಅಮೆರಿಕದಲ್ಲಿ ಒಂದು ದಿನವಾದರೂ ಇರಲು ಸಾಧ್ಯವೆ?" ಎಂದು ಹೆಮ್ಮಿಂಗ್‌ವೇ ಹೇಳಿದ. ಫ್ರಾನ್ಸ್‌ನ ಪ್ಯಾರಿಸ್ ಮತ್ತು ಇಟಲಿಯ ವೆನಿಸ್ ಅವನ ಅಚ್ಚುಮೆಚ್ಚಿನ ನಗರಗಳಾಗಿದ್ದವು. ಅತ್ಯಂತ ಸೂಕ್ಷ್ಮ ವಿಚಾರಗಳನ್ನು ಗ್ರಹಿಸಬಲ್ಲ, ಅತ್ಯಂತ ಮೋಜಿನ ಜೂಜಿನಲ್ಲಿ ಮುಳುಗಬಲ್ಲ ಹೆಮ್ಮಿಂಗ್‌ವೇ ಈ ನಗರಗಳ ಊಟ, ಮದ್ಯ, ಸಂಗೀತ, ಚಿತ್ರಗಳಲ್ಲಿ ತಲ್ಲೀನನಾಗಿ ಹೋಗುತ್ತಿದ್ದ. ಪ್ಯಾರಿಸ್ ಅನುಭವಗಳನ್ನು ಈತ 'ಮೂವಬಲ್ ಫೀಸ್ಟ್' ಎಂದು ವರ್ಣಿಸಿದ.

ಇಲ್ಲಿ ಒಂದು ವಿಚಿತ್ರವಿದೆ. ಯುದ್ಧ ಮತ್ತು ವಿವಾದದಿಂದ ದೂರವಿದ್ದು ನಿರ್ಲಿಪ್ತವಾಗಿರುವ, ತನ್ನ ಶ್ರೀಮಂತಿಕೆ ಮತ್ತು ಶಾಂತಿಯನ್ನು ಹುಷಾರಾಗಿ ಕಾಪಾಡಿಕೊಳ್ಳುವ ಸ್ವಿಟ್ಜರ್‌ಲೆಂಡ್‌ಗೂ ಫ್ರಾನ್ಸ್‌ಗೂ ಅಪಾರ ವ್ಯತ್ಯಾಸವಿದೆ. ಎರಡನೆಯ ಜಾಗತಿಕ ಯುದ್ಧಕ್ಕೆ ಮುನ್ನ ಜೋಭದ್ರಗೇಡಿಯಾಗಿದ್ದ, ಯೂರೋಪಿನ ಬಡದೇಶಗಳಲ್ಲಿ ಒಂದಾಗಿದ್ದ ಫ್ರಾನ್ಸ್ ಮಹಾಯುದ್ಧದಿಂದ ತಲ್ಲಣಗೊಂಡು ಅಲ್ಲಾಡಿತು; ಈ ಯುದ್ಧವೇ ಈ ದೇಶಕ್ಕೆ ಶಸ್ತ್ರಚಿಕಿತ್ಸೆಯಾಯಿತು. ಆಗ ಎಚ್ಚೆತ್ತ ಈ ದೇಶ ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮುನ್ನಡೆ ಸಾಧಿಸತೊಡಗಿತು. ಹಾಗೆಯೇ ಜಗತ್ತಿನ ದುಬಾರಿ ದೇಶವಾಗಿರುವ ಫ್ರಾನ್ಸ್ ಹೆಮ್ಮಿಂಗ್‌ವೇಗೆ ಹಬ್ಬವಾಗಿದ್ದರೆ, ಬಡವರಿಗೆ ಕನಸಿನ ದೇಶವಾಯಿತು.

-ಆಗಸ್ಟ್ 18, 1991

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 26




ಅಕ್ಷರ ರೂಪ: **ಅಕ್ಷತಾ ಕೆ.**

ರೈತ ಸಂಘದಲ್ಲಿ ಒಡಕು

ರೈತ ಸಂಘದಲ್ಲಿ ಒಡಕು ತಂದವರಾರು? ರೈತ ಸಂಘ ಒಡೆದಿದ್ದಾದರೂ ಯಾಕೆ? ಎಂಬೆಲ್ಲ ಪ್ರಶ್ನೆಗಳಿಗೆ ಹಲವು ಬಾರಿ ಉತ್ತರ ಹುಡುಕಲು ಪ್ರಯತ್ನಿಸಿ ಸೋತಿದ್ದೇನೆ. ಉತ್ತರ ಮಾತ್ರ ದೊರೆತಿಲ್ಲ. ರೈತ ಸಂಘಟನೆಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡಿದ್ದ ಸಾವಿರಾರು ಸಾಮಾನ್ಯ ಕಾರ್ಯಕರ್ತರಿಗೂ ಇವೇ ಪ್ರಶ್ನೆಗಳು ಕಾಡಿ ಉತ್ತರ ಸಿಕ್ಕದೇ ಹೋಗಿರಬಹುದು. ಆದರೆ ಇತ್ತೀಚಿನ ಕೆಲವು ವರ್ಷಗಳಲ್ಲಿ ನಾನು ಇದಕ್ಕೆಲ್ಲ ಯಾರು ಕಾರಣಕರ್ತರು? ಯಾಕೆ ಹೀಗಾಯಿತು ಎಂದೆಲ್ಲ ತಲೆಕೆಡಿಸಿಕೊಳ್ಳದೆ ಎಲ್ಲ ರೈತರು ಒಟ್ಟಾಗಿ ಮತ್ತೆ ಸಂಘಟನೆಯನ್ನು ಪ್ರಬಲಗೊಳಿಸಲು ಮಾರ್ಗ ಯಾವುದು ಎಂಬುದರ ಬಗ್ಗೆಯೇ ಯೋಚಿಸಲು ತೊಡಗಿದ್ದೇನೆ.

ನನ್ನಂತಹ ಸಾವಿರಾರು ಕಾರ್ಯಕರ್ತರು ಬಯಸಿ, ಶ್ರಮಿಸಿ ಕಟ್ಟಿದ ಸಂಘಟನೆ ರೈತ ಸಂಘ. ನಮ್ಮಗಳದ್ದು ಯಾರದ್ದೂ ತಪ್ಪಿಲ್ಲದೆ ಕೆಲವೇ ಕೆಲವರ ಸ್ವಾರ್ಥಕ್ಕೆ, ಆಕಾಂಕ್ಷೆಗಳಿಗೆ ಬಲಿಯಾಗಿ ಒಡೆದು ಹೋಳಾಗಿದ್ದು ನನ್ನ ಬದುಕಿನ ದೊಡ್ಡದೊಂದು ದುಃಖದ ಅಧ್ಯಾಯ.



ರೈತ ಸಂಘದ ಪ್ರಥಮ ದಿನದ ಹೋರಾಟದಿಂದಲೂ ಅದರಲ್ಲಿ ತೊಡಗಿಸಿಕೊಂಡಿರುವ ನಾನು ಇದೇ ಸಂಘಟನೆಯ ಒಡಕಿನ ಮೂಲ ಎಂದು ನಿಖರವಾಗಿ ಹೇಳಲಾರೆ. ಆದರೆ ಈ ಹಂತದಲ್ಲಿ ನಡೆದ ಕೆಲವು ಬೆಳವಣಿಗೆಗಳಲ್ಲಿ ನನ್ನ ಅರಿವಿಗೆ ಬಂದಷ್ಟನ್ನು ಹೇಳುತ್ತೇನೆ. ಕರ್ನಾಟಕದಲ್ಲಿ ಪ್ರಬಲ ಹೋರಾಟವಾಗಿ ಬೆಳೆದ ರೈತ ಸಂಘಕ್ಕೆ ಪ್ರೊ. ನಂಜುಂಡಸ್ವಾಮಿಯವರಿಂದಾಗಿ ವಿದೇಶದಲ್ಲೂ ಇಲ್ಲಿನ ರೈತ ಹೋರಾಟಗಳ ಕೀರ್ತಿ ಜನಜನಿತವಾಯಿತು. ರೈತರ ಸಮಸ್ಯೆಗಳು ಎಲ್ಲ ಕಡೆಯು ಬಹುತೇಕ ಒಂದೆ ತರ ಇರುವುದರಿಂದ ಇಲ್ಲಿನ ಹೋರಾಟಗಳನ್ನು ಅಲ್ಲೂ ಕಾರ್ಯಗತ ಮಾಡಲು ಅಲ್ಲಿನ ರೈತರು ಮುಂದಾದರು. ನಂಜುಂಡಸ್ವಾಮಿಯವರು ಹಲವು ಬಾರಿ ವಿದೇಶಕ್ಕೆ ಹೋಗಿಬಂದರು. ರೈತರನ್ನು ವಿದೇಶಕ್ಕೆ ಕರೆದುಕೊಂಡು ಹೋಗಿ ಪರಸ್ಪರ ಅನುಭವಗಳನ್ನು ಹಂಚಿಕೊಳ್ಳುವ ಕಾರ್ಯಕ್ರಮ ಸೂಚಿಯು ತಯಾರಾಯ್ತು. ವಿದೇಶ ಪ್ರವಾಸಕ್ಕೆ ರೈತರನ್ನು ಕರೆದೊಯ್ಯಲು ಪ್ರತಿ ಜಿಲ್ಲೆಗೆ ಇಂತಿಷ್ಟು ರೈತರನ್ನು ಆಯ್ಕೆ ಮಾಡಬೇಕೆಂದು ಜಿಲ್ಲಾ ಸಮಿತಿಗೆ ಆ ಜವಾಬ್ದಾರಿ ವಹಿಸಲಾಯಿತು. ಜಿಲ್ಲಾ ಸಮಿತಿಯು ಆಯ್ಕೆ ಮಾಡಿದ ರೈತರನ್ನೆಲ್ಲ ಕರೆದುಕೊಂಡು ಹೋಗಿ ನಂಜುಂಡಸ್ವಾಮಿಯವರು ವಿದೇಶಿ ಪ್ರವಾಸ ಮಾಡಿಸಿ ಕೊಂಡು ಬಂದರು.


ಅಲ್ಲಿವರೆಗೂ ಬೇರೆ ಏನೇ ಗೊಂದಲಗಳಿದ್ದರೂ ರೈತ ಸಂಘದಲ್ಲಿ ಹಣದ ಖರ್ಚು ವೆಚ್ಚದ ವಿಷಯದಲ್ಲಿ ಗೊಂದಲಗಳು ಇರಲೇ ಇಲ್ಲ ಎನ್ನಬಹುದು. ಏಕೆಂದರೆ ರೈತ ಸಂಘದ ಯಾವುದೇ ಕಾರ್ಯಕ್ರಮವಾದರೂ ಹೆಚ್ಚಾಗಿ ಕಾಲ್ನಡಿಗೆ ಜಾಥಾಗಳಿರುತಿದ್ದವು. ಮತ್ತು ಎಲ್ಲ ರೈತರು ಅವರವರ ಮನೆಯಿಂದ ಬರುವಾಗಲೇ ರೊಟ್ಟಿಬುತ್ತಿ ಕಟ್ಟಿಕೊಂಡು ಬಂದು ಉಣ್ಣುವ ಸಂಪ್ರದಾಯ ಪಾಲಿಸಿಕೊಂಡು ಬಂದಿದ್ವಿ. ಅತಿಕಡಿಮೆ ಖರ್ಚುವೆಚ್ಚದಲ್ಲೆ ನಮ್ಮ ಕಾರ್ಯಕ್ರಮಗಳು ನಡೆಯುತಿದ್ದವು. ಆದ್ದರಿಂದ ಹಣಕ್ಕಾಗಿ ಬೇರೆಯವರ ಬಳಿ ಹಲ್ಲುಗಿಂಜಿ ಅವರು ಕೊಡುವ ಕಾಣಿಕೆಯಿಂದ ಹೋರಾಟ ಮಾಡುವ ಅಗತ್ಯ ನಮಗೆಂದೂ ಬಂದಿರಲಿಲ್ಲ. ಈ ನಿಟ್ಟಿನಲ್ಲಿ ರೈತ ಹೋರಾಟವು ತುಂಬಾ ಸ್ವಾಭಿಮಾನಿ ಹೋರಾಟವಾಗಿತ್ತು.

ಆದರೀಗ ವಿದೇಶಿ ಪ್ರವಾಸ ಮುಗಿಸಿಬಂದ ಕೂಡಲೇ ರಗಳೆ ಶುರುವಾಯಿತು. ನಮ್ಮ ಹತ್ತಿರ ವಾಪಾಸ್ ಬಂದನಂತರ ಮರಳಿ ಕೊಡುವುದಾಗಿ ಭರವಸೆ ಕೊಟ್ಟು ತಲಾ ಇಷ್ಟು ಹಣವನ್ನು ತೆಗೆದುಕೊಳ್ಳಲಾಗಿತ್ತು, ಆದರೆ ಆ ಹಣವನ್ನು ನಮಗೆ ಮರುಸಂದಾಯ ಮಾಡಿಲ್ಲ ಎಂದು ಹಲವರು ಖ್ಯಾತೆ ತೆಗೆದರು ಮತ್ತು ಹೀಗೆ ಖ್ಯಾತೆ ತೆಗೆದವರಲ್ಲಿ ಹಲವಾರು ಜನ ರೈತರೇ ಆಗಿರಲಿಲ್ಲ. ವಿದೇಶಿ ಪ್ರವಾಸಕ್ಕೆ ಕರೆದೊಯ್ಯಲು ರೈತರನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ಆಯಾ ಜಿಲ್ಲಾ ಸಮಿತಿಗೆ ವಹಿಸಲಾಗಿತ್ತಲ್ಲ ಹೇಗೂ ರೈತರು ಯಾವುದಕ್ಕಾದರೂ ಕೂಡಲೇ ಹೊರಟು ಬಿಡುವಂತವರಲ್ಲ, ಅದರಲ್ಲೂ ಅಷ್ಟು ದೂರದ ದೇಶಗಳಿಗೆ ಹೋಗೋದು ಅಂದ್ರೆ ಹೆದರೋರೆ ಜಾಸ್ತಿ. ಆದ್ದರಿಂದ ಅನಿವಾರ್ಯತೆಯಲ್ಲೋ ಏನೋ ಸಮಿತಿಯವರು ರೈತರ ಜೊತೆ ರೈತರಲ್ಲದವರನ್ನು ಆಯ್ಕೆ ಮಾಡಿ ಕಳಿಸಿದ್ದರು. ಕೆಲವು ಕಡೆಯಂತೂ ರೈತರಿಗಿಂತ ರೈತರಲ್ಲದವರೇ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿ ಪ್ರವಾಸ ಯೋಗ ಪಡೆದರು. ಆಮೇಲೆ ಮರಳಿ ಬಂದಮೇಲೆ ಹಣದ ಗೊಂದಲ ಶುರುವಾಯಿತು.

ಇದೇ ಸಂದರ್ಭದಲ್ಲಿ ಅಮೃತಭೂಮಿ ಟ್ರಸ್ಟ್‌ನ ಬಗ್ಗೆಯೂ ಕೆಲವು ಪ್ರಶ್ನೆಗಳು ಉದ್ಭವವಾದವು. ರೈತ ಹೋರಾಟದಲ್ಲಿ ಸಕ್ರಿಯವಾಗಿರುವ ಇಪ್ಪತ್ತಕ್ಕೂ ಹೆಚ್ಚು ದೇಶಗಳ ರೈತರ ಹಣದಿಂದ ಚಾಮರಾಜನಗರದ ಬಳಿ ಭೂಮಿ ಖರೀದಿಸಲಾಯಿತು. ಬೀಜ ಉತ್ಪಾದನೆ ಮಾಡಿ ರೈತರಿಗೆ ಒಳ್ಳೆಯ ಮತ್ತು ಅಗ್ಗದ ದರದಲ್ಲಿ ಬೀಜ ದೊರಕಿಸಿ ಕೊಡಬೇಕೆಂಬ ಉದ್ದೇಶದಿಂದ ಈ ಭೂಮಿಯನ್ನು ರೈತ ಸಂಘದ ಹೆಸರಲ್ಲೆ ಖರೀದಿಸಲಾಗಿತ್ತು. ನಂಜುಂಡಸ್ವಾಮಿಯವರ ಪ್ರಯತ್ನದ ಫಲವಾಗಿಯೇ ಇದು ಸಾಧ್ಯವಾಗಿದ್ದು. ಆದರೆ ರೈತ ಸಂಘದ ಹೆಸರಲ್ಲಿ ಖರೀದಿಸಿದ ಭೂಮಿಯ ಲೆಕ್ಕ ಪತ್ರಗಳೇನು? ಅದಕ್ಕೆ ಎಂದು ಟ್ರಸ್ಟ್ ಮಾಡಿದರು. ಆ ಟ್ರಸ್ಟ್‌ನಲ್ಲಿ ಯಾರ್‍ಯಾರು ಸದಸ್ಯರಿದ್ದಾರೆ ಎಂದು ಕೇಳಿದರೆ ನಂಜುಂಡಸ್ವಾಮಿಯವರು 'ನನಗೆ ನಿಮ್ಮ ಯಾರಲ್ಲೂ ವಿಶ್ವಾಸವಿಲ್ಲ, ನನಗೆ ಸಾಕಾಗಿಹೋಗಿದೆ. ಏನು ಮಾಡಬೇಕು ಅಂತ ನನಗೆ ಗೊತ್ತಿದೆ. ನೀವು ನನ್ನನ್ನು ಈ ಸಂಬಂಧ ಏನೂ ಪ್ರಶ್ನಿಸಕೂಡದು' ಎಂದೇ ಕೇಳಿದವರ ಬಾಯಿ ಮುಚ್ಚಿಸತೊಡಗಿದರು.

ನನ್ನಂಥವರು ಸ್ನೇಹದ ಕಾರಣಕ್ಕೋ ಅಥವಾ ನಂಜುಂಡಸ್ವಾಮಿಯವರ ಮೇಲಿನ ವಿಶ್ವಾಸಕ್ಕೋ ಏನನ್ನೂ ಕೇಳಲು ಹೋಗದೆ ಸುಮ್ಮನಿದ್ವಿ. ಆದರೆ ತುಂಬಾ ಜನ ನಂಜುಂಡಸ್ವಾಮಿಯವರನ್ನ ವಿರೋಧಿಸಿದರು. ಟ್ರಸ್ಟ್‌ಗೆ ಸದಸ್ಯರನ್ನು ನೇಮಕ ಮಾಡಬೇಕು, ಈ ಭೂಮಿಯ ಖರ್ಚು ವೆಚ್ಚದ ಬಗ್ಗೆ ಅಧಿಕೃತವಾಗಿ ಲೆಕ್ಕ ಕೊಡಬೇಕು ಎಂದು ಪಟ್ಟು ಹಿಡಿದರು. ನಾನು ಮತ್ತು ಕೆಲವರು "ಸುಂದರೇಶ್ ಸಂಘಟನೆಗೆ ದುಡಿದು ಹುತಾತ್ಮರಾಗಿದ್ದಾರೆ. ಅವರ ಮನೆಯವರನ್ನು ಟ್ರಸ್ಟ್‌ಗೆ ತೆಗೆದುಕೊಳ್ಳಿ'' ಎಂದು ಸಲಹೆ ಕೊಟ್ಟೆವು.

ಈ ಸಂದರ್ಭದಲ್ಲಿ ಶಾಸಕರಾಗಿದ್ದ ಪುಟ್ಟಣ್ಣಯ್ಯ ಅವರನ್ನು ನಂಜುಂಡಸ್ವಾಮಿಯವರು ಕರೆದು "ನೋಡಿ, ನನ್ನ ಮೇಲೆ ಏನೇನೋ ತಕರಾರು ಮಾಡ್ತಾ ಇದಾರೆ. ನಾನೀಗ ವಿದೇಶಕ್ಕೆ ಹೊರಟಿದ್ದೀನಿ, ನನ್ನ ಅನುಪಸ್ಥಿತಿಯಲ್ಲಿ ನೀವು ಸಭೆ ನಡೆಸಿ ನನ್ನಿಂದ ಏನು ತಪ್ಪಾಗಿದೆ, ನನ್ನ ಮೇಲೆ ಯಾವ ಆರೋಪಗಳಿವೆ, ಮತ್ತೆ ನಾನು ಯಾವುದಕ್ಕೆ ಉತ್ತರ ಕೊಡಬೇಕಾಗಿದೆ ಎಂಬುದರ ಬಗ್ಗೆ ಚರ್ಚೆ ನಡೆಸಿ ಒಂದು ವರದಿ ಸಿದ್ಧಪಡಿಸಿ. ನಾನು ಬಂದನಂತರ ಮತ್ತೊಂದು ಸಭೆ ನಡೆಸಿ ನಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿ ಕೊಳ್ಳೋಣ'' ಎಂದು ಹೇಳಿಹೋದರು.



ಪುಟ್ಟಣ್ಣಯ್ಯನವರು ಅದೇರೀತಿ ತಿಪ್ಪಗೊಂಡನಹಳ್ಳಿ ಜಲಾಶಯ ಪ್ರದೇಶದಲ್ಲಿ ಸಭೆ ನಡೆಸಿದರು. ಆ ಸಭೆಯಲ್ಲಿ ರೈತ ಸಂಘದ ಎಲ್ಲಾ ಸಮಿತಿ ಸದಸ್ಯರು ಹಾಜರಾಗಿ ಚರ್ಚಿಸಿದೆವು. ನಂತರ ನಂಜುಂಡಸ್ವಾಮಿಯವರು ಬಂದಮೇಲೆ ಶಾಸಕರ ಭವನದಲ್ಲೆ ಮತ್ತೆ ಪುಟ್ಟಣ್ಣಯ್ಯ ನಮ್ಮೆಲ್ಲರನ್ನು ಸೇರಿಸಿ ಸಭೆ ಕರೆದರು. ಆ ದಿನ ನಂಜುಂಡಸ್ವಾಮಿಯವರು ಸಭೆಗೆ ಬರುವುದೇನೋ ಬಂದರು ಆದರೆ ಬಂದವರೇ ಪುಟ್ಟಣ್ಣಯ್ಯರನ್ನು ಕರೆದುಕೊಂಡು ಅವರ ಕೊಠಡಿಗೆ ಹೋದರು. ಅಲ್ಲಿ ಏನು ಮಾತುಕತೆ ನಡೆಯಿತೋ ಗೊತ್ತಿಲ್ಲ. ನಾವೆಲ್ಲ ಕಾಯುತ್ತಾ ಹೊರಗೆ ಕುಳಿತಿದ್ದೆವು. ಆದರೆ ನಂಜುಂಡಸ್ವಾಮಿಯವರು ಹೊರಗೆ ಬರಲೇ ಇಲ್ಲ. ಬಂದಿದ್ದು ಪುಟ್ಟಣ್ಣಯ್ಯ ಮಾತ್ರ. "'ನಾನು ಯಾರ ಜೊತೆಗೂ ಮಾತನಾಡ್ಲಿಕ್ಕೆ ಸಾಧ್ಯವೇ ಇಲ್ಲ' ಎಂದು ಹೇಳಿ ನಂಜುಂಡಸ್ವಾಮಿಯವರು ಆಗಿಂದಾಗ್ಗೆ ಹೊರಟು ಹೋದರು'' ಎಂದು ಪುಟ್ಟಣ್ಣಯ್ಯ ಹೇಳಿದರು. ಇಷ್ಟೇ ನಡೆದಿದ್ದು. ಇದರ ನಂತರ ಎರಡು ಬಣಗಳಾಗಿ ರೈತಸಂಘ ಒಡೆದಿದೆ ಎಂಬ ಸುದ್ದಿ ಪತ್ರಿಕೆಗಳಲ್ಲಿ ಬರತೊಡಗಿತು.

ರೈತ ಸಂಘದಲ್ಲಿ ಒಡಕು ತಂದವರಾರು? ರೈತ ಸಂಘ ಒಡೆದಿದ್ದಾದರೂ ಯಾಕೆ? ಎಂಬೆಲ್ಲ ಪ್ರಶ್ನೆಗಳಿಗೆ ಹಲವು ಬಾರಿ ಉತ್ತರ ಹುಡುಕಲು ಪ್ರಯತ್ನಿಸಿ ಸೋತಿದ್ದೇನೆ. ಉತ್ತರ ಮಾತ್ರ ದೊರೆತಿಲ್ಲ. ರೈತ ಸಂಘಟನೆಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡಿದ್ದ ಸಾವಿರಾರು ಸಾಮಾನ್ಯ ಕಾರ್ಯಕರ್ತರಿಗೂ ಇವೇ ಪ್ರಶ್ನೆಗಳು ಕಾಡಿ ಉತ್ತರ ಸಿಕ್ಕದೇ ಹೋಗಿರಬಹುದು.

ಈ ನಡುವೆ ನನ್ನಂತಹ ಎಷ್ಟೋ ಕಾರ್ಯಕರ್ತರಿಗೆ ಏನು ನಡೀತಿದೆ ಸಂಘಟನೆಯೊಳಗೆ ಎಂಬುದೇ ಸ್ಪಷ್ಟವಾಗಿರಲಿಲ್ಲ. ಆದರೆ ನಂಜುಂಡಸ್ವಾಮಿ ಮತ್ತು ಪುಟ್ಟಣ್ಣಯ್ಯ ಇಬ್ಬರು ಬೇರೆ ಬೇರೆಯಾಗಿ ಹೇಳಿಕೆ ಕೊಡಲು ಪ್ರಾರಂಭಿಸಿದ್ದರು. ನಂಜುಂಡಸ್ವಾಮಿಯವರು ಹಳ್ಳಿ ಕಡೆ ಓಡಾಡಿ ಜನರನ್ನು ಸಂಘಟಿಸ ತೊಡಗಿದ್ದಾರೆ ಅನ್ನೋ ಸುದ್ದಿ ಬರ್ತಿತ್ತು. ಆದರೆ ನಮ್ಮೂರ ಕಡೆ ಬಂದ್ರೂ ನಮ್ಮ ಮನೆಗೆ ಬಾರದೆ ಹೋಗಿದ್ದರು. ನಾವೊಂದಿಷ್ಟು ಜನ ರೈತರು ಎಲ್ಲೋ ಸೇರಿದ್ರು 'ಅಷ್ಟು ಕಷ್ಟಪಟ್ಟು ಕಟ್ಟಿದ ಸಂಘಟನೆ ಹೀಗಾಯ್ತಲ್ಲ. ನಾವೇನು ತಪ್ಪು ಮಾಡಿದ್ವಿ ಅಂತ ನಂಜುಂಡ ಸ್ವಾಮಿಯವರು ಈ ನಿರ್ಧಾರಕ್ಕೆ ಬಂದ್ರು' ಎಂದೆಲ್ಲ ಮಾತಾಡಿಕೊಳ್ತಿದ್ವಿ. ಇನ್ನು ರೈತ ಸಂಘ ಅಧಿಕೃತವಾಗಿ ಎರಡು ಬಣಗಳೆಂದು ಘೋಷಿಸಿ ಕೊಂಡಿರಲಿಲ್ಲ. ಎಲ್ಲ ಅಸ್ಪಷ್ಟವಾಗಿತ್ತು.

ನಾವೊಂದಿಷ್ಟು ರೈತರು 'ನಂಜುಂಡಸ್ವಾಮಿಯವರನ್ನು ಕಂಡು ಇದೆಲ್ಲ ಏನು ಎಂದು ಸ್ಪಷ್ಟ ಮಾಡಿಕೊಳ್ಳೋಣ. ಸಾಧ್ಯವಾದ್ರೆ ಸಂಧಾನವನ್ನೆ ಮಾಡಿಕೊಳ್ಳೋಣ' ಎಂದು ಒಂದು ಬಸ್ ಮಾಡಿಕೊಂಡು ಬೆಂಗಳೂರಿನ ಅವರ ಮನೆಗೆ ಹೋದ್ವಿ. ಇದರಲ್ಲಿ ಹೆಚ್ಚಿನವರು ಭದ್ರಾವತಿ ತಾಲ್ಲೂಕಿನ ರೈತರೇ ಇದ್ದರು. ನಂಜುಂಡಸ್ವಾಮಿಯವರು "ಮನೆಯಲ್ಲಿ ಈ ಬಗ್ಗೆ ಮಾತುಕತೆ ಬೇಡ. ಕಬ್ಬನ್ ಪಾರ್ಕ್‌ಗೆ ಬನ್ನಿ'' ಎಂದರು. ಅಲ್ಲಿಗೆ ಹೋದ್ವಿ. ಅಲ್ಲಿಗೆ ಬಂದು ನಂಜುಂಡಸ್ವಾಮಿಯವರು "ನನಗೆ ಸಂಘಟನೆಯಲ್ಲಿರುವ ಬಹಳ ಜನಗಳ ಮೇಲೆ ಗೌರವವಿಲ್ಲ, ಆದ್ದರಿಂದ ಅವರ ಜೊತೆ ನಾನು ಇರೋದಕ್ಕೆ ಸಾಧ್ಯವಿಲ್ಲ, ಅದಕ್ಕೆ ಬೇರೆ ಸಂಘಟನೆ ಮಾಡ್ತಿದೀನಿ'' ಎಂದರು. ಎಂಥವರ ಬಗ್ಗೆ ಗೌರವವಿಲ್ಲ ಎಂದು ಹೇಳಿ ಅಂತ ಕೇಳಿದ್ರೆ ಯಾರದೇ ಹೆಸರು ಹೇಳಲಿಕ್ಕೆ ಅವರು ಸಿದ್ಧರಿರಲಿಲ್ಲ, ನಾವು ಬೇಸರದಿಂದ ವಾಪಸಾದೆವು.

ನಂತರದಲ್ಲಿ ನಮ್ಮ ಸಂಘಟನೆಯ ಯಜಮಾನರಾಗಿದ್ದ ರುದ್ರಪ್ಪನವರ ಸಮಾಧಿ ಬಳಿ ಎರಡು ಬಣಗಳ ರೈತರು ಪರಸ್ಪರ ಒಟ್ಟಾಗೋದು ಎಂಬ ಯೋಜನೆಯನ್ನು ರೂಪಿಸಿ ಎಲ್ಲ ರೈತರಿಗೂ ಕರೆಕೊಟ್ಟೆವು. ಆ ದಿನ ಸಂಘಟನೆಯ ಮುಂಚೂಣಿಯಲ್ಲಿದ್ದ ಬಹುತೇಕರು ಹಾಜರಿದ್ದರು. ನಂಜುಂಡಸ್ವಾಮಿ, ಕೆ.ಟಿ.ಗಂಗಾಧರ್ ಮತ್ತಿತರ ಕೆಲವರನ್ನು ಬಿಟ್ಟು. ಅಂತೂ ಒಂದು ಸ್ಪಷ್ಟವಾಯಿತು: ರೈತ ಸಂಘ ಎರಡು ಬಣಗಳಾಗಿ ಒಡೆದಿದೆ. ಪುಟ್ಟಣ್ಣಯ್ಯನ ಬಣದಲ್ಲಿ ಇರುವವರು ಇಲ್ಲಿ ಸೇರಿದ್ದೇವೆ. ಯಾರು ಬಂದಿಲ್ಲವೊ ಅವರು ನಂಜುಂಡಸ್ವಾಮಿ ಬಣಕ್ಕೆ ಸೇರಿದವರು ಎಂದು. ಹೀಗೆ ಪರಸ್ಪರ ಒಟ್ಟಾಗುವ ಆಶಯದಿಂದ ಸೇರಿದ್ದ ಸಭೆಯಲ್ಲೆ ಸಂಘಟನೆಯಲ್ಲಿ ಒಡಕು ಬಂದಿರುವುದು ಸ್ಪಷ್ಟವಾಗಿದ್ದು ವಿಪರ್ಯಾಸ.

ಇದಾದನಂತರ ರೈತಸಂಘ ಅಧಿಕೃತವಾಗಿಯೇ ಎರಡು ಗುಂಪುಗಳಾಗಿ ಕಾರ್ಯನಿರ್ವಹಿಸತೊಡಗಿತು. ಆ ನಂತರ ಈ ಸಂಬಂಧ ಮತ್ತೊಂದು ಘಟನೆ ನಡೆಯಿತು. ಸುಂದರೇಶ್ ಅವರ ಪುಣ್ಯತಿಥಿ ಕಾರ್ಯಕ್ರಮವನ್ನು ಅಶೋಕನಗರದ ಅವರ ತೋಟದಲ್ಲಿರುವ ಸಮಾಧಿ ಎದುರಿಗೆ ಅರ್ಥಪೂರ್ಣವಾಗಿ ಪ್ರತಿ ವರ್ಷ ನಡೆಸಿಕೊಂಡು ಬರುತಿದ್ದೆವು. ಅಂದು ಇಡೀ ದಿನ ಅಲ್ಲಿ ಕಾರ್ಯಕ್ರಮ ಮಾಡುತಿದ್ದೆವು. ಇದರ ಸಂಪೂರ್ಣ ಜವಾಬ್ದಾರಿ ಮತ್ತು ಖರ್ಚು ವೆಚ್ಚ ಎಲ್ಲವನ್ನು ಭದ್ರಾವತಿ ತಾಲ್ಲೂಕು ರೈತಸಂಘವೇ ನೋಡಿಕೊಳ್ಳುತ್ತಿತ್ತು. ನಾಡಿನ ಎಲ್ಲ ಕಡೆಯಿಂದ ರೈತರು ಆ ದಿನ ಅಲ್ಲಿಗೆ ಬರುತಿದ್ದರು.

ಹೀಗೆ ಪರಸ್ಪರ ಎರಡು ಸಂಘಟನೆಗಳ ಗೊಂದಲ ಮುಂದುವರೆಯುತ್ತಿರುವಾಗಲೇ 1999ರಲ್ಲಿ ಸುಂದರೇಶರ ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಳ್ಳಲು ಬಂದ ನಂಜುಂಡಸ್ವಾಮಿಯವರನ್ನು ಸುಂದರೇಶರ ಮಗಳು ಶಾಮಾವನಿ ತಡೆದು "ಪ್ರೊಫೆಸರ್, ನಮ್ಮ ಅಪ್ಪನ ಸಮಾಧಿಗೆ ಹೂವಿಡುವ ಮುಂಚೆ ನೀವು ಎರಡು ಬಣಗಳನ್ನು ಒಟ್ಟು ಮಾಡಿಕೊಂಡು ಬರಬೇಕು. ಅಲ್ಲಿಯವರೆಗೂ ನಾನು ನಿಮಗೆ ಅಪ್ಪನ ಸಮಾಧಿಗೆ ಹೂವಿಡಕ್ಕೆ, ಕೈ ಮುಗಿಲಿಕ್ಕೆ ಏನಕ್ಕೂ ಅವಕಾಶ ಕೊಡುವುದಿಲ್ಲ'' ಎಂದು ಜೋರು ಧ್ವನಿಯಲ್ಲೆ ಎಚ್ಚರಿಕೆ ನೀಡಿದ್ದಾಳೆ. ಅದಕ್ಕೆ ನಂಜುಂಡಸ್ವಾಮಿಯವರು ಹೆಚ್ಚಿನ ಪ್ರತಿಕ್ರಿಯೆ ಏನೂ ನೀಡದೆ ಕೆ.ಟಿ.ಗಂಗಾಧರ್ ಜೊತೆ ವಾಪಾಸಾದರಂತೆ. ಈ ಸಂದರ್ಭದಲ್ಲಿ ನಾನು ಅಲ್ಲಿ ಇರಲಿಲ್ಲ. ಆ ದಿನ ನಾನು ಮೊದಲಿಗೆ ಅರಹತೊಳಲು ಕೈಮರದಲ್ಲಿ ಸ್ಥಾಪಿಸಲಾಗಿರುವ ಎನ್.ಡಿ. ಸುಂದರೇಶ್ ವೃತ್ತದಲ್ಲಿರುವ ಅವರ ಹೆಸರಿನ ಬೋರ್ಡ್ ಕಲ್ಲಿಗೆ ಒಂದು ಹಾರ ಹಾಕಿ ನಂತರ ಅವರ ಸಮಾಧಿ ಬಳಿ ತೆರಳುವುದು ನಾನು ಪಾಲಿಸಿಕೊಂಡು ಬಂದಿರುವ ರೂಢಿ. ಆ ದಿನವೂ ನಾನು ಮತ್ತು ಶ್ರೀದೇವಿ ಇಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಸಮಾಧಿ ಬಳಿ ತೆರಳುತಿದ್ದಾಗ ದಾರಿಯಲ್ಲಿ ನಂಜುಂಡಸ್ವಾಮಿಯವರ ಕಾರು ನಮ್ಮ ಕಾರಿಗೆ ಎದುರಾಯ್ತು. ಕಾರನ್ನು ಓಡಿಸುತಿದ್ದ ಕೆ.ಟಿ.ಗಂಗಾಧರ್ ಏನನ್ನೋ ಹೇಳಿದರು. ನನಗೆ ಏನು ಎಂದು ಸ್ಪಷ್ಟವಾಗಲಿಲ್ಲ. ನಂತರದಲ್ಲಿ ಅಲ್ಲಿ ಹೋದಮೇಲೆ ನಡೆದ ಘಟನೆ ಸ್ಪಷ್ಟವಾಯ್ತು.

ಯಾವಾಗ ಸುಂದರೇಶರ ಸಮಾಧಿ ಮುಂದೆಯು ರೈತ ಸಂಘದವರು ಒಟ್ಟಾಗುವ ಕುರಿತು ನಂಜುಂಡ ಸ್ವಾಮಿಯವರು ಯಾವ ಆಶಯವನ್ನು ಪ್ರಕಟಿಸಲಿಲ್ಲವೋ ಅಲ್ಲಿಗೆ ರೈತ ಸಂಘ ಒಟ್ಟಾಗೋದು ಅದರ ನಾಯಕನಿಗೆ ಇಷ್ಟವಿಲ್ಲ ಎಂಬುದು ಸ್ಪಷ್ಟವಾಯಿತು. ಈ ಬೆಳವಣಿಗೆ ನಡೆದ ಒಂದೆರಡು ವರ್ಷದ ನಂತರ "ಸುಂದರೇಶರ ಸಮಾಧಿ ಎದುರು ಶ್ರದ್ಧಾಂಜಲಿ ಸಭೆ ನಡೆಸಲು ನಾವು ಅವಕಾಶ ನೀಡುವುದಿಲ್ಲ, ನೀವು ಶ್ರದ್ಧಾಂಜಲಿ ಸಭೆ ಮಾಡಬೇಕೆಂದಿದ್ದರೆ ಬೇರೆಲ್ಲಾದರೂ ಮಾಡಿಕೊಳ್ಳಿ'' ಎಂದು ಸುಂದರೇಶ್ ಕುಟುಂಬದವರು ರೈತ ಸಂಘದವರಿಗೆ ಸ್ಪಷ್ಟವಾಗಿ ತಿಳಿಸಿದರು. ಈಗ ಆರೇಳು ವರ್ಷಗಳೇ ಆಗಿವೆ ಸುಂದರೇಶ್ ಸಮಾಧಿ ಎದುರಿಗೆ ರೈತರು ಶ್ರದ್ಧಾಂಜಲಿ ಸಭೆ ನಡೆಸದೆ....


■

ನಾಲ್ಕು ಕೋಟಿ ನುಂಗಿದ ದುಬೈಬಾಬು!



'ಬುದ್ಧಿವಂತ'ನ ಬೆನ್ನೇರಿ ತಾನೂ
ನನಂತೆಯೇ ದುಡ್ಡು ಬಾಚಬೇಕೆಂದು
ೂರಟಿದ್ದ ನಿರ್ಮಾಪಕ ಶೈಲೇಂದ್ರಬಾಬು ಇವತ್ತು
ಶಿವಾ ಅಂತ ತಲೆ ಮೇಲೆ ಕೈಹೊತ್ತು
ುತಿದ್ದಾರೆ. ಕಾರಣ; ಚಿತ್ರೀಕರಣದಿಂದ ಹಿಡಿದು
ೃಸಿಟ ತನಕ ಐದೂವರೆ ಕೋಟಿ ಖರ್ಚು
ಾಡಿ ನಿರ್ಮಿಸಿದ್ದ 'ದುಬೈ ಬಾಬು' ಕುತ್ತಿಗೆ
ಸುಕಿಸಿಕೊಂಡು ಮಗುಚಿ ಬಿದ್ದುಬಿಟ್ಟಿದ್ದಾನೆ.

ಇದರಿಂದ ಶೈಲೇಂದ್ರ ಬಾಬುಗೆ
ಾರುವ ನಷ್ಟ ಬರೀ ನಾಲ್ಕು ಕೋಟಿ
ೂಪಾಯಿಗಳು!




ಶೈಲೇಂದ್ರ ಬಾಬು+ದುಬೈ ಬಾಬು=ಖಾಲಿ ಜೇಬು!

ಹೀಗೆ ಪ್ರಾಸದ ಲೆಕ್ಕಾಚಾರ
ಾಕಿ ನಗಾಡುತ್ತಿದೆ
ಾಂಧಿನಗರ. ಆದರೆ
ಾಕ್ಕೂ ತಪ್ಪು
ಕ್ಕಾಚಾರ
ಾಕಿದ್ದು
ಶೈಲೇಂದ್ರ
ಾಬು.
ಾವಾಗ
ನ್ ಅವನ್
ುಬೈ' ಎಂಬ ತಮಿಳು
ತ್ರದಿಂದ
ುಟೆಕುಗೊಂಡ
ಬುದ್ಧಿವಂತ' ನಿರೀಕ್ಷೆಗೂ
ೀರಿ ಸೂಪರ್ ಹಿಟ್
ಯಿತೋ, ಆತುರಕ್ಕೆ ಬಿದ್ದ
ಶೈಲೇಂದ್ರ ಬಾಬು "ಇದೇ ಒಳ್ಳೇ
ಮು, ಉಪೇಂದ್ರನನ್ನು ಹಾಕಿಕೊಂಡು
ಣ ಮತ್ತೊಂದು ರಿಮೇಕ್ ಸಿನಿಮಾ
ಾಡಿಬಿಟ್ಟರೆ ಜಾಕ್‌ಪಾಟ್
ೊಡೆದಂಗೇ....." ಎಂದು ತೆಲುಗಿನ
ುಬೈ ಸೀನು' ಚಿತ್ರದ ಹಕ್ಕನ್ನು
ದು ಅದಾಗಲೇ ಎಕ್ಸ್‌ಪೈರ್ ಆಗಿದ್ದ
ರ್ದೇಶಕ ನಾಗಣ್ಣರ ಕೈಗಿಟ್ಟರು.
ಪ್ವಾಳಿ', 'ಬಂಧು ಬಳಗ'ದಂಥ
ಪ್ ಚಿತ್ರಗಳನ್ನು ನಿರ್ದೇಶಿಸಿದ್ದ
ಗಣ್ಣನಿಗೂ ಬೇರೆ
ಕೆಲಸವಿಲ್ಲದ್ದರಿಂದ ತರಾತುರಿಯಲ್ಲಿ 'ದುಬೈ ಬಾಬು'ವನ್ನು ಸುತ್ತಿಟ್ಟರು.

ಅವನು 'ಶ್ರಮವಂತ'!

'ಬುದ್ಧಿವಂತ' ರಿಮೇಕ್ ಚಿತ್ರವಾಗಿದ್ದರೂ ಅದಕ್ಕೆ ಗೆಲುವು ಸುಮ್ಮನೇ ದಕ್ಕಿದ್ದಲ್ಲ. ಅದರ ಹಿಂದೆ ಸ್ವತಃ ಉಪೇಂದ್ರನ ಅಪಾರ ಶ್ರಮವಿತ್ತು. ಆಗ ಹೊಸಬರ ಅಲೆ ಜೋರಾಗಿತ್ತು. ಕಾಮಿಡಿ ಟೈಮ್ ಗಣೇಶ ಕೆಲವೇ ದಿನಗಳಲ್ಲಿ ಗೋಲ್ಡನ್ ಸ್ಟಾರ್ ಆಗಿ ಮಿಂಚುತ್ತಿದ್ದ. ವಿಜಯ್, ಪ್ರೇಮ್, ದರ್ಶನ್, ಸುದೀಪ್ ಇವರೆಲ್ಲಾ ಸೋಲು ಗೆಲುವುಗಳನ್ನು ಸಮಾನವಾಗಿ ಬ್ಯಾಲೆನ್ಸ್ ಮಾಡಿ 'ಮಿನಿಮಮ್ ಗ್ಯಾರೆಂಟಿ ನಟರು' ಎನಿಸಿಕೊಂಡಿದ್ದರು. ಆದರೆ ದಶಕದ ಹಿಂದಿನ ಟ್ರೆಂಡ್ ಸೆಟ್ಟರ್, ರಿಯಲ್‌ಸ್ಟಾರ್ ಉಪೇಂದ್ರ ಮಾತ್ರ ಅವತ್ತಿನ ಮಟ್ಟಿಗೆ ಅಕ್ಷರಶಃ ಬರಿದಾಗಿಬಿಟ್ಟಿದ್ದರು. 'ಉಪೇಂದ್ರನ ಕಥೆ ಮುಗೀತು' ಅಂತಲೇ ಜನ ಮಾತಾಡಿಕೊಳ್ಳುತ್ತಿದ್ದರು.


ಶೈಲೇಂದ್ರಬಾಬು

ತಕ್ಷಣಕ್ಕೊಂದು ಹಿಟ್ ಚಿತ್ರವನ್ನು ಕೊಡದಿದ್ದರೆ ತನ್ನ ಹೆಸರು ನಾಮಾವಶೇಷವಾಗಿಬಿಡುತ್ತದೆ ಎಂದರಿತ ಉಪೇಂದ್ರ ತಿಂಗಳುಗಟ್ಟಲೆ ತನ್ನ ಮನೆಯಲ್ಲೇ ಕೂತು ತಮಿಳು ಚಿತ್ರವನ್ನು ಕನ್ನಡದ ನೇಟಿವಿಟಿಗೆ ಬದಲಾಯಿಸಿ 'ಬುದ್ಧಿವಂತ'ನನ್ನಾಗಿಸಿದರು. ಮಾತ್ರವಲ್ಲದೆ, ಆತನೇ ಕೂತು ಚಿತ್ರಕಥೆ ಬರೆದರಲ್ಲದೆ, ಪಡ್ಡೆಗಳಿಗೆ ಬೇಕಾದ ಪಂಚಿಂಗ್ ಡೈಲಾಗುಗಳು, 'ಚಿತ್ರಾನ್ನ'ದಂತಹ ಹಾಡುಗಳನ್ನೂ ಬರೆದು ಸಿದ್ಧಪಡಿಸಿದ್ದರು. ಇಂತಹ ಎಲ್ಲ ಮಸಾಲೆಗಳಿಂದ 'ಬುದ್ಧಿವಂತ' ರೂಪುಗೊಂಡಿದ್ದ. ಫಲಿತಾಂಶವಾಗಿ 'ಬುದ್ಧಿವಂತ' ಚಿತ್ರ 2008ನೇ ಸಾಲಿನಲ್ಲಿ ಬಾಕ್ಸಾಫೀಸನ್ನು ಕೊಳ್ಳೆಹೊಡೆದಿತ್ತು, ಕಳೆದುಹೋಗಿದ್ದ ಉಪೇಂದ್ರನ ಕ್ರೇಜೂ ಮರಳಿ, ಮತ್ತೊಮ್ಮೆ 'ಉಪ್ಪಿ ಮೇನಿಯಾ' ಸೃಷ್ಟಿಸಿತ್ತು.

ಇದರಲ್ಲಿ ಉಪ್ಪೂ ಇಲ್ಲ ಖಾರವೂ ಇಲ್ಲ!

ಆದರೆ 'ದುಬೈ ಬಾಬು' ಚಿತ್ರಕ್ಕೆ ಶೈಲೇಂದ್ರಬಾಬು ಅದೆಷ್ಟೇ ಕೋಟಿ ಸುರಿದರೂ, ಇದೊಂಥರಾ ಫಾಸ್ಟ್‌ಫುಡ್ ಆಗಿದ್ದರಿಂದ ನೋಡುಗರಿಗೆ ಜೀರ್ಣಿಸಿಕೊಳ್ಳುವುದು ಸಾಧ್ಯವಾಗಲೇ ಇಲ್ಲ. 'ಬುದ್ಧಿವಂತ'ದಲ್ಲಿ ಇದ್ದಂತೆ ಸ್ಪೈಸಿ ಡೈಲಾಗುಗಳು, ಹಸಿಹಸಿ ಹಾಡುಗಳೂ ಇರಲಿಲ್ಲ. ಬದಲಾಗಿ ಕುಲಗೆಟ್ಟ ಸಾಲುಗಳನ್ನು ಬರೆಯುವ ಕೇಶವಾದಿತ್ಯ ಎಂಬ ಸಂಭಾಷಣಾಕಾರನ ಉಪ್ಪು-ಖಾರವಿಲ್ಲದ ಮಾತುಗಳು ಉಪ್ಪಿ ಅಭಿಮಾನಿಗಳಿಗೆ ಚಿಟಿಕೆಯಷ್ಟೂ ರುಚಿಸಲಿಲ್ಲ.


ಹಳೇ ಲೆಕ್ಕ ಚುಕ್ತಾ

ಉಪೇಂದ್ರ ಮತ್ತು ಶೈಲೇಂದ್ರಬಾಬು ನಡುವೆ ಹಳೇ ಕಮಿಟ್‌ವೊಂದು ಹಾಗೇ ಉಳಿದುಬಿಟ್ಟಿತ್ತು. ಬಹಳ ಹಿಂದೆ 'ಗೌರಮ್ಮ', 'ಕುಟುಂಬ' ಹಿಟ್ ಆದಾಗಲೇ ನೀಡಿದ್ದ ಅಡ್ವಾನ್ಸ್ ಹಣಕ್ಕೆ ಚಿತ್ರವೊಂದನ್ನು ಮುಗಿಸಿಕೊಡುವ ಜವಾಬ್ದಾರಿ ಉಪ್ಪಿ ಹೆಗಲಿಗಿತ್ತು. ಹೇಗಾದರೂ ಮಾಡಿ ಹಳೆಯ ಲೆಕ್ಕವನ್ನು ಚುಕ್ತಾ ಮಾಡಿ ಕೈತೊಳೆದುಕೊಳ್ಳಬೇಕು ಎಂದು ಕಾದುಕುಳಿತಿದ್ದ ಉಪ್ಪಿಗೆ ಎದುರಾಗಿದ್ದು 'ದುಬೈಬಾಬು' ಎಂಬ ಗಡಿಬಿಡಿ ಸಂತಾನ.


ನಾಗಣ್ಣ

'ನಾಲ್ಕಾಣೆ ಕೋಳಿಗೆ ಹನ್ನೆರಡಾಣೆ ಮಸಾಲೆ ಅರೆದರು' ಎಂಬಂತೆ ಉಪ್ಪಿಗೆ ಕೊಟ್ಟಿದ್ದ ಅಡ್ವಾನ್ಸ್ ಎಲ್ಲಿ ನಷ್ಟವಾಗುತ್ತೋ ಎಂದು 'ದುಬೈ ಬಾಬು' ಚಿತ್ರವನ್ನು ನಿರ್ಮಿಸಿ ಅದಕ್ಕಿಂತ ಹತ್ತು ಪಟ್ಟು ಹಣ ಕಳೆದುಕೊಂಡಿರುವ ನಿರ್ಮಾಪಕ ಶೈಲೇಂದ್ರ ಬಾಬು ಅವರನ್ನು ಮುಂಬರುವ ಅವರ 'ಇನಿಯ'ನೇ ಕಾಪಾಡಬೇಕು!

● ಅರುಣ್.ಜಿ



ನಕಲು ಮಾಡಲಾಗದ ಕ್ಯಾಸೆಟ್

ಕ್ಯಾಸೆಟ್ ಲೋಕದಲ್ಲಿ ಆನಂದ ಆಡಿಯೋದ ಮೋಹನ್ ಅವರು ಇನ್ನೊಂದು ಹೊಸ ಕ್ರಾಂತಿಯನ್ನು ಹುಟ್ಟುಹಾಕಿದ್ದಾರೆ. ಕೆಲವು ವರ್ಷಗಳ ಹಿಂದೆ 'ಫ್ರೆಂಡ್ಸ್' ಚಿತ್ರವನ್ನು ನಿರ್ಮಿಸಿದಾಗ ಅದರ ಕ್ಯಾಸೆಟ್‌ಅನ್ನು ಹದಿನೈದು ರೂ.ಗೆ ಮಾರಾಟ ಮಾಡಿ ಮೋಹನ್ ಗಾಂಧಿನಗರದಲ್ಲಿ ಕ್ರಾಂತಿ ಹುಟ್ಟುಹಾಕಿದ್ದರು.

ಇದೀಗ 'ಭಾಗ್ಯದ ಬಳೆಗಾರ' ಚಿತ್ರದ ಕ್ಯಾಸೆಟ್ ಮುಖಾಂತರ ಮೋಹನ್ ಮತ್ತೊಮ್ಮೆ ಕನ್ನಡ ಚಿತ್ರೋದ್ಯಮ ಅವರೆಡೆಗೆ ನೋಡುವಂತೆ ಮಾಡಿದ್ದಾರೆ. ಅದೇನೆಂದರೆ ಈ ಚಿತ್ರದ ಕ್ಯಾಸೆಟ್‌ಅನ್ನು ಯಾರೂ ನಕಲಿ ಮಾಡಲು ಸಾಧ್ಯವೇ ಇಲ್ಲವಂತೆ. ಅಂತಹ ಒಂದು ಸಾಫ್ಟ್‌ವೇರ್ ಅನ್ನು ಬಳಸಿ ಈ ಕ್ಯಾಸೆಟ್‌ಅನ್ನು ನಿರ್ಮಿಸಿದ್ದಾರಂತೆ. ಹೀಗಾಗಿ ಕ್ಯಾಸೆಟ್ ಪೈರಸಿ ಮತ್ತು ನಕಲಿ ಕ್ಯಾಸೆಟ್ ವ್ಯವಹಾರಕ್ಕೆ ತನ್ನದೇ ಆದ ರೀತಿಯಲ್ಲಿ ತಡೆಯೊಡ್ಡಿದ್ದಾರೆ. ಇದು ಭಾರತದಲ್ಲೇ ಮೊದಲ ಬಾರಿ ಆಗಿರುವುದರಿಂದ ಇನ್ನು ಮುಂದೆ ಎಲ್ಲಾ ಕ್ಯಾಸೆಟ್ ಕಂಪೆನಿಗಳು ಈ ಸಾಫ್ಟ್‌ವೇರ್‌ಗೆ ಶರಣಾಗಬಹುದು.

ಇದರಿಂದ ಒಂದೇ ಒಂದು ನಷ್ಟವೆಂದರೆ 'ಗೂಂಡಾ ಕಾಯ್ದೆ'ಯನ್ನು ಜಾರಿಗೆ ತನ್ನಿ ಎಂದು ಭಾಷಣ ಮಾಡುವ ಚಿತ್ರೋದ್ಯಮಿಗಳ ಪಾಲಿಗೆ ಇನ್ನು ಮುಂದೆ ಭಾಷಣಕ್ಕೆ ವಿಷಯವಿಲ್ಲದಂತಾಗಬಹುದು. ಯಾಕೆಂದರೆ ಎಲ್ಲರೂ ಈ ಸಾಫ್ಟ್‌ವೇರ್ ತಂತ್ರಜ್ಞಾನ ಬಳಸಿ ಕ್ಯಾಸೆಟ್ ನಿರ್ಮಿಸಿದರೆ 'ಗೂಂಡಾ ಕಾಯ್ದೆ'ಯ ಅಗತ್ಯವೇ ಇಲ್ಲ. ■



ರಮೇಶ್ ಇನ್ ಕಾಮಿಡಿ ಜರ್ನಿ!

ರಮೇಶ್ ಅರವಿಂದ್ ನಿರ್ದೇಶನದ 'ವೆಂಕಟ ಇನ್ ಸಂಕಟ' ಚಿತ್ರ ಪಿವಿಆರ್ ಥಿಯೇಟರ್‌ನಲ್ಲಿ ಸದ್ದುಗದ್ದಲವಿಲ್ಲದೆ ನೂರು ದಿನ ಪೂರೈಸಿದೆ. ರಮೇಶ್ ಸೆಂಚುರಿ ಬಾರಿಸಿದರೂ ಗಾಂಧಿನಗರದಿಂದ ನಿರ್ದೇಶನದ ಅವಕಾಶಗಳೇನೂ ಅವರನ್ನು ಹಿಂಬಾಲಿಸಿಕೊಂಡು ಬರಲಿಲ್ಲ. ಇನ್‌ಫ್ಯಾಕ್ಟ್ ಅವರು ಹೊಡೆದ ಸೆಂಚುರಿ ಉದ್ಯಮದವರ ಗಮನಕ್ಕೆ ಬರಲಿಲ್ಲ.

ಈಗ ರಮೇಶ್ ಮತ್ತೆ ನಟನೆಯತ್ತ ಸಾಗಿದ್ದಾರೆ. ಅದೂ ಎರಡೆರಡು ಚಿತ್ರಗಳಿಗೆ ನಾಯಕನಟನಾಗಿ ಆಯ್ಕೆಯಾಗಿದ್ದಾರೆ. ಒಂದು ಚಿತ್ರದಲ್ಲಿ ಹಾಸ್ಯನಟ ಕೋಮಲ್ ಇವರಿಗೆ ಜೋಡಿ. ಈ ಚಿತ್ರದ ಹೆಸರು 'ಮೂರುಗುಟ್ಟು, ಒಂದು ಸುಳ್ಳು, ಒಂದು ನಿಜ'. ದಿನೇಶ್ ಬಾಬು ಇವನ್ನು ನಿರ್ದೇಶಿಸುತ್ತಿದ್ದಾರೆ. ಇನ್ನೊಂದು ಚಿತ್ರವನ್ನು ಬಿ.ರಾಮಮೂರ್ತಿ ನಿರ್ದೇಶಿಸಲಿದ್ದು ಅದಕ್ಕೆ 'ಹೇ ಸರಸು' ಎಂಬ ಹೆಸರಿಟ್ಟಿದ್ದಾರೆ. ಎರಡೂ ಹಾಸ್ಯ ಪ್ರಧಾನ ಚಿತ್ರಗಳು. ಹಾಸ್ಯದ ಇಮೇಜಿನಿಂದ ಹೊರಬಂದು ಬೇರೆ ತರಹದ ಪಾತ್ರ ಮಾಡಬೇಕೆಂಬ ಉತ್ಸಾಹದಲ್ಲಿರುವ ರಮೇಶ್‌ಗೆ ಹಾಸ್ಯ ಪಾತ್ರಗಳೇ ಸಿಗುತ್ತಿರುವುದು ವಿಪರ್ಯಾಸ. ■



ಲೆಕ್ಕಾಚಾರ'ದ ಚೆಲುವೆ ರಾಧಿಕಾ ಪಂಡಿತ್

ರಾಧಿಕಾ ಪಂಡಿತ್ ಎಂಬ ಬೊಗಸೆ ಕಂಗಳ ಹುಡುಗಿ ಮತ್ತೊಮ್ಮೆ ಎಲ್ಲರೂ ಬೆಚ್ಚಿಬೀಳುವಂತೆ ನಟಿಸಿದ್ದಾಳೆ. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಒಲವೇ ಜೀವನ ಲೆಕ್ಕಾಚಾರ' ಚಿತ್ರವನ್ನು ನೀವು ಇಷ್ಟಪಡದಿರಬಹುದು ಆದರೆ ಅದರ ನಾಯಕಿ ರಾಧಿಕಾಳ ನಟನೆಯಂತೂ ಖಂಡಿತ ನಿಮಗೆ ಇಷ್ಟವಾಗುತ್ತದೆ.

ಈಕೆ ಶಶಾಂಕ್ ನಿರ್ದೇಶನದ 'ಮೊಗ್ಗಿನ ಮನಸ್ಸು' ಚಿತ್ರದಲ್ಲಿ ಮೊದಲ ಬಾರಿಗೆ ಎಲ್ಲರೂ ಆಶ್ಚರ್ಯಪಡುವಷ್ಟು ಸುಂದರವಾಗಿ ನಟಿಸಿದ್ದಳು. ನಟನೆಯಲ್ಲಿ ಈಕೆ ಈಗ ಇನ್ನಷ್ಟು ಪರಿಪಕ್ವವಾಗಿದ್ದಾಳೆ. ಚೆಲ್ಲುಚೆಲ್ಲು ದೃಶ್ಯದಲ್ಲೂ, ಭಾವಪೂರ್ಣ ದೃಶ್ಯದಲ್ಲೂ ಅದ್ಭುತವಾಗಿ ನಟಿಸಿರುವ ಈಕೆಗೆ ಚಿತ್ರರಂಗದಲ್ಲಿ ಉಜ್ವಲ ಭವಿಷ್ಯವಿದೆ.

ಕಣ್ಣಲ್ಲೇ ಮಾತಾಡುವ ಈ ಬೊಗಸೆ ಕಂಗಳ ನಾಯಕಿ, ಪಾತ್ರಮಾತ್ರ ಉಡುಪುಗಳಲ್ಲಿ ಸ್ವಲ್ಪ ಎಳಸುಎಳಸಾಗಿ ಕಾಣಿಸುತ್ತಾಳೆ ಎಂಬುದನ್ನು ಬಿಟ್ಟರೆ ಈಕೆಯ ಬಗ್ಗೆ ಬೇರೆ ಆಕ್ಷೇಪಗಳೇನೂ ಕಂಡುಬರುವುದಿಲ್ಲ. ಸದ್ಯಕ್ಕೆ ಪುನೀತ್ ದೇವರಾಜ್ ಜೊತೆ 'ಸೂಪರ್‌ಮ್ಯಾನ್' ಮತ್ತು ತರುಣ್ ಜೊತೆ 'ಲವ್‌ಗುರು' ಚಿತ್ರದಲ್ಲಿ ಈಕೆ ನಾಯಕಿಯಾಗಿ ನಟಿಸುತ್ತಿದ್ದಾಳೆ. ಇವೆರಡು ಚಿತ್ರಗಳು ಬಾಕ್ಸಾಫೀಸಿನಲ್ಲಿ ಯಶಸ್ಸು ಕಂಡರೆ ಈ ಹುಡುಗಿಗೆ ತಾರಾಪಟ್ಟ ದೊರೆತರೂ ಆಶ್ಚರ್ಯವಿಲ್ಲ.



ಚಿಮ್ಮದ ಕಾರಂಜಿ

ಕಳೆದ ವಾರ ತೆರೆಕಂಡ 'ಕಾರಂಜಿ' ಚಿತ್ರದ ಬಗ್ಗೆ ಬಹಳಷ್ಟು ಕುತೂಹಲವಿತ್ತು. ಆ ಚಿತ್ರಕ್ಕೆ ವಿಭಿನ್ನವಾದ ಹಾಡುಗಳನ್ನು ನೀಡಿದ್ದ ಸಂಗೀತ ನಿರ್ದೇಶಕ ವೀರಸಮರ್ಥ್ ಇದಕ್ಕೆ ಮುಖ್ಯ ಕಾರಣ. ಎರಡನೆಯದಾಗಿ ಕನ್ನಡ ಬ್ಯಾಂಡ್ ಬಗ್ಗೆ ವಿಭಿನ್ನ ಕಥಾವಸ್ತುವನ್ನು ಚೊಚ್ಚಲು ನಿರ್ದೇಶನದ ಚಿತ್ರದಲ್ಲೇ ಕೈಗೆತ್ತಿಕೊಂಡ ಶ್ರೀಧರ್ ಅವರ ಧೈರ್ಯ.

ಆದರೆ ಚಿತ್ರ ಮಾತ್ರ ನಿರೀಕ್ಷಿಸಿದಷ್ಟು ಚೇತೋಹಾರಿಯಾಗಿಲ್ಲ. ಹಾಡುಗಳು ಮತ್ತು ಹಿನ್ನೆಲೆ ಸಂಗೀತವನ್ನು ಹೊರತುಪಡಿಸಿದರೆ ಚಿತ್ರದಲ್ಲಿ ಹೇಳಿಕೊಳ್ಳುವಂತಹ ಬೇರೆ ವಿಷಯವೇನೂ ಇಲ್ಲ. ನಿರ್ದೇಶಕ ಶ್ರೀಧರ್ ಇನ್ನಷ್ಟು ಶ್ರಮವಹಿಸಿ ಚಿತ್ರಕಥೆ ಬಿಗಿಗೊಳಿಸಬೇಕಿತ್ತು.

ಕಳೆದ ವರ್ಷ 'ಸೈಕೋ' ಚಿತ್ರ ಬಿಡುಗಡೆಯಾದಾಗಲೂ ಇದೇ ಕುತೂಹಲವಿತ್ತು. ಆಗಲೂ ಅಷ್ಟೇ, ಚಿತ್ರ ಫ್ಲಾಪ್ ಆಯಿತು ಆದರೆ ರಘುದೀಕ್ಷಿತ್ ಎಂಬ ಸಂಗೀತ ನಿರ್ದೇಶಕ ಕನ್ನಡ ಚಿತ್ರರಂಗಕ್ಕೆ ದೊರೆತ. ಈಗಲೂ 'ಕಾರಂಜಿ' ಸಿನಿಮಾ ಬಿದ್ದುಹೋಗುವ ಲಕ್ಷಣ ಕಾಣಿಸುತ್ತಿದೆ. ಆದರೆ ಸಂಗೀತ ನಿರ್ದೇಶಕ ವೀರಸಮರ್ಥ್ ಇಲ್ಲಿ ಛಾಪು ಮೂಡಿಸುವ ಸಾಧ್ಯತೆ ಇದೆ.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 01-07-2009 RNI No. KARKAN2005/1404

ಶ್ರುತಿ ಸ್ಥಾನಕ್ಕೆ ತಾರಾ?



ಬಿಜೆಪಿಯವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನದಿಂದ ಶ್ರುತಿಗೆ ಗೇಟ್‌ಪಾಸ್ ನೀಡಿದ್ದಾರೆ. ಅಲ್ಲಿಗೆ ಶ್ರುತಿ-ಮಹೇಂದರ್ ವಿಚ್ಛೇದನದ ಕತೆಗೆ ಒಂದು ಹೊಸ ರೂಪ ಬಂದಂತಾಗಿದೆ.

ಮಹೇಂದರ್‌ಗೆ 'ತಲಾಕ್' ನೀಡಿದ ನಂತರ ಟೀವಿ ಸಂದರ್ಶನಗಳಲ್ಲಿ ಶ್ರುತಿ "ಸದ್ಯಕ್ಕೆ ಯಡಿಯೂರಪ್ಪನವರು ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವುದಷ್ಟೇ ನನ್ನ ಮುಂದಿರುವ ಕೆಲಸ. ಈ ರಾಜ್ಯದ ಕಟ್ಟ ಕಡೆಯ ಮಗು ಮತ್ತು ಮಹಿಳೆಗೆ ಸರ್ಕಾರದ ಸೌಲಭ್ಯಗಳು ದೊರೆಯುವಂತೆ ಕಾರ್ಯನಿರ್ವಹಿಸುವುದೇ ನನ್ನ ಮುಂದಿರುವ ಏಕೈಕ ಗುರಿ...." ಎಂದು ಟಿಪಿಕಲ್ ರಾಜಕಾರಣಿ ತರಹ ಭಾಷಣ ಬಿಗಿದಿದ್ದರು.



ಅದೇ ಯಡಿಯೂರಪ್ಪ ಇಷ್ಟು ಬೇಗ ತನಗೆ ಗೇಟ್‌ಪಾಸ್ ನೀಡುತ್ತಾರೆ ಎಂದು ಶ್ರುತಿ ಕನಸುಮನಸಲ್ಲೂ ಊಹಿಸಿರಲಿಲ್ಲ. ಅತ್ತ ಶ್ರುತಿ ಕೈಯಲ್ಲಿ ಒಂದೇಒಂದು ಸಿನಿಮಾ ಕೂಡಾ ಈಗಿಲ್ಲ. ಇತ್ತ ಜನಸೇವೆ ಮಾಡೋಣವೆಂದರೆ ಅಧಿಕಾರವೂ ಕೈತಪ್ಪಿ ಹೋಗಿದೆ. ಹೀಗಾಗಿ ಶ್ರುತಿ ಅಕ್ಷರಶಃ ನಿರುದ್ಯೋಗಿಯಾಗಿದ್ದಾರೆ. ತನ್ನ ಹೊಸ ಪಾರ್ಟನರ್ ಚಂದ್ರಚೂಡ್ ಚಕ್ರವರ್ತಿ ಜೊತೆ ನವನವೀನ ಯೋಜನೆಗಳ ಬಗ್ಗೆ ಚರ್ಚಿಸಿ, ಸಮಾಲೋಚನೆ ಮಾಡಲು ಅವರಿಗೆ ಇದು ಸೂಕ್ತ ಸಮಯ!

ಒಂದು ರೀತಿಯಲ್ಲಿ ಕಣ್ಣೀರ ಚಿತ್ರಗಳ ಮುಖಾಂತರ ಪ್ರೇಕ್ಷಕರ ಹೃದಯವನ್ನು ಗೆದ್ದ ಅಳುಮುಂಜಿ ಶ್ರುತಿ ಈಗ ಸ್ವತಃ ತಾನೇ ಕಣ್ಣೀರು ಸುರಿಸುವ ಘಟ್ಟದಲ್ಲಿದ್ದಾರೆ. ಸರ್ಕಾರದ ಮಂಡಳಿಯ ಅಧ್ಯಕ್ಷ ಸ್ಥಾನ ತಪ್ಪಿಹೋಗಿರುವುದರಿಂದ ಶ್ರುತಿಯ ವೃತ್ತಿ ಬದುಕು, ವೈಯಕ್ತಿಕ ಹಾಗೂ ರಾಜಕೀಯ ಭವಿಷ್ಯ ನುಚ್ಚುನೂರಾಗಿದೆ.

ಅನುಕಂಪದ ಅಲೆಯಲ್ಲಿ ಮಹೇಂದರ್

ಇದಕ್ಕೆ ತದ್ವಿರುದ್ಧವಾಗಿ ನಿರ್ದೇಶಕ ಮಹೇಂದರ್ ಶ್ರುತಿ ನೀಡಿದ ಶಾಕ್‌ನಿಂದ ನಿಧಾನವಾಗಿ ಚೇತರಿಸಿಕೊಂಡು ಚಿತ್ರಜೀವನಕ್ಕೆ ಮರಳಿದ್ದಾರೆ. ಉದ್ಯಮದ ಬಹುತೇಕ ನಿರ್ಮಾಪಕರು ಮಹೇಂದರ್ ಪರ ಸಿಂಪಥಿ ವ್ಯಕ್ತಪಡಿಸಿ, ಹೊಸ ಅವಕಾಶಗಳನ್ನು ಅವರ ಕೈಗಿಟ್ಟಿದ್ದಾರೆ. ಇದರ ಫಲವಾಗಿ ಕಳೆದ ಎರಡು ಮೂರು ವರ್ಷಗಳಿಂದ ಸಿನಿಮಾಗಳಿಲ್ಲದೆ ಮೂಲೆಗುಂಪಾಗಿದ್ದ ಮಹೇಂದರ್ ಈಗ ಇದ್ದಕ್ಕಿದ್ದಹಾಗೆ ಬ್ಯುಸಿ ಡೈರೆಕ್ಟರ್ ಆಗುವ ಹಾದಿಯಲ್ಲಿದ್ದಾರೆ. ಮಹೇಂದರ್ ಅವರ ಪರಮಾಪ್ತ ಗೆಳೆಯ ರಮೇಶ್ ಯಾದವ್ ನಾಯಕ ನಟ ಶಿವರಾಜ್ ಕುಮಾರ್ ಅಭಿನಯದ 'ಹಾಡುಗಾರ' ಚಿತ್ರವನ್ನು ನಿರ್ದೇಶಿಸಲು ಮಹೇಂದರ್‌ಗೆ ಅವಕಾಶ ನೀಡಿದ್ದಾರೆ. ಮತ್ತೊಂದೆಡೆ 'ತಾಕತ್' ಚಿತ್ರದ ನಿರ್ಮಾಪಕರು 'ನೆನಪಿರಲಿ' ಪ್ರೇಮ್ ಚಿತ್ರವನ್ನು ನಿರ್ಮಿಸಲು ಹೊರಟಿದ್ದು ಅದರ ಜವಾಬ್ದಾರಿಯನ್ನು ಕೂಡಾ ಮಹೇಂದರ್‌ಗೆ ನೀಡಿದ್ದಾರೆ. ಮತ್ತೊಂದೆಡೆ ದುನಿಯಾ ವಿಜಯ್ ಸ್ವತಃ ಆಸಕ್ತಿಯನ್ನು ತೋರಿಸಿ ತನ್ನ ಚಿತ್ರವನ್ನು ನಿರ್ದೇಶಿಸಲು ಮಹೇಂದರ್‌ಗೆ ಪ್ರೀತಿಯ ಆಹ್ವಾನ ನೀಡಿದ್ದಾರೆ. ಅಲ್ಲಿಗೆ ಮಹೇಂದರ್ ಮುಂದಿನ ಒಂದು ವರ್ಷವಿಡೀ ಕೆಲಸ ಗಿಟ್ಟಿಸಿದಂತಾಯಿತು.

ಮತ್ತೆ ಕೊಳ್ಳೇಗಾಲಕ್ಕೆ?

ಅಷ್ಟೇ ಅಲ್ಲ, ರಾಜಕೀಯವಾಗಿ ಕೂಡಾ ಈಗ ಮಹೇಂದರ್ ಲಾಭವನ್ನು ಗಿಟ್ಟಿಸುವ ಸ್ಥಿತಿಯಲ್ಲಿದ್ದಾರೆ. ಶ್ರುತಿಯ ಗೇಟ್‌ಪಾಸ್‌ನಿಂದಾಗಿ ಆಕೆ ಬಿಜೆಪಿಯಲ್ಲಿ ಇನ್ನುಮುಂದೆ ಮತ್ತೆ ಲೈಮ್ ಲೈಟಿಗೆ ಬರುವುದು ಬಹಳ ಕಷ್ಟದ ಕೆಲಸ. ಈ ಮಧ್ಯೆ ಮುಂದಿನ ಆರು ತಿಂಗಳೊಳಗೆ ನಡೆಯಲಿರುವ ಕೊಳ್ಳೇಗಾಲ ಅಸೆಂಬ್ಲಿ ಕ್ಷೇತ್ರ ಚುನಾವಣೆಗೆ ಶ್ರುತಿಯನ್ನು ನಿಲ್ಲಿಸಬಹುದೆಂಬ ಊಹಾಪೋಹಕ್ಕೂ ತೆರೆಬಿದ್ದಿದೆ. ಈ ಕ್ಷೇತ್ರದಲ್ಲಿ ಮೊನ್ನೆ ಮಹೇಂದರ್ ಚುನಾವಣೆಗೆ ಸ್ಪರ್ಧಿಸಿ ಪರಾಭವಗೊಂಡಿದ್ದರು. ಆ ಕ್ಷೇತ್ರದ ಶಾಸಕ ಧ್ರುವನಾರಾಯಣ್ ಈಗ ಲೋಕಸಭೆಗೆ ಆಯ್ಕೆಯಾಗಿರುವುದರಿಂದ ಈಗ ಮತ್ತೆ ಚುನಾವಣೆ ನಡೆಯಬೇಕಾಗಿದೆ. ಸಹಜವಾಗಿ ಜನರ ಅನುಕಂಪ ಮಹೇಂದರ್ ಕಡೆಗಿರುವುದರಿಂದ ಬಿಜೆಪಿ ವರಿಷ್ಠರು ಮತ್ತೆ ಮಹೇಂದರ್‌ಗೇ ಸ್ಪರ್ಧಿಸಲು ಅವಕಾಶ ಕೊಟ್ಟರೂ ಆಶ್ಚರ್ಯಪಡಬೇಕಾಗಿಲ್ಲ.

ಚಿಗುರಿದ ತಾರಾ!



ಈ ಮಧ್ಯೆ ಶ್ರುತಿಯ ಸ್ಥಾನದಲ್ಲಿ ಮತ್ತೆ ಸಿನಿಮಾದ 'ತಾರೆ'ಯನ್ನೇ ಕುಳ್ಳಿರಿಸಲು ಬಿಜೆಪಿ ನಾಯಕರು ಚಿಂತೆ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಶ್ರುತಿಯನ್ನು ಅವಮಾನಿಸಿದ್ದರಿಂದ ನಾಳೆ ಸಿನಿಮಾದ ಜನ ತಮ್ಮ ವಿರುದ್ಧ ತಿರುಗಿಬೀಳಬಾರದು ಎಂಬ ದೂರದೃಷ್ಟಿ. ಹೀಗಾಗಿ ಈಗ ಸಹಜವಾಗಿ ಆ ಸ್ಥಾನಕ್ಕೆ ಬಿಜೆಪಿಯ ಸಕ್ರಿಯ ಕಾರ್ಯಕರ್ತೆಯಾದ ನಟಿ ತಾರಾ ಹೆಸರು ಕೇಳಿಬರುತ್ತಿದೆ. ಮೊನ್ನೆಯ ಲೋಕಸಭಾ ಚುನಾವಣೆಗೆ ಮೊದಲು ತಾರಾ ಅಧಿಕೃತವಾಗಿ ಬಿಜೆಪಿ ಸೇರಿಕೊಂಡು ರಾಜ್ಯಾದ್ಯಂತ ಚುನಾವಣಾ ಪ್ರಚಾರದಲ್ಲಿ ಬೆವರು ಸುರಿಸಿದ್ದರು. ಈಗ ಆ ಬೆವರಿಗೆ ಬೆಲೆಬರುವ ಕಾಲ ಸನ್ನಿಹಿತವಾಗಿದೆ. ತಾರಾ ಕೂಡಾ ವಿಧಾನಸೌಧದ ಅಕ್ಕಪಕ್ಕ ಹೆಚ್ಚುಹೆಚ್ಚು ಕಾಣಿಸಿಕೊಳ್ಳಲಾರಂಭಿಸಿದ್ದಾರೆ.

ಪ್ರಮೀಳೆಯ ಅಡ್ಡಗಾಲು!



ಶ್ರುತಿಗೆ ತಪ್ಪಿಹೋದ ಕೆಂಪು ಗೂಟದ ಕಾರು ತಾರಾಗೆ ಸದ್ಯದಲ್ಲೇ ಸಿಗುವ ಮಾತು ವಿಧಾನಸೌಧದ ಕಾರಿಡಾರುಗಳಲ್ಲಿ ಮಾರ್ದನಿಸುತ್ತಿದೆ. ಅಂತೂಇಂತೂ ಶ್ರುತಿ ಪಾಲಿಗೆ ಬಂದ ಅದೃಷ್ಟ ಅಷ್ಟೇ ಬೇಗ ನಾಮಾವಶೇಷಗೊಂಡಿದ್ದು, ಹಾಗೆಯೇ ತಾರಾಳಿಗೆ ದಿಢೀರನೆ ಅದೃಷ್ಟ ಖುಲಾಯಿಸಿದ್ದು..... ಎಲ್ಲವೂ ಒಂದು ಸಿನಿಮಾ ಕಥೆ ಥರ ಕಾಣಿಸುತ್ತಿದೆ. ಆ ಈ ಕಥೆಗೆ ಇನ್ನೊಂದು ತಿರುವ ಸಿಗುವ ಸೂಚನೆಯೂ ಕಾಣಿಸುತ್ತಿದೆ! ಅದೇನೆಂದರೆ, ತಾರಾಳಿಗಿಂತ ಮೊದಲು ಬಿಜೆಪಿ ಸೇರಿದ ಪ್ರಮೀಳಾ ಜೋಷಾಯ್ ಹೆಸರೂ ಕೂಡ ಈ ಹುದ್ದೆಗೆ ಕೇಳಿಬಂದಿರುವುದು. ಈಕೆ ಕ್ರೈಸ್ತ ಜನಾಂಗಕ್ಕೆ ಸೇರಿರುವುದರಿಂದ ಬಿಜೆಪಿ ಕ್ರಿಶ್ಚಿಯನ್ ವಿರೋಧಿಯಲ್ಲ ಎಂದು ತೋರಿಸಿಕೊಡಲು ಈಕೆಗೇ ಅಧ್ಯಕ್ಷ ಸ್ಥಾನ ನೀಡುವ ಬಗ್ಗೆಯೂ ಬಿಜೆಪಿಯ ಹಿರಿಯರು ಚರ್ಚಿಸುತ್ತಿದ್ದಾರೆ. ತಮಾಷೆಯೆಂದರೆ, ತಾರಾ ಮತ್ತು ಪ್ರಮೀಳಾ ಜೋಷಾಯ್ ನೆರೆಹೊರೆಯವರು ಮಾತ್ರವಲ್ಲ, ಅನೇಕ ಬಾರಿ ಸಿಲ್ಲಿ ವಿಷಯಗಳಿಗಾಗಿ ಜಗಳವಾಡಿ 'ಜಗತ್ ಪ್ರಸಿದ್ಧಿ' ಪಡೆದವರು. ಈಗ ದೊಡ್ಡ ಸ್ಥಾನಕ್ಕಾಗಿ ಮತ್ತೊಮ್ಮೆ ಅವರಿಬ್ಬರೂ ಕಚ್ಚಾಡುವ ಸ್ಥಿತಿ ಬಂದಿರುವುದು ಆಶ್ಚರ್ಯವೋ, ವಿಪರ್ಯಾಸವೋ? ತಿಳಿಯುತ್ತಿಲ್ಲ.



ಕೊನೆಮಾತು: ಅದೇನೇ ಇರಲಿ, ಶ್ರುತಿ ಮೂಲತಃ ಜೀವನದಲ್ಲಿ ಅತ್ಯಂತ ಕಷ್ಟಪಟ್ಟು ತನ್ನ ಸ್ವಂತ ಪ್ರತಿಭೆಯಿಂದ ಯಶಸ್ಸಿನ ಒಂದೊಂದೇ ಮೆಟ್ಟಲೇರಿದ ನಟಿ. ಹೀಗಾಗಿ ಆಕೆಯನ್ನು ಅಷ್ಟು ಸುಲಭವಾಗಿ ನಿರ್ಲಕ್ಷಿಸುವಂತಿಲ್ಲ. ಆಕೆ ಮತ್ತು ಚಂದ್ರಚೂಡ್ ನಿರ್ಮಿಸಲಿರುವ ಆಕೆಯ ಜೀವನಕಥೆಯ ಸಿನಿಮಾದಲ್ಲಿ ಇವೆಲ್ಲ ಅಧ್ಯಾಯಗಳೂ ಅಡಕಗೊಳ್ಳಬಹುದೋ ಏನೋ? ಒಟ್ಟಾರೆಯಾಗಿ ಒಂದು ತಿಂಗಳ ಅವಧಿಯಲ್ಲಿ ಶ್ರುತಿ ಹಲವಾರು ಅವತಾರಗಳಲ್ಲಿ ಕಾಣಿಸಿಕೊಂಡರು. ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದಾಗ ಆಕೆಯ ಬಗ್ಗೆ ಸಿಂಪಥಿ; ಮರುದಿನ ಆಕೆಯ 'ಚಂದ್ರಯಾನ'ದ ವಿವರ ಬಂದಾಗ ಅಸಹ್ಯ, ಈಗ ರಾಜಕೀಯ ನಿರ್ಗತಿಕತೆ ಮತ್ತೊಂದು ಚರ್ಚೆಗೆ ದಾರಿಮಾಡಿದೆ.

● ಶೆಣೈ



ಜಗನ್ಮೋಹಿನಿಯರ ಝುಲಕ್ಕು.....

ಮೈ ಕುಲುಕ್ಕು...!

ಮೂರು-ನಾಲ್ಕು ದಶಕಗಳ ಹಿಂದೆ ಯುವಕರ ಮೈನವಿರೇಳಿಸುವಂತೆ ಕುಣಿಯುತ್ತಲೇ ಹೆಸರು ಮಾಡಿದ್ದ ಅಂದಗಾಲತ್ತಿಲ್ ಕ್ಲಬ್ ಡ್ಯಾನ್ಸರ್ ಜ್ಯೋತಿಲಕ್ಷ್ಮಿ ಮತ್ತು ದಕ್ಷಿಣ ಭಾರತದ ಸದ್ಯದ ಸೆಕ್ಸ್ ಬಾಂಬ್ ನಮಿತಾ ಈಗ ಒಂದಾಗಿದ್ದಾರೆ.

ಸುಮಾರು ನಲವತ್ತು ವರ್ಷಗಳ ಹಿಂದೆ ತೆಲುಗಿನಲ್ಲಿ ಖ್ಯಾತ ನಿರ್ದೇಶಕ ವಿಠಲಾಚಾರ್ಯ ಅವರು ಎನ್.ಟಿ.ಆರ್ ಮತ್ತು ಅಕ್ಕಿನೇನಿ ನಾಗೇಶ್ವರ್ ರಾವ್ ಅಭಿನಯದಲ್ಲಿ ತಯಾರಿಸಿದ್ದ 'ಜಗನ್ಮೋಹಿನಿ' ಎಂಬ ಪೌರಾಣಿಕ ಚಿತ್ರವನ್ನೇ ಮತ್ತೊಮ್ಮೆ ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಮರುಸೃಷ್ಟಿಗೊಳಿಸಲಾಗುತ್ತಿದೆ.

ಎನ್. ಕೆ. ವಿಶ್ವನಾಥನ್ ಎಂಬಾತ ನಿರ್ದೇಶಿಸುತ್ತಿರುವ ಈ ಮಾಡ್ರನ್ 'ಜಗನ್ಮೋಹಿನಿ'ಯಲ್ಲಿ ನಮಿತಾ ನಾಯಕಿಯಾದರೆ, ಅಂದಿನ ನರ್ತಕಿ ಜ್ಯೋತಿಲಕ್ಷ್ಮಿ ಆಕೆಯ ತಾಯಿಯಾಗಿ ನಟಿಸುತ್ತಿದ್ದಾರೆ. ಬರೀ ನಟಿಸಿದ್ದರೆ ಪರವಾಗಿಲ್ಲ, ಆದರೆ ಈ ವಯಸ್ಸಿನಲ್ಲೂ ಜ್ಯೋತಿಲಕ್ಷ್ಮಿ, ನಮಿತಾಳೊಂದಿಗೆ ಪೈಪೋಟಿಗೆ ಬಿದ್ದವರಂತೆ ಎಕ್ಸ್‌ಪೋಸ್ ಮಾಡಿ, ಮೈ ಕುಲುಕಿಸಿ ಚಿತ್ರರಸಿಕರ ಮನಸ್ಸಿನಲ್ಲಿ ಕಿಚ್ಚು ಹತ್ತಿಸಿದ್ದಾರೆ. ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44